ಜನಶಕ್ತಿ
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ
ಸಂಪುಟ 19 ಸಂಚಿಕೆ 32 ಆಗಸ್ಟ್ 4-10, 1997 ಬೆಲೆ ರೂ. 2.00



ಕೊನೆಗೂ ಲಾಲೂ ರಾಜೀನಾಮೆ - ಜೈಲಿನಲ್ಲಿ

950 ಕೋಟಿ ರೂ.ಗಳ ಮೇವು ಹಗರಣದಲ್ಲಿ ಒಬ್ಬ ಆರೋಪಿಯಾಗಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವುದಿಲ್ಲ, ಜೈಲಿಗೆ ಕಳಿಸಿದರೆ ಅಲ್ಲಿಂದಲೇ ಬಿಹಾರ ರಾಜ್ಯವನ್ನಾಳುತ್ತೇನೆ ಎಂದು ಅಬ್ಬರಿಸಿದ ಲಾಲೂ ಪ್ರಸಾದ್ ಯಾದವ್ ಕೊನೆಗೂ ರಾಜೀನಾಮೆ ನೀಡಿದ್ದಾರೆ, ಜೈಲಿಗೆ ಹೋಗಿದ್ದಾರೆ. ಹೈಕೋರ್ಟ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದಾಗ, ಸುಪ್ರೀಂ ಕೋರ್ಟಿಗೆ ಹೋದರು. ಅದೂ ತಿರಸ್ಕರಿಸಿದಾಗ ಇನ್ನೇನು ಬಂಧನವನ್ನು ತಪ್ಪಿಸಲಾಗದು ಎಂದು ಖಚಿತವಾದಾಗ ನಿರ್ವಾಹವಿಲ್ಲದೆ ಮುಖ್ಯಮಂತ್ರಿ ಸ್ಥಾನ ದಿಂದ ಇಳಿದರು; ಆದರೆ ಇನ್ನೊಂದು ಸಿನಿಕ ಆಟವಾಡಿ ತಮ್ಮ ಪತ್ನಿಯನ್ನು ಮುಖ್ಯ ಮಂತ್ರಿ ಸ್ಥಾನದಲ್ಲಿ ಕುಳ್ಳಿರಿಸಿ ಹೋದರು.

ಮಾರ್ಚ್ 1996 ರಲ್ಲಿ ಪಾಟ್ನಾ ಹೈಕೋರ್ಟ್ ಮೇವು ಹಗರಣ ಕುರಿತಂತೆ ಸಿಬಿಐ ತನಿಖೆಗೆ ಆದೇಶ ನೀಡಿದಂದಿನಿಂದ ನಡೆದ ಘಟನೆಗಳು ಸಾರ್ವಜನಿಕ ನಿಧಿಯಿಂದ 950 ಕೋಟಿ ರೂಗಳನ್ನು ನುಂಗಿ ಹಾಕಿದ ಈ ಹಗರಣದಲ್ಲಿ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ರ ಮೇಲೆ ಬೊಟ್ಟು ಮಾಡುವ ಸಂಗತಿಗಳು ಹೆಚ್ಚಾಗಿ ಕಂಡುಬರ ಲಾರಂಭಿಸಿದವು. ಲಾಲೂ ಪ್ರಸಾದ್ ಯಾದವ್ ಒಂದು ನಿಷ್ಪಕ್ಷಪಾತ ಹಾಗೂ ಆಮೂಲಾಗ್ರ ತನಿಖೆಯನ್ನು ತಪ್ಪಿಸಲು ಶತಪ್ರಯತ್ನ ಪಟ್ಟರು. ಸಿಬಿಐ ತನಿಖೆಯನ್ನು ವಿರೋಧಿಸಿದರು; ವಿಚಾರಣೆಯನ್ನು ಒಂದು ವಿಧಾನ ಸಭಾ ಸಮಿತಿ ಒಪ್ಪಿಸಲು ಪ್ರಯತ್ನಿಸಿದರು. ಈ ಸಮಿತಿಯಲ್ಲಿ ಆರೋಪ ಕ್ಕೊಳಗಾದ ಎಂ.ಎಲ್.ಎ.ಗಳೂ ಸದಸ್ಯ ರಾಗಿರುವ ಸಂಭವವಿತ್ತು! ಆರೋಪಿಗಳ ಪಟ್ಟಿಯಲ್ಲಿ ಸಿಬಿಐ ತನ್ನ ಹೆಸರನ್ನು ಸೇರಿಸದಂತೆ ಮಾಡಲು ಅವರು ಕೇಂದ್ರದ ಸಂಯುಕ್ತ ರಂಗ ಸರಕಾರವನ್ನು ಒಲಿಸಲು, ಬೆದರಿಸಲು ಪ್ರಯತ್ನಿಸಿದರು. ಈ ಹಗರಣವನ್ನು ಮುಚ್ಚಿ ಹಾಕುವ ಈ ಎಲ್ಲಾ ಹತಾಶ ಪ್ರಯತ್ನಗಳು ಈ ಬೃಹತ್ ವಂಚನೆಯಲ್ಲಿ ಅವರ ಪಾತ್ರವಿದೆ ಯೆಂಬುದನ್ನು ಬಯಲಿಗೆಳೆಯಿತಷ್ಟೆ.

ಸಾಧನೆಗಳನ್ನು ಅಳಿಸಿ ಹಾಕಿದ ಸ್ವಾರ್ಥ

ಕೊನೆಗೂ ಲಾಲೂ ಪ್ರಸಾದ್ ಯಾದವ್ ರಾಜೀನಾಮೆ ಕೊಡಲೇಬೇಕಾಗಿ ಬಂತು. ಆದರೆ ಹೀಗೆ ರಾಜೀನಾಮೆ ಕೊಟ್ಟು ಜೈಲಿಗೆ ಹೋಗಲೇಬೇಕಾಗಿ ಬಂದಾಗ ಇನ್ನೊಂದು ಸಿನಿಕತನ ಪ್ರದರ್ಶಿಸಿ ದರು, ಎಲ್ಲಾ ಪ್ರಜಾಪ್ರಭುತ್ವ ವಿಧಿವಿಧಾನಗಳ ಅಪಹಾಸ್ಯಕ್ಕಿಳಿದರು. ಆರೋಪ ಪತ್ರ ಹಾಕಿದಾಗ ಮುಖ್ಯಮಂತ್ರಿ ಸ್ಥಾನದಿಂದ ಇಳಿಯಲು ನಿರಾಕರಿಸಿ, ಈಗ ತನ್ನ ಪತ್ನಿ ರಾಬ್ಡಿದೇವಿ ಯವರನ್ನು ಆರ್.ಜೆ.ಡಿ. ಶಾಸಕಾಂಗ ಪಕ್ಷದ ಮುಖಂಡರನ್ನಾಗಿ ಆರಿಸಿ, ಮುಖ್ಯಮಂತ್ರಿಯನ್ನಾಗಿ ಮಾಡಿ ಅವರು ತಾನು ಎಂತಹ ಸ್ವಾರ್ಥಿ, ವೈಯುಕ್ತಿಕ ಲಾಭಕ್ಕಾಗಿ ಏನೂ ಮಾಡಲು ಸಿದ್ಧ ಎಂಬುದನ್ನು ತೋರಿಸಿ ಕೊಂಡರು. ಈ ಪ್ರಕ್ರಿಯೆಯಲ್ಲಿ ಕೋಮುವಾದದ ವಿರುದ್ಧ ಹೋರಾಟದಲ್ಲಾಗಲೀ, ಹಿಂದುಳಿದ ಜಾತಿಗಳ ನ್ಯಾಯಕ್ಕಾಗಿ ಹೋರಾಟ ದಲ್ಲಾಗಲೀ ಅವರ ಸಾಧನೆಗಳೆಲ್ಲಾ ಸಂಪೂರ್ಣ ಅಳಿಸಿಹೋಗುವಂತಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರೆಸಿ' ಟಿಪ್ಪಣಿ ಮಾಡಿದೆ.

ರಾಬ್ಡಿ ದೇವಿಯವರು ಮುಖ್ಯಮಂತ್ರಿಯಾಗಿರುವುದನ್ನು ಅವರು ಅಶಿಕ್ಷಿತರೆಂದಾಗಲೀ, ಇದುವರೆಗೆ ಮನೆವಾರ್ತೆ ನೋಡಿಕೊಳ್ಳುತ್ತಿದ್ದ ಮಹಿಳೆ ಎಂಬ ಕಾರಣಕ್ಕಾಗಲೀ ಪ್ರಜಾ ಪ್ರಭುತ್ವವಾದಿಗಳು ವಿರೋಧಿಸುತ್ತಿಲ್ಲ ಎಂದು ಸಿಪಿಐ(ಎಂ) ಮುಖಂಡರು ಸ್ಪಷ್ಟಪಡಿಸಿದ್ದಾರೆ. ಆಕೆಯ ಸರಕಾರ ಭ್ರಷ್ಟಾಚಾರದ ಬಹಿರಂಗ ಸಮರ್ಥನೆಯ ಪ್ರಯತ್ನದಲ್ಲಿ ಮೂಡಿಬಂದ ಸರಕಾರ ಎಂಬ ಕಾರಣಕ್ಕೆ ಆಕೆಯ ಸರಕಾರವನ್ನು ಖಂಡಿಸಬೇಕಾಗಿದೆ. ಅದನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮುಗಿಸಬೇಕು. ಏಕೆಂದರೆ ಆಕೆಯ ಈ ಸರಕಾರದಿಂದಾಗಿ ಸಾಮಾಜಿಕ ನ್ಯಾಯದ ವೇದಿಕೆಯೆಂಬುದು ಒಬ್ಬ ದುಷ್ಟ, ಭ್ರಷ್ಟ ಮುಖಂಡನ ಅಹಂಕಾರವನ್ನು ಸಮರ್ಥಿಸಿ ಕೊಳ್ಳುವ ಕೀಳು ಮಟ್ಟಕ್ಕೆ ಇಳಿದಿದೆ. ಹಿಂದುಳಿದ ವರ್ಗಗಳ ಮುಖಂಡರನ್ನು ಬೇರೆಯೇ ರೀತಿಯಲ್ಲಿ ಕಾಣಬೇಕು ಎಂಬ ಅರ್ಥಹೀನ ತರ್ಕ ನಿಜವಾಗಿಯೂ ಈಗ ಕಾಣಬರುತ್ತಿರುವ ಅಪಮಾರ್ಗದ ಒಂದು ಲಕ್ಷಣವೇ ಸರಿ. ಇದೊಂದು ಅಸಂಬದ್ಧ ತರ್ಕ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಬೃಹತ್ ಸಂಪುಟ-ಅಧೋಗತಿಗೆ ಸಾಕ್ಷಿ

ರಾಬ್ಡಿದೇವಿಯ 74 ಸದಸ್ಯರ ಬೃಹತ್ ಸಚಿವ ಸಂಪುಟವೇ ಲಾಲೂ ಯಾದವ್‌ರ ಕೃಪಾಪೋಷಣೆಯಲ್ಲಿ ಸಾರ್ವಜನಿಕ ಜೀವನ ಎಂತಹ ಅಧೋಗತಿಗಿಳಿದಿದೆ ಎಂಬುದಕ್ಕೆ ಸಾಕ್ಷಿ. ಆರ್.ಜೆ.ಡಿ. ಶಾಸಕಾಂಗ ಪಕ್ಷದ ಸದಸ್ಯ ಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಮಂದಿ ಮಂತ್ರಿಗಳು! ಕೋಮುವಾದದ ವಿರುದ್ಧದ ಹೋರಾಟದ ಹೆಸರಲ್ಲಿ ಈ ಕೀಳು ಸಮಯಸಾಧಕತನವನ್ನು ಒಪ್ಪುವುದೆಂದರೆ ಸಮರದ ಟ್ರೋಫಿಯನ್ನು ಬಿಜೆಪಿಗೆ ನಾವಾಗಿಯೇ ಒಪ್ಪಿಸಿದಂತೆ ಎಂದು ವಿಶ್ಲೇಷಿಸಿರುವ ಪೀಪಲ್ಸ್ ಡೆಮಾಕ್ರೆಸಿ ಇಂತಹ ರಾಜಿ ಎಂದೂ ಸಲ್ಲದು ಎಂದಿದೆ.

ರಾಬ್ಡಿದೇವಿ ಮಂತ್ರಿಮಂಡಲಕ್ಕೆ ಕಾಂಗ್ರೆಸ್‌ನ ಅಖಂಡ ಬೆಂಬಲ ದೊರೆತಿದೆ. ಭ್ರಷ್ಟಾಚಾರದಲ್ಲಿ ಸಿಲುಕಿಕೊಂಡ ಯಾವುದೇ ರಾಜಕೀಯ ಮುಖಂಡನ ರಕ್ಷಣೆಗೆ ಕಾಂಗ್ರೆಸ್ ಮುಖಂಡತ್ವ ತಪ್ಪದೇ ಧಾವಿಸುತ್ತದೆ! ಪೆಟ್ರೋಲ್ ಪಂಪ್‌ಗಳ ಮಾರಾಟ, ತೈಲ ಕ್ಷೇತ್ರಗಳ ಮಾರಾಟ, ಸರಕಾರಿ ವಸತಿಗಳ ಮಾರಾಟ, ರಕ್ಷಣಾ ಕಾಂಟ್ರಾಕ್ಟ್‌ಗಳ ಮಾರಾಟ ಹೀಗೆ ಎಲ್ಲಾ ರೀತಿಯ ಮಾರಾಟಗಳಲ್ಲಿ, ಭ್ರಷ್ಟಾಚಾರಗಳ ಆಪಾದನೆಗಳಲ್ಲಿ ವಿಶಾಲವಾದ, ಆಳವಾದ ಅನುಭವವಿರುವವರಿಗಿಂತ ಆದರ್ಶ ಸಲಹ ಕಾರರು ಲಾಲೂ ಯಾದವರಿಗೆ ಯಾರು ಸಿಕ್ಕಾರು ಎಂದು ಸಿಪಿಐ(ಎಂ) ವಾರಪತ್ರಿಕೆ ವ್ಯಂಗ್ಯವಾಡಿದೆ.

ಕಾಂಗ್ರೆಸ್ ಬುದ್ಧಿವಾದಕ್ಕೆ, ಕಿವಿಗೊಡಬೇಡಿ, ಜೋಕೆ!

ಆರ್.ಜೆ.ಡಿ. ಮಂತ್ರಿಮಂಡಲವೆಂಬ ಈ ತಮಾಷೆಯನ್ನು ನಿರಂತರವಾಗಿ ಬಯಲಿಗೆಳೆಯಬೇಕು, ಬಿಹಾರದಲ್ಲಿ ಆಂದೋಲನ ಇನ್ನಷ್ಟು ತೀವ್ರಗೊಳಿಸಬೇಕು ಎಂದು ಸಿಪಿಐ(ಎಂ) ಮುಖಂಡರು ಕರೆ ನೀಡಿದ್ದಾರೆ. ಜನತಾದಳ ಮುಖಂಡರೂ ಎಡ ಪಕ್ಷಗಳೊಂದಿಗೆ ಜನಗಳನ್ನು ಅಣಿನೆರೆಸುವ ಕೆಲಸಕ್ಕೆ ಧುಮುಕಬೇಕು.

ಕೊನೆಗೂ ಲಾಲೂ ಈ ಹಗರಣದಲ್ಲಿ ನ್ಯಾಯಾಂಗ ಕಸ್ಟಡಿಗೆ ಹೋಗಿ ರಾಬ್ಡಿ ದೇವಿ ಅಧಿಕಾರ ಪೀಠದಲ್ಲಿ ಕೂತಿರುವಾಗ ಕೇಂದ್ರ ಸಂಪುಟದಲ್ಲಿ ಕೂತಿರುವ ಮೂವರು ಆರ್.ಜೆ.ಡಿ. ಮಂತ್ರಿಗಳನ್ನೂ ಮರೆಯು ವಂತಿಲ್ಲ. ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಬದ್ಧವಾಗಿರುವ ಸಂಯುಕ್ತ ರಂಗದೊಳಗೆ ಭ್ರಷ್ಟಾಚಾರವನ್ನು ಬಹಿರಂಗ ವಾಗಿ ಸಮರ್ಥಿಸಿ ಕೊಳ್ಳುವ ಮಂತ್ರಿಗಳಿಗೆ ಹೇಗೆ ತಾನೇ ಸ್ಥಾನವಿರಲುಸಾಧ್ಯ? ನಿಜ ಸೀತಾರಾಂ ಕೇಸರಿ ಮತ್ತು ಇತರ ಕಾಂಗ್ರೆಸ್ ಮುಖಂಡರು ಈ ವೈರುಧ್ಯವನ್ನು ಸಹಿಸಿ ಕೊಳ್ಳಬೇಕು ಎಂದು ಬುದ್ಧಿವಾದ ಹೇಳಬಹುದು. ಆದರೆ ಈ 'ಬುದ್ಧಿವಾದ'ಕ್ಕೆ ಕಿವಿಗೊಡುವುದು ಪ್ರಧಾನ ಮಂತ್ರಿಗಳಿಗೆ ಬುದ್ಧಿವಂತಿಕೆಯ ಕೆಲಸವಾಗಲಾರದು, ಅದು ಅಪಾಯಕಾರಿಯಾಗಬಹುದು ಎಂದು ಸಿಪಿಐ(ಎಂ) ಎಚ್ಚರಿಸಿದೆ.

ರಾಜ್ಯದ ದುಡಿಯುವ ಜನತೆಗೆ ಅಭಿನಂದನೆ


ಎಸ್.ಕೆ.ಉಪಾಧ್ಯಾಯ

ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ರಾಷ್ಟ್ರೀಯ ಪ್ರಚಾರಾಂದೋಲನ ನಡೆಸಿ, ಆಡಳಿತ ನಡೆಸುತ್ತಿರುವ ಸಂಯುಕ್ತ ರಂಗದ ಮಂತ್ರಿಮಂಡಲ ತನ್ನ ನೀತಿಯಲ್ಲಿ ಬದಲಾವಣೆ ತಂದು ಜನಪರ ಧೋರಣೆಯನ್ನು ಅನುಸರಿಸುವಂತೆ ಮಾಡಬೇಕೆಂಬ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಕರೆಯಂತೆ 25-7-97 ರಂದು ಬೆಂಗಳೂರಿನಲ್ಲಿ ನಡೆದ ರ್ಯಾಲಿಯನ್ನು ಅತ್ಯಂತ ಯಶಸ್ವಿಗೊಳಿಸಿದ ರಾಜ್ಯದ ದುಡಿಯುವ ಜನತೆಗೆ ಹಾಗೆಯೇ ರಾಜ್ಯದ ಮೂಲೆ ಮೂಲೆಗಳಿಂದ ದುಡಿಯುವ ಜನ ಸಕ್ರಿಯವಾಗಿ ಬೆಂಗಳೂರು ರ್ಯಾಲಿಯಲ್ಲಿ ಭಾಗವಹಿಸುವಂತೆ ಶ್ರಮಿಸಿದ ಎಲ್ಲಾ ಜಿಲ್ಲಾ ಮತ್ತು ಪ್ರಾದೇಶಿಕ ಸಮಿತಿ ಹಾಗೂ ಪಾರ್ಟಿಯ ಘಟಕಗಳಿಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿನಂದನೆಯನ್ನು ಸಲ್ಲಿಸುತ್ತದೆ.

ಸುಳ್ಳು ಆಶ್ವಾಸನೆಗಳಿಂದ ಜನರಿಗೆ ಮೋಸಮಾಡಿ ಚುನಾವಣೆಯಲ್ಲಿ ಆರಿಸಿ ಬಂದು, ಜನರ ಆಶೋತ್ತರಗಳಿಗೆ ಸ್ಪಂದಿಸದೆ, ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಂಡುಹಿಡಿಯುವುದರಲ್ಲಿ ವಿಫಲವಾಗಿರುವುದು ಮಾತ್ರವಲ್ಲ, ಹಿಂದಿನ ನರಸಿಂಹರಾವ್ ಸರಕಾರ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕಿನ ಒತ್ತಡಕ್ಕೆ ಮಣಿದು ಉದಾರೀಕರಣ ನೀತಿಯನ್ನನುಸರಿಸುತ್ತಾ ವಿದೇಶಿ ಬಂಡವಾಳ ನಮ್ಮ ಆರ್ಥಿಕತೆಯ ಮೇಲೆ ಮುಗಿಬಿದ್ದು, ದೇಶದ ಸಾರ್ವಭೌಮತ್ವಕ್ಕೆ ಅಪಾಯವನ್ನುಂಟುಮಾಡಿದಾಗ ಹೋದ ಲೋಕಸಭೆ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರ ಗ್ರಹಣ ಮಾಡದಂತೆ ಮಾಡಿದ್ದರು. ಕೋಮುವಾದಿ ಬಿ.ಜೆ.ಪಿ ಹಿಂದುತ್ವದ ಪ್ರಚಾರದಿಂದಾಗಿ ದೊಡ್ಡ ಪಕ್ಷವಾಗಿ ಆರಿಸಿಬಂದರೂ ಕೇವಲ ಹದಿಮೂರು ದಿವಸ ಅಧಿಕಾರ ನಡೆಸಿ ಸೋಲಬೇಕಾಯಿತು. ದೇಶ ಮತ್ತು ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಪರ್ಯಾಯ ವ್ಯವಸ್ಥೆ ಬೇಕು, ಬಿ.ಜೆ.ಪಿ ಮತ್ತು ಕಾಂಗ್ರೆಸ್ಸನ್ನು ಹೊರಗಿಟ್ಟು, ಇವುಗಳೆರಡನ್ನೂ ವಿರೋಧಿಸಿ ಜನರೆದುರಿಸುತ್ತಿರುವ ಸಮಸ್ಯೆಗಳಿಗೆ ಸ್ವಲ್ಪಮಟ್ಟಿಗಾದರೂ ಪರಿಹಾರ ಒದಗಿಸಬೇಕೆಂಬ ಉದ್ದೇಶದಿಂದ ಬಿ.ಜೆ.ಪಿ-ಕಾಂಗ್ರೆಸ್‌ಗಳನ್ನು ವಿರೋಧಿಸುವ, ಜಾತ್ಯಾತೀತ ಪ್ರಜಾಪ್ರಭುತ್ವ ಪಕ್ಷ ಮತ್ತು ಶಕ್ತಿಗಳನ್ನೆಲ್ಲಾ ಒಂದೆಡೆ ಸೇರಿಸಿ ಒಂದು ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ ಸಂಯುಕ್ತ ರಂಗ ರಚಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಶತ ಪ್ರಯತ್ನ ಮಾಡಿ ಯಶಸ್ವಿಯಾಯಿತು. ಸಂಯುಕ್ತರಂಗ ಸರಕಾರವನ್ನು ರಚಿಸಲಾಯಿತು.

ಆದರೆ ಸಂಯುಕ್ತರಂಗದಲ್ಲಿರುವ ಚಿದಂಬರಂ ಮೊದಲಾದ ಮಂತ್ರಿಗಳು ಕನಿಷ್ಠ ಕಾರ್ಯಕ್ರಮದ ನಿರ್ದೇಶನಗಳನ್ನುಲ್ಲಂಘಿಸಿ ಹಿಂದಿನ ನರಸಿಂಹರಾವ್ ಸರಕಾರದ ಆರ್ಥಿಕ ನೀತಿಯನ್ನೇ ಮುಂದುವರಿಸಿಕೊಂಡು ಹೋಗುವುದರ ವಿರುದ್ಧ, ಹಾಗೇಯೇ ಕನಿಷ್ಠ ಕಾರ್ಯಕ್ರಮದಲ್ಲಿರುವ ಜನಪರ ನೀತಿಯನ್ನು ಅನುಷ್ಠಾನದಲ್ಲಿ ತರಬೇಕೆಂದು ಒತ್ತಾಯಿಸಲು ಸಂಯುಕ್ತರಂಗ ಚಾಲನಾ ಸಮಿತಿಯಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಪ್ರಯತ್ನ ಸಫಲವಾಗದಾದಾಗ, ದೇವೇಗೌಡ ಮತ್ತು ಗುಜರಾಲ್ ಸರಕಾರಗಳು ಕಾಂಗ್ರೆಸ್ ನೀತಿಗಳನ್ನೇ ಮುಂದುವರಿಸಿದ್ದರಿಂದಾಗಿ ಜನರಲ್ಲಿ ಭ್ರಮನಿರಸನ ಉಂಟಾದಾಗ, ಅದರ ಅಪಾಯವನ್ನು ಮನಗಂಡ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಯುಕ್ತ ರಂಗ ತನ್ನ ನೀತಿಯಲ್ಲಿ ಬದಲಾವಣೆ ತಂದು ಕನಿಷ್ಠ ಕಾರ್ಯಕ್ರಮದಲ್ಲಿರುವ ನಿರ್ದೇಶನದಂತೆ ಆಡಳಿತ ನಡೆಸುವಂತೆ ಒತ್ತಾಯಿಸಲು ದೇಶಾದ್ಯಂತ ಪ್ರಬಲವಾದ ರೀತಿಯಲ್ಲಿ ರಾಜಕೀಯ ಪ್ರಚಾರಾಂದೋಲನ ನಡೆಸಬೇಕೆಂದೂ ಸಂಯುಕ್ತರಂಗ ರಚನೆಯ ಮಹತ್ವ, ಕನಿಷ್ಠ ಕಾರ್ಯಕ್ರಮ ಹಾಗೂ ಸಿಪಿಐ(ಎಂ) ಪಕ್ಷದ ನಿಲುವನ್ನು ಕುರಿತು ಜನವಿಭಾಗಕ್ಕೆ ತಿಳಿಯ ಹೇಳಿ, ಜನರ ಮಧ್ಯೆ, ಮನೆ ಮನೆಗೆ ಹೋಗಿ ನಮ್ಮ ಪಕ್ಷದ ನಿಲುಮೆಯನ್ನು ಪ್ರಚಾರಮಾಡಿ, ಜನರಲ್ಲಿ ಜಾಗೃತಿಯನ್ನುಂಟುಮಾಡುಬೇಕೆಂದು ಕೇಂದ್ರ ಸಮಿತಿ ಕರೆ ಕೊಟ್ಟಿತ್ತು. ಸಂಯುಕ್ತರಂಗ ಸರಕಾರಕ್ಕೆ ನಾವು ಹೊರಗಿನಿಂದ ಬೆಂಬಲ ಕೊಡುತ್ತಿರುವುದ

ಪುಟ 7 ನೋಡಿ



ಜುಲೈ 25 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಕರೆಯ ಮೇರೆಗೆ ಬೃಹತ್ ರ್ಯಾಲಿ ನಡೆಯಿತು. ವೇದಿಕೆಯ ಮೇಲೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸೂರ್ಯನಾರಾಯಣ ರಾವ್. ಬಲದಲ್ಲಿ ಸಾರ್ವಜನಿಕ ಸಭೆಯ ಒಂದು ದೃಶ್ಯ.ಇನ್ನಷ್ಟು ಫೋಟೋಗಳು ಪುಟ 7 ರಲ್ಲಿ.





ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಎಡ ಪಕ್ಷಗಳು

ಮುಂಬೈಯಲ್ಲಿ ಮತ್ತು ಮಹಾರಾಷ್ಟ್ರ ಇನ್ನಿತರ ಕಡೆಗಳಲ್ಲಿ ಬಾಬಾಸಾಹೇಬ್ ಅಂಬೇಡ್ಕರ್‌ರವರ ಪ್ರತಿಮೆಯನ್ನು ಅಪವಿತ್ರ ಗೊಳಿಸಿರುವುದರ ವಿರುದ್ಧ ವ್ಯಕ್ತವಾಗಿರುವ ದಲಿತರ ಆಕ್ರೋಶ ಹಾಗೂ ದಲಿತರ ಜೀವ-ಆಸ್ತಿಗಳನ್ನು ರಕ್ಷಿಸುವಲ್ಲಿ ಶಿವಸೇನೆ- ಬಿಜೆಪಿ ಸರಕಾರದ ವಿಫಲತೆಯನ್ನು ಸಂಸತ್ತಿನಲ್ಲಿ ಎತ್ತುವುದಾಗಿ ಎಡಪಕ್ಷಗಳು ಹೇಳಿವೆ. ಜುಲೈ 23 ರಿಂದ ಆರಂಭವಾಗುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಯಾವ್ಯಾವ ವಿಚಾರಗಳನ್ನು ಎತ್ತಬೇಕು ಎಂಬ ಬಗ್ಗೆ ನಡೆದ ಎಡಪಕ್ಷಗಳ ಸಂಸತ್ ಸದಸ್ಯರ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು. ಸಂಸತ್ತಿನ ಈ ಬಾರಿಯ ಅಧಿವೇಶನ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುವ ಚಾರಿತ್ರಿಕ ಅಧಿವೇಶನವಾಗಿರುತ್ತದೆ.

ಸಾರ್ವಜನಿಕ ಜೀವನದಲ್ಲಿ, ಮುಖ್ಯವಾಗಿ ಮೇಲಿನ ಹಂತಗಳಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರದ ಬಗ್ಗೆಯೂ ಸಂಸತ್ತಿನಲ್ಲಿ ಚರ್ಚೆ ನಡೆಯುವಂತಾಗಬೇಕು, ಈ ಭ್ರಷ್ಟಾಚಾರ ಇಡೀ ದೇಶವನ್ನು ಹಾಗೂ ಜನಗಳನ್ನು ನಿರುತ್ಸಾಹಗೊಳಿಸುತ್ತಿದೆ. ಈ ಹಿನ್ನಲೆಯಲ್ಲಿ ಬೋಫೋರ್ಸ್ ಮತ್ತಿತರ ಹಗರಣಗಳ ತನಿಖೆಗಳನ್ನು ಬೇಗನೇ ಮುಗಿಸಲು ಹಾಗೂ ಲೋಕಪಾಲ್ ಕಾನೂನನ್ನು ತರಲು ಒತ್ತಡ ಹಾಕಲಾಗುವುದು.

ನಿಲ್ಲದ ಬೆಲೆ ಏರಿಕೆ, ಅದರ ಜೊತೆಗೆ ರೇಶನ್ ಪದ್ಧತಿ ಕುಸಿತದಿಂದಾಗಿ ಜನ ಸಾಮಾನ್ಯರ ಸಂಕಷ್ಟಗಳು ಹೆಚ್ಚುತ್ತಿರುವ ಬಗ್ಗೆ ಯೂ ಸಂಸತ್ತಿನಲ್ಲಿ ಚರ್ಚೆಯಾಗುವಂತೆ ಪ್ರಯತ್ನಿಸಬೇಕೆಂದು ಎಡಪಕ್ಷಗಳುನಿರ್ಧರಿಸಿವೆ.

ಇದಲ್ಲದೆ ಕೇಂದ್ರ ಸರಕಾರಿ ನೌಕರರ ಐದನೇ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ರೀತಿಯ ಬಗ್ಗೆ ಉಂಟಾಗಿರುವ ಅಸಂತುಷ್ಟಿ, ದೇಶದ ವಿವಿಧ ಭಾಗಗಳಲ್ಲಿ ನೆರೆಹಾವಳಿ, ವಿಶೇಷವಾಗಿ ಈಶಾನ್ಯ ರಾಜ್ಯಗಳ ಜನಗಳಿಗೆ ಉಂಟಾಗಿರುವ ತೊಂದರೆಗಳು ಇವನ್ನು ಚರ್ಚೆಗೆ ತರಲಾಗುವುದು.

ಪ್ರೆಸ್ಲರ್ ತಿದ್ದುಪಡಿಯನ್ನು ರದ್ದು ಮಾಡಿ ಪಾಕಿಸ್ತಾನಕ್ಕೆ ಮಿಲಿಟರಿ ಬೆಂಬಲವನ್ನು ಕಾನೂನು ಬದ್ಧಗೊಳಿಸುವ ಅಮೆರಿಕನ್ ಆಳರಸರ ಪ್ರಯತ್ನಗಳನ್ನು ಹಾಗೂ ಭಾರತ ಸ್ವಾವಲಂಬಿ ತಂತ್ರಜ್ಞಾನ ಬೆಳವಣಿಗೆಗೆ ನಡೆಸಿರುವ ಪ್ರಯತ್ನಗಳನ್ನು ಕುಂಠಿತಗೊಳಿಸಲು ಅಮೆರಿಕಾ ನಡೆಸಿರುವ ದುಷ್ಟ ಪ್ರಯತ್ನಗಳು-ಇವುಗಳ ಬಗ್ಗೆಯೂ ದನಿ ಎತ್ತಲು ಎಡ ಪಕ್ಷಗಳು ನಿರ್ಧರಿಸಿವೆ.

ಮಹಿಳಾ ಮೀಸಲಾತಿ ಮಸೂದೆ, ಕೃಷಿ ಕಾರ್ಮಿಕರ ಮಸೂದೆ ಇವುಗಳನ್ನು ತಕ್ಷಣ ಅಂಗೀಕರಿಸುವಂತೆ ಎಡಪಕ್ಷಗಳು ಈ ಮುಂಗಾರು ಅಧಿವೇಶನದಲ್ಲಿ ಒತ್ತಡ ಹಾಕಲು ನಿರ್ಧರಿಸಿರುವುದಲ್ಲದೆ, ರೈತಾಪಿ ಜನ, ಸಣಬು ಮತ್ತು ದಾವೂರ್ ಬೆಳೆಗಾರರು ಈ ಬೆಳೆಗಳ ಬೆಲೆ ಕುಸಿತದಿಂದ ಅನುಭವಿಸುತ್ತಿರುವ ದುಸ್ಥಿತಿಯ ಬಗ್ಗೆಯೂ ದೇಶದ ಗಮನ ಸೆಳೆಯಲು ನಿರ್ಧರಿಸಿದ್ದಾರೆ.

ಸಿಪಿಐ(ಎಂ)ನ ಇ.ಬಾಲಾನಂದನ್, ಸೋಮನಾಥ್ ಚಟರ್ಜಿ, ಎಸ್.ರಾಮಚಂದ್ರ ಪಿಳ್ಳೆ, ಬಿಪ್ಲವ್‌ದಾಸ್ ಗುಪ್ತಾ ಹಾಗೂ ನಿಲೋತ್ಪಲ್ ಬಸು, ಸಿಪಿಐನ ಗೀತಾ ಮುಖರ್ಜಿ ಮತ್ತು ಅಜಮಿನ್ ಚಕ್ರವರ್ತಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ಈ ಸಭೆಯಲ್ಲಿ ಹಾಜರಿದ್ದರು.

ಐದನೇ ವೇತನ ಆಯೋಗದ ನಕಾರಾತ್ಮಕ ಶಿಫಾರಸುಗಳ ಸ್ವೀಕಾರ ಸಕಾರಾತ್ಮಕ ಶಿಫಾರಸುಗಳ ಬದಲಾವಣೆ - ಸಿಪಿಐ(ಎಂ) ಖಂಡನೆ

ಸರಕಾರಿ ನೌಕರರ ಐದನೇ ಕೇಂದ್ರ ವೇತನ ಆಯೋಗದ ಶಿಫಾರಸುಗಳ ಬಗ್ಗೆ ಕೇಂದ್ರ ಸರಕಾರ ಮಾಡಿರುವ ಬದಲಾವಣೆ ಅತೃಪ್ತಿಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಕೇಂದ್ರ ಸರಕಾರಿ ನೌಕರರು ಬಯಸಿದ ಪ್ರಮುಖ ಸುಧಾರಣೆಗಳ ಬಗ್ಗೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಬೃಹತ್ ಪ್ರಮಾಣದಲ್ಲಿ ಹುದ್ದೆಗಳ ರದ್ಧತಿ, ಉದ್ಯೋಗವಕಾಶ ನಾಶಕ್ಕೆ ಸಂಬಂಧಪಟ್ಟ ಶಿಫಾರಸ್ಸುಗಳಾಗಲೀ, ಅಧಿಕಾರಿಗಳು ಮತ್ತು ನೌಕರರ ನಡುವಿನ ವ್ಯಾಪಕ ಕಂದರ ಹಾಗೆಯೇ ಉಳಿದಿದೆ. ಇನ್ನೂ ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರಿಗೆ ನ್ಯಾಯ ಒದಗಿಸಿಲ್ಲ. ವೇತನ ಆಯೋಗದ ನಕಾರಾತ್ಮಕ ಶಿಫಾರಸ್ಸುಗಳನ್ನು ಸ್ವೀಕರಿಸಲಾಗದೆ, ಸಕಾರಾತ್ಮಕ ಶಿಫಾರಸುಗಳನ್ನು ಬದಲಾಯಿಸಿ ಅವುಗಳಿಂದಲೂ ನೌಕರರಿಗೆ ಪ್ರಯೋಜನವಾಗದಂತೆ ಮಾಡಲಾಗಿದೆ ಎಂದು ಸಿಪಿಐ(ಎಂ) ಹೇಳಿಕೆ ಖೇದ ವ್ಯಕ್ತಪಡಿಸಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರಷ್ಟೇ ಅಲ್ಲ, ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳೂ ಈ ಬಗ್ಗೆ ಕೇಂದ್ರ ಸರಕಾರದ ನಿರ್ಣಯಗಳನ್ನು ಸರ್ವಾನುಮತದಿಂದ ತಿರಸ್ಕರಿಸುವುದನ್ನು ಸರಕಾರ ಗಮನಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ, ಸಂಯುಕ್ತ ರಂಗ ಸರಕಾರ ಕೇಂದ್ರ ಸರಕಾರಿ ನೌಕರರು ಮತ್ತು ಅವರ ಸಂಘಟನೆಗಳು ಬಯಸುವ ಸುಧಾರಣೆಗಳನ್ನು ಒಪ್ಪಿಕೊಂಡು ಹಿಂದಿನ ಸರಕಾರಗಳಿಗಿಂತ ತಾನು ಭಿನ್ನವೆಂದು ತೋರಿಸಿಕೊಳ್ಳಬೇಕು ಎಂದು ಆಗ್ರಹಪಡಿಸಿದೆ. ನ್ಯಾಯ ಪಡೆಯಲು ಮಿಲಿಯಗಟ್ಟಲೆ ಕೇಂದ್ರ ಸರಕಾರಿ ನೌಕರರು ನಡೆಸುವ ಐಕ್ಯ ಹೋರಾಟಗಳನ್ನು ಪಕ್ಷ ಬೆಂಬಲಿಸುವುದಾಗಿಯೂ ಪೊಲಿಟ್‌ಬ್ಯೂರೋ ಹೇಳಿಕೆ ಆಶ್ವಾಸನೆ ನೀಡಿದೆ.

ರಾಜ್ಯಸರಕಾರಿ ನೌಕರರಿಗೂ ಹಾನಿಕರ

80 ಲಕ್ಷ ರಾಜ್ಯ ಸರಕಾರಿ ನೌಕರರು ಹಾಗೂ ಅಧ್ಯಾಪಕರನ್ನು ಪ್ರತಿನಿಧಿಸುವ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ಕೂಡಾ ವೇತನ ಆಯೋಗ ಕುರಿತಾದ ಸರಕಾರದ ನಿರ್ಣಯಗಳ ಬಗ್ಗೆ ಬೇಸರ ವ್ಯಕ್ತಪಡಿಸಿದೆ. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುಕೋಮಲ್ ಸೆನ್ ಜುಲೈ 20 ರಂದು ಒಂದು ಹೇಳಿಕೆ ನೀಡಿ ಮೇಲ್ವರ್ಗದವರ ಒಲವು ಹಾಗೂ ಕಾರ್ಮಿಕರ ಮೇಲೆ ಧಾಳಿಯ ಐಎಂಎಫ್-ವಿಶ್ವಬ್ಯಾಂಕ್ ತತ್ವವನ್ನು ಪ್ರತಿಫಲಿಸುವ ಶಿಫಾರಸುಗಳು ಇವು ಎಂದು ಹೇಳಿದ್ದಾರೆ. ಸರಕಾರ 30% ಸಿಬ್ಬಂದಿ ಕಡಿತ, ಸಾರಾಸಗಟು ಕಂಪ್ಯೂಟರೀಕರಣ, ಕಾಂಟ್ರಾಕ್ಟ್ ಪದ್ಧತಿ ಇತ್ಯಾದಿ ವಿನಾಶಕಾರಿ ಶಿಫಾರಸುಗಳ ಬಗ್ಗೆ ಏನೂ ನಿರ್ಣಯ ಕೈಗೊಳ್ಳದೆ ರಾಜ್ಯ ಸರಕಾರಿ ನೌಕರರ ಮೇಲೆ ನೌಕರಿ ಅಭದ್ರತೆಯ ಖಡ್ಗ ಸದಾ ನೇತಾಡುತ್ತಿರುವಂತೆ ಮಾಡಿದೆ. ಅತ್ತ ಸಂಬಳ-ಸಾರಿಗೆಯಲ್ಲೂ ಸುಧಾರಣೆಯಿಲ್ಲ, ಬೋನಸ್ ಮಿತಿ ತೆಗೆದಿಲ್ಲ, ಇವೆಲ್ಲಾ ಕೇಂದ್ರ ಸರಕಾರಿ ನೌಕರರು ಮಾತ್ರವಲ್ಲ, 80 ಲಕ್ಷ ರಾಜ್ಯ ಸರಕಾರಿ ನೌಕರರಿಗೂ ವಿನಾಶಕಾರಿ ಎಂದು ಸುಕೋಮಲ್ ಸೆನ್ ಹೇಳಿದ್ದಾರೆ.

ಆದ್ದರಿಂದ ಕೇಂದ್ರ ಸರಕಾರದ ನಿರ್ಣಯ ಅತ್ಯಂತ ಖಂಡನಾರ್ಹ ಎಂದಿರುವ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ಆಗಸ್ಟ್ 6 ರಂದು ದೇಶಾದ್ಯಂತ ರ್‍ಯಾಲಿಗಳನ್ನು, ಮತ ಪ್ರದರ್ಶನಗಳನ್ನು ನಡೆಸಿ 'ಅಖಿಲ ಭಾರತ ಪ್ರತಿಭಟನಾ ದಿನ' ವನ್ನು ಆಚರಿಸಬೇಕೆಂದು ಕರೆ ನೀಡಿದೆ.

ರಾಜ್ಯ ಸರಕಾರಿ ನೌಕರರ ವೇತನ ಶ್ರೇಣಿಗಳ ಪರಿಷ್ಕರಣೆಗೆ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ವಿಶೇಷ ನಿಧಿ ಒದಗಿಸಬೇಕೆಂದೂ ಒಕ್ಕೂಟ ಆಗ್ರಹಪಡಿಸಿದೆ.

ಸಿಐಟಿಯು ಖಂಡನೆ

ಜುಲೈ 19 ಮತ್ತು 20ರಂದು ನವದೆಹಲಿಯಲ್ಲಿ ನಡೆದ ಸಿಐಟಿಯು ಪದಾಧಿಕಾರಿಗಳ ಸಭೆಯು ಕೇಂದ್ರ ಸರಕಾರ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಕುರಿತಂತೆ ಕೈಗೊಂಡ ನಿರ್ಣಯಗಳನ್ನು ಖಂಡಿಸಿದೆ. ಆಯೋಗದ ಶಿಫಾರಸುಗಳಲ್ಲಿ ಸಂಬಳ-ಸಾರಿಗೆ ಕುರಿತಂತೆ ಸಣ್ಣ-ಪುಟ್ಟ ಬದಲಾವಣೆ ಮಾಡಿ ಇತರ ಕೆಲವು ಅಂಶಗಳಲ್ಲಿ ಪ್ರತಿಕೂಲ ಬದಲಾವಣೆಗಳನ್ನು ಮಾಡಿದೆ. ವರ್ಷಾನುಗಟ್ಟಲೆ ಖಾಲಿ ಉಳಿಸಿದ್ದ 3.5 ಲಕ್ಷ ಹುದ್ದೆಗಳನ್ನು ರದ್ದು ಮಾಡುವ ನಿರ್ಣಯ ಸರಕಾರ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದಕ್ಕೆ ನಿದರ್ಶನ. ಸರಕಾರದ ಈ ನಿರ್ಣಯಗಳು ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದಲ್ಲೂ ವೇತನ ನೀತಿಗಳನ್ನು ಕುರಿತಂತೆ ಬಹಳ ಪರಿಣಾಮ ಬೀರುತ್ತವೆ ಎಂದಿರುವ ಸಿಐಟಿಯು ಕೇಂದ್ರ ಸರಕಾರಿ ನೌಕರರು ತಮಗಾಗಿರುವ ಅನ್ಯಾಯದ ವಿರುದ್ಧ ದೃಢ ಹೋರಾಟ ನಡೆಸುವರೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದೆ.

ಮನೆಗಳ ನೆಲಸಮ ವಿರೋಧಿಸಿ ಯಶಸ್ವಿ ಪ್ರತಿಭಟನೆ

ಬೆಂಗಳೂರು : ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿ ಸುಬ್ರಮಣ್ಯಪುರ ಪಕ್ಕದಲ್ಲಿ ಉತ್ತರಹಳ್ಳಿ ಸೆಕ್ಷನ್ ನಂ. 64ರಲ್ಲಿ 1972ರಲ್ಲಿ ಮತ್ತು 1992ರ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಸುಮಾರು 400 ವಸತಿಹೀನರಿಗೆ ವಸತಿಗಾಗಿ ವಾಸ ಹಕ್ಕುಪತ್ರ ವಿತರಣೆ ಮಾಡಿದ್ದು ಎಲ್ಲರೂ ಮನೆಗಳನ್ನು ಕಟ್ಟಿ ವಾಸ ಮಾಡುತ್ತಿದ್ದಾರೆ. ಇವರಿಗೆ ಕುಡಿಯುವ ನೀರಿನ ಸೌಲಭ್ಯ ಮತ್ತು ವಿದ್ಯುಚ್ಛಕ್ತಿ ಸರಬರಾಜನ್ನು ಪಂಚಾಯತಿ ವತಿಯಿಂದ ಮಾಡಿಕೊಡಲಾಗಿದೆ. ಈಗ ಇದರ ಪಕ್ಕದಲ್ಲೇ ಕನಕ ಸೊಸೈಟಿಯವರು ಗೋಪಾಲಕೃಷ್ಣ ಟೆಕ್ಸ್‌ಟೈಲ್ಸ್ ಮಿಲ್ ಮಾಲಿಕರಿಂದ ಜಮೀನನ್ನು ಕ್ರಯಕ್ಕೆ ಕೊಂಡು ಅಲ್ಲಿ ನಿವೇಶನಗಳನ್ನು ಮಾಡುವ ಉದ್ದೇಶದಿಂದ ಅಲ್ಲಿ ವಾಸ ಮಾಡುತ್ತಿರುವ 400 ಜನರನ್ನು ಅಲ್ಲಿಂದ ಒಕ್ಕಲೆಬ್ಬಿಸುವ ಸಲುವಾಗಿ ಜುಲೈ 28ರಂದು ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ಸ್ಥಳೀಯ ಪೋಲೀಸ್ ಅಧಿಕಾರಿಗಳ ಕುಮ್ಮಕ್ಕಿನ ಜೊತೆಗೆ ಬುಲ್ಡೋಜರ್‌ಗಳನ್ನು ತಂದು ಹೊಡೆದು ಹಾಕುವ ಪ್ರಯತ್ನ ಮಾಡಿದಾಗ ಕರ್ನಾಟಕ ಪ್ರಾಂತ ರೈತ ಸಂಘದ ಮಧ್ಯಪ್ರವೇಶದಿಂದಾಗಿ ಮನೆ ಕೆಡಹುವ ಯತ್ನ ವಿಫಲಗೊಂಡಿತು.

ಜುಲೈ 28ರ ಬೆಳಗಿನ ಜಾವ ಮೂರು ಗಂಟೆ ರಾತ್ರಿಯಲ್ಲಿ ಕನಕಪುರ ರಸ್ತೆಯ ಸುಬ್ರಮಣ್ಯ ಪುರದಿಂದ ಇನ್ನೂರು ಜನ ಮೆರವಣಿಗೆ ಮೂಲಕ ತಮ್ಮ ಮನೆಗಳನ್ನು ಕೆಡುವುತ್ತಿರುವುದರ ಬಗ್ಗೆ ಮುಖ್ಯಮಂತ್ರಿಗಳಿಗೆ ವಿವರಿಸಲು ಅವರ ಮನೆಯ ಮುಂದೆ ಬೆಳಗಿನ ಏಳು ಗಂಟೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ನಂತರ ಸಾರಿಗೆ ಸಚಿವ ಸಿಂಧ್ಯಾ ಮತ್ತು ಸಚಿವ ಅನಂತನಾಗ್‌ರನ್ನು ಭೇಟಿ ಮಾಡಿ ನಂತರ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದ ನಂತರ ಮನೆಗಳನ್ನು ಕೆಡವಿ ಹಾಕುವುದನ್ನು ನಿಲ್ಲಿಸಲಾಯಿತು. ಇದರ ನೇತೃತ್ವವನ್ನು ಪಿ.ಜಗನ್ನಾಥ್ ವಹಿಸಿದ್ದರು.

ಕೆಇಬಿ ಕಚೇರಿಗೆ ಮುತ್ತಿಗೆ

ಮಂಗಳೂರು: ಉಳ್ಳಾಲ ವಲಯ ಸಿಪಿಐ(ಎಂ) ಶಾಖೆಯು ಜುಲೈ 15ರಂದು ಪಕ್ಷದ ಕರೆಯಂತೆ ವಿದ್ಯುತ್ ದರ ಏರಿಕೆಯ ವಿರುದ್ಧ ಚಳುವಳಿ ನಡೆಸಿದರು. ಕಾಂ. ರಾಮಚಂದ್ರ ಉಚ್ಚಿಲ್, ಕಾಂ.ಡಿಸೋಜ, ಕಾಂ. ಬಾಬು ಪೂಜಾರಿ, ಕಾಂ.ಸುಕುಮಾರ್, ಕಾಂ.ಕೃಷ್ಣಪ್ಪ ಟೈಲರ್, ಕಾಂ.ಕೆ. ಮಂಜಪ್ಪನವರ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ತೆರಳಿ ಕೆಇಬಿಯ ಕಚೇರಿಗೆ ಮುತ್ತಿಗೆ ಹಾಕಿ ಘೋಷಣೆಗಳನ್ನು ಹಾಕುತ್ತಾ ಪ್ರತಿಭಟನೆ ನಡೆಸಿದರು. ಬಳಿಕ ಕೆಇಬಿಯ ಜೂ.ಇಂಜಿನಿಯರ್‌ರವರ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿ ವಿದ್ಯುತ್ ದರ ಏರಿಕೆ ಕೈಬಿಡುವಂತೆ ಒತ್ತಾಯಿಸಲಾಯಿತು. ನೆರೆದ ಸಭೆಯಲ್ಲಿ ವಲಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರು ಸರಕಾರದ ವಿದ್ಯುತ್ ದರ ಏರಿಕೆಯನ್ನು ಖಂಡಿಸಿ ಮಾತನಾಡಿದರು.

ಟೊಮೋಟೊಗೆ ಲಾಭದಾಯಕ ಬೆಲೆ ನಿಗದಿ ಮಾಡಲು ಒತ್ತಾಯ

ಕೋಲಾರ : ರೈತರು ಬೆಳೆದಿರುವ ಟೊಮೋಟೊಕ್ಕೆ ಲಾಭದಾಯಕ ಬೆಲೆ ನಿಗದಿ ಮಾಡಿ ರೈತರಿಂದ ಟೊಮೋಟೊವನ್ನು ಕೊಳ್ಳಲು ತಕ್ಷಣ ಮಾರುಕಟ್ಟೆ ಪ್ರವೇಶಿಸಬೇಕೆಂದು ರಾಜ್ಯ ಸರಕಾರವನ್ನು ಕರ್ನಾಟಕ ಪ್ರಾಂತ ರೈತ ಸಂಘ (ಎಐಕೆಎಸ್), ಕೋಲಾರ ಜಿಲ್ಲಾ ಸಮಿತಿ ಆಗ್ರಹಿಸಿದೆ.

ವಿಪರೀತ ಬಂಡವಾಳವನ್ನು ಹಾಕಿ ಉತ್ತಮ ಬೆಲೆ ಸಿಗಬಹುದೆಂದು ಹೇರಳವಾಗಿ ಟೊಮೋಟೊವನ್ನು ಬೆಳೆದಿರುವ ಕೋಲಾರ ಜಿಲ್ಲೆಯ ರೈತರು ತಾವು ಬೆಳೆದಿರುವ ಟೊಮೋಟೊವನ್ನು ಕಿಜಿಗೆ 50 ಪೈಸೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಬೇಕಾಗಿ ಬಂದಿರುವ ಪರಿಸ್ಥಿತಿ ಯನ್ನು ಎದುರಿಸಲು ಸಾಧ್ಯವಾಗದೆ ದಿವಾಳಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಆತಂಕದ ಪರಿಸ್ಥಿತಿ ತಲುಪಿದ್ದಾರೆ.

ಮಣ್ಣಿನ ಮಕ್ಕಳ ಸರಕಾರ, ರೈತರ ಸರಕಾರ ಎಂದು ದಿನನಿತ್ಯ ಬೊಗಳೆ ಬಿಡುವ ರಾಜ್ಯದ ಜನತಾದಳ ಸರಕಾರ ರೈತರ ನೆರವಿಗೆ ಧಾವಿಸಿ ಅವರು ಬೆಳೆದಿರುವ ಫಸಲಿಗೆ ಕನಿಷ್ಟ ದರ ನಿಗದಿ ಮಾಡಿ ದಿವಾಳಿಯಾಗುವುದನ್ನು ತಪ್ಪಿಸಲು ಯಾವುದೇ ಕ್ರಮ ಕೈಗೊಳ್ಳದಿರುವ ರೈತ ವಿರೋಧಿ ನೀತಿಯನ್ನು ಪ್ರಾಂತ ರೈತ ಸಂಘ ತೀವ್ರವಾಗಿ ಖಂಡಿಸಿದೆ. ಇದು ಕೇವಲ ಟೊಮೋಟೊ ಪ್ರಶ್ನೆ ಮಾತ್ರವಲ್ಲದೆ ಈರುಳ್ಳಿ, ಆಲೂಗಡ್ಡೆ ಮತ್ತು ಭತ್ತಕ್ಕೂ ಲಾಭದಾಯಕ ಬೆಲೆಗಳು ಸಿಗದೆ ರೈತ ಸಮುದಾಯ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ವಿಪರೀತ ಬಸ್ ದರ, ವಿದ್ಯುತ್ ದರಗಳನ್ನು ಏರಿಸುತ್ತಿರುವ ರಾಜ್ಯ ಸರಕಾರ ರೈತರ ಈ ಸಮಸ್ಯೆ ಬಗ್ಗೆ ದಿವ್ಯನಿರ್ಲಕ್ಷ್ಯ ತಾಳಿರುವುದನ್ನು ರೈತ ಸಂಘ ಉಗ್ರವಾಗಿ ಖಂಡಿಸಿದೆ. ಜಿಲ್ಲೆಯ ಮಾತನಾಡುವ ಮಂತ್ರಿಗಳು ರೈತೋದ್ಧಾರಕನೆಂದು ಪಟ್ಟ ಕಟ್ಟಿಕೊಂಡಿರುವ ಕೃಷಿ ಸಚಿವರು ಈ ಹಿಂದೆ ರೈತರಿಗೆ ಲಾಭದಾಯಕ ಬೆಲೆಸಿಗುತ್ತಿಲ್ಲವೆಂದು ಪ್ರತಿಭಟಿಸಲು ವಿಧಾನಸೌಧದ ಎದುರು ಟೊಮೋಟೊವನ್ನು ಸುರಿದು ಪ್ರತಿಭಟನೆ ನಡೆಸಿದವರು ಈಗ ಮೌನವಾಗಿರುವುದರ ರಹಸ್ಯವೇನೋ ತಿಳಿಯುತ್ತಿಲ್ಲ. ಶಾಸಕರು, ಮಂತ್ರಿಗಳು ಈ ಪರಿಸ್ಥಿತಿಯ ಬಗ್ಗೆ ಚಕಾರವೆತ್ತುತ್ತಿಲ್ಲ. ಇವರಿಗೇನಾಗಿದೆಯೋ ಎಂದು ರೈತ ಸಂಘ ಆಶ್ಚರ್ಯ ವ್ಯಕ್ತಪಡಿಸಿದೆ.

ರೈತರ ಈ ದುಸ್ಥಿತಿಗೆ ಕಾರಣರಾಗಿರುವ ಈ ಸರಕಾರದ ವಿರುದ್ಧ ರೈತರು ಪಕ್ಷಾತೀತವಾಗಿ ಒಗ್ಗಟ್ಟಾಗಿ ಪ್ರತಿಭಟನೆ ನಡೆಸಬೇಕೆಂದು ರೈತ ಸಂಘ ವಿನಂತಿಸುತ್ತದೆ. ಈ ಸ್ಥಿತಿಯನ್ನು ತಪ್ಪಿಸಲು ಸರಕಾರ ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಸರಕಾರದ ವಿರುದ್ಧ ತೀವ್ರ ಹೋರಾಟವನ್ನು ಸಂಘಟಿಸಲು ರೈತ ಸಂಘ ನಿರ್ಧರಿಸಿದೆ.

ನಾಗಮಂಗಲ ಬೀಡಿ ಕಾರ್ಮಿಕರಿಗೆ ಪ್ರಾಥಮಿಕ ಗೆಲುವು

ಮಂಡ್ಯ: ನಾಗ ಮಂಗಲ ಬೀಡಿ ಕಾರ್ಮಿಕ ಸಂಘದ ಸದಸ್ಯತ್ವ ಮಾಡುವುದರ ಜೊತೆಗೆ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ದೊರಕಿಸುವ ಸಲುವಾಗಿ ಅರ್ಜಿ ಫಾರಂಗಳನ್ನು ಸಂಘದಿಂದಲೇ ಮುದ್ರಿಸಿ ವಿತರಿಸಿದರು. ಮೇ 5 ರಂದು ಸಿಐಟಿಯು ರಾಜ್ಯ ಸಮ್ಮೇಳನದ ಕರೆಯಂತೆ ನಡೆದ ರಾಜ್ಯವ್ಯಾಪಿ ಮುಷ್ಕರದ ದಿನ ಬೀಡಿ ಕಾರ್ಮಿಕರು ಕಾಂ. ಕೋದಂಡರಾಮ್ ನೇತೃತ್ವದಲ್ಲಿ ತಹಶೀಲ್ದಾರ್‌ರವರಿಗೆ ಬಂದು ಬೇಡಿಕೆಗಳ ಮನವಿ ಪತ್ರ ಸಲ್ಲಿಸಿ ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಲಾಗಿತ್ತು. ಕಾರ್ಮಿಕರು ಸಂಘಟಿತರಾಗುತ್ತಿರುವುದನ್ನು ತಿಳಿದು ಕುಪಿತರಾದ ಬೀಡಿ ಮಾಲಕರು ಹಾಗೂ ಗುತ್ತಿಗೆದಾರರು ಸಂಘವನ್ನು ಕಿತ್ತು ಹಾಕಲು ಹಲವು ತಂತ್ರಗಳನ್ನು ಹೂಡಿದರು, ಕೊನೆಗೆ ಕಾರ್ಮಿಕರನ್ನೇ ವಿಭಜನೆ ಮಾಡಿ ಅವರ ಒಗ್ಗಟ್ಟು ಮುರಿಯಲು ಕೆಲವು ಕಾರ್ಮಿಕರನ್ನು ಸಂಘದ ವಿರುದ್ಧ ದಾಳಿ ಮಾಡಲು ಯೋಜಿಸಿದರು.

ಅಂತಿಮವಾಗಿ ಜುಲೈ 8ರಿಂದ ಎಲ್ಲ ಮಾಲಿಕರು, ಗುತ್ತಿಗೆದಾರರು ಒಂದಾಗಿ ಲೇಬರ್ ಇನ್ಸ್‌ಪೆಕ್ಟರ್ ಜೊತೆ ಶಾಮೀಲಾಗಿ ಬೀಡಿ ಕೆಲಸವನ್ನೇ ನಿಲ್ಲಿಸಿದರು. ಕಾರ್ಮಿಕರಿಗೆ ಎಲೆ ಹೊಗೆಸೊಪ್ಪು ಕೊಡದೆ ಸಂಘ ಮಾಡಿದ್ದರೆ ಅಲ್ಲೇ ಹೋಗಿ ಕೆಲಸ ಕೇಳಿ ಎಂದು ಹೇಳತೊಡಗಿದರು. ಕಾರ್ಮಿಕರು ಕೆಲಸವಿಲ್ಲದೆ ಹತಾಶರಾಗಿ ಸಂಘದ ವಿರುದ್ಧ ತಿರುಗಿ ಬೀಳುವ ಮೂಲಕ ಸಂಘ ಮುರಿಯಬಹುದೆಂದು ಹುನ್ನಾರ ಹೂಡಿದ್ದರು.

ಕಾರ್ಮಿಕರ ಸಭೆಗಳನ್ನು ನಡೆಸಿ ಅವರು ಧೃತಿಗೆಡದಂತೆ, ಸಂಘಟಿತ ಹೋರಾಟ ನಡೆಸಬೇಕಾದ ಅಗತ್ಯ ವಿವರಿಸಿ ಹೇಳಿ ಒಗ್ಗಟ್ಟಿನಿಂದ ಸಮಸ್ಯೆ ಎದುರಿಸಲು ಹೋರಾಟ ರೂಪಿಸಿ ತಹಶೀಲ್ದಾರ ರವರಿಗೆ ಒಂದು ಜ್ಞಾಪನಾ ಪತ್ರ ನೀಡಿ ತತ್ ಕ್ಷಣ ಬೀಡಿ ಕಾರ್ಮಿಕರಿಗೆ ಕೆಲಸ ಒದಗಿಸಲು ಹಾಗೂ ಮಾಲೀಕರು, ಗುತ್ತಿಗೆದಾರರ ವಿರುದ್ಧ ಸರಕಾರ ಕ್ರಮ ಜರುಗಿಸದಿದ್ದರೆ ಬೀಡಿ ಕಾರ್ಮಿಕರು ಸತ್ಯಾಗ್ರಹ ಹೂಡಬೇಕಾಗುತ್ತದೆ ಎಂದು ತಿಳಿಸಲಾಯಿತು. ತಹಶೀಲ್ದಾರರು ಜುಲೈ 17 ರಂದು ಮತ್ತು ಜುಲೈ22 ರಂದು ಮಾಲೀಕರು, ಗುತ್ತಿಗೆದಾರರು ಹಾಗೂ ಸಂಘದ ಪ್ರತಿನಿಧಿಗಳ ಸಭೆಗಳನ್ನು ಏರ್ಪಡಿಸಿ, ಸಂಧಾನ ನಡೆಸಿದ ಪರಿಣಾಮವಾಗಿ ಒಂದು ಇತ್ಯರ್ಥಕ್ಕೆ ಬಂದು ಬೀಡಿ ಮಾಲೀಕರು, ಗುತ್ತಿಗೆದಾರರು ಮೊದಲಿನಂತೆ ಕೆಲಸ ಪ್ರಾರಂಭಿಸಬೇಕು, ಅವರ ಬಳಿ ಕೆಲಸ ಮಾಡುವ ಕಾರ್ಮಿಕರಿಗೆ ಗುರುತಿನ ಚೀಟಿ ಹಾಗೂ ಸ್ಕಾಲರ್ ಶಿಪ್ ಫಾರಂಗಳಿಗೆ ಸಹಿ ಮತ್ತು ಸೀಲ್ ಹಾಕಿ ಕೊಡುವುದಾಗಿ ಒಪ್ಪಿ ನಡವಳಿಕೆಗೆ ಸಹಿ ಮಾಡಿರುತ್ತಾರೆ. ಇದರಿಂದ ತಾಲ್ಲೂಕಿನ ಬೀಡಿ ಕಾರ್ಮಿಕರಲ್ಲಿ ಮಾಲೀಕರ ಅವರ ಏಜೆಂಟರ ಸಂಚು ಮುರಿದು ಜಯ ಸಾಧಿಸಿದ ಉತ್ಸಾಹ ಹುರುಪು ಮೂಡಿದೆ. ಬೀಡಿ ಕಾರ್ಮಿಕರ ಸಂಘಟನೆಯನ್ನು ಮಂಡ್ಯ ಜಿಲ್ಲೆಯ ಎಲ್ಲ ಕಡೆ ವಿಸ್ತರಿಸಲು ಯೋಜನೆ ಮಾಡಲಾಗಿದೆ. ತಹಶೀಲ್ದಾರರ ಬಳಿ ನಡೆದ ಸಂಧಾನ ಸಭೆಗಳಲ್ಲಿ ಕಾರ್ಮಿಕರ ಪರವಾಗಿ ಸಂಘದ ಕಾಂ, ಮೋಹನ್ ಕುಮಾರ್, ಕೋದಂಡರಾಮ್, ಸಯದ್ ಮುಜೀಬ್, ಸಿಐಟಿಯು ಮಂಡ್ಯ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಹನುಮಂತು, ಖಜಾಂಚಿ ಜಯಶೇಖರಪ್ಪ, ಡಿವೈಎಫ್‌ಐನ ಶಿವಕಾಳಯ್ಯ, ಚೌಡೇಗೌಡ, ಶಮೀರಖಾನಂ ಜತೆ ಕಾರ್ಯದರ್ಶಿ ಕಾ. ಶಮೀರ್ ಪರವೀನ್ ತಾಜ್ ಮುಂತಾದವರು ಭಾಗವಹಿಸಿದ್ದರು.

ಪೈರು ನಾಶ: ಕೂಲಿಕಾರರಿಂದ ಉಗ್ರ ಪ್ರತಿಭಟನೆ

ಧಾರವಾಡ: ಹಾನಗಲ್ ತಾಲೂಕಿನ ಹಸನಾಬಾದಿ ಎಂಬ ಗ್ರಾಮದ ಕೃಷಿ ಕೂಲಿಕಾರರು ಬಗರ್ ಹುಕುಂ ಸಾಗುವಳಿ ಮಾಡಿ ಬೆಳೆದಿದ್ದ ಪೈರನ್ನು ಕೆಲವು ಅರಣ್ಯ ಇಲಾಖೆಯ ಸಿಬ್ಬಂದಿಯವರು ನಾಶ ಮಾಡಿದ್ದಾರೆ ಎಂಬ ಸುದ್ದಿ ತಿಳಿಯುತ್ತಲೇ ತಾಲೂಕಿನ ಕೃಷಿ ಕೂಲಿ ಕಾರರು ತಹಶೀಲ್ದಾರರ ಕಚೇರಿಗೆ ಧಾವಿಸಿ ಬಂದು ಪ್ರತಿಭಟಿಸಿದ ಘಟನೆಯೊಂದು ಹಾನಗಲ್‌ನಿಂದ ವರದಿಯಾಗಿದೆ. ಅಂದು ಅಕ್ಕಿಆಲೂರಿನಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕು ಮಟ್ಟದ ಸಕ್ರಿಯ ಕಾರ್ಯಕರ್ತರ ಸಭೆ ನಡೆಯುತ್ತಿದ್ದಾಗ ಹಸನಾಬಾದಿನ ಇಬ್ಬರು ಕೂಲಿಕಾರ ಮಹಿಳೆಯರು ಅಲ್ಲಿಗೆ ಬಂದು ಅರಣ್ಯ ಇಲಾಖೆಯ ಸಿಬ್ಬಂದಿಯವರು ಗ್ರಾಮದ ಕಾಂಗ್ರೆಸ್(ಐ) ಪುಡಾರಿಗಳ ಚಿತಾವಣೆಯಿಂದ ಕೂಲಿಕಾರರು ಬೆಳೆದಿದ್ದ ಹತ್ತಿಪೈರನ್ನು ನಾಶ ಮಾಡಿದ್ದಲ್ಲದೆ ಅದನ್ನು ಪ್ರತಿಭಟಿಸಿದ ತಮ್ಮ ಮೇಲೆ ಹಲ್ಲೆ ಮಾಡಿದ್ದನ್ನು ವರದಿ ಮಾಡಿದರು. ಅರಣ್ಯ ಸಿಬ್ಬಂದಿಯ ಈ ದೌರ್ಜನ್ಯವನ್ನು ಮರುದಿನವೇ ಪ್ರತಿಭಟಿಸಲು ಸಭೆ ನಿರ್ಣಯವಾಯಿತು.

ಬೆಳಗಾಗುತ್ತಿದ್ದಂತೆ ಕೂಲಿಕಾರರ ದಂಡು ವಲಯ ಅರಣ್ಯಾಧಿಕಾರಿಯ ಕಚೇರಿ ಎದುರು ಜಮಾಯಿಸಲಾರಂಭಿಸಿತು. ಆಗ ಅಷ್ಟೇ ಸರಕಾರಿಯಂತ್ರಕ್ಕೆ ಎಚ್ಚರವಾಯಿತು. ಯಾವ ಸೂಚನೆಯೂ ಸಿಗದೆ ಒಮ್ಮಿಂದೊಮ್ಮೆಲೆ ಪ್ರವಾಹದಂತೆ ಬಂದ ರೊಚ್ಚಿಗೆದ್ದ ಕೂಲಿಕಾರರ ಸಮೂಹವನ್ನು ನಿಯಂತ್ರಿಸಲು ಪೋಲೀಸರು ಕೆಲಕಾಲ ಒದ್ದಾಡುವಂತಾಯಿತು. ಪೈರು ನಾಶ ಮಾಡಿದವರನ್ನು ಬಂಧಿಸಬೇಕು, ಮಹಿಳೆಯರ ಮೇಲೆ ಕೈ ಮಾಡಿದವರಿಗೆ ಶಿಕ್ಷೆಯಾಗಬೇಕು ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿದ ಕೂಲಿಕಾರರು ವಿದ್ಯುತ್‌ದರ ಏರಿಕೆಯ ವಿರುದ್ಧ ಕೆಇಬಿ ಆಫೀಸ್ ಎದುರು ಮತಪ್ರದರ್ಶನ ನಡೆಸಿ ಮುಂದೆ ತಹಸೀಲ್ದಾರರ ಕಚೇರಿಯ ಎದುರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿತು. ತಾಲೂಕಿನ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಕೂಲಿಕಾರರ ಹಾಗೂ ಬಡ ರೈತರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿಯವರ ಹೆಚ್ಚುತ್ತಿರುವ ದೌರ್ಜನ್ಯವನ್ನು ತಡೆಗಟ್ಟಬೇಕೆಂದು ಕೋರುವ ಮನವಿಯೊಂದನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು. ಪಡಿತರ ಕಾರ್ಡುದಾರರಿಗೆ ಯಾವುದೇ ಕಡಿತವಿಲ್ಲದೆ ಮೊದಲಿನಂತೆ ಆಹಾರ ಧಾನ್ಯಗಳನ್ನು ಒದಗಿಸಬೇಕೆಂದೂ ಒತ್ತಾಯಿಸುವ ಹಾಗೂ ಸಿಕ್ಕಾಪಟ್ಟೆ ಹೆಚ್ಚಿಸಿರುವ ವಿದ್ಯುತ್ ದರಗಳನ್ನು ಇಳಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಇನ್ನೊಂದು ಮನವಿಯನ್ನು ಸಹ ಸಲ್ಲಿಸಲಾಯಿತು.

ಸರಕಾರಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹಾನಗಲ್ಲಿಗೆ ಬಂದಿದ್ದ ಸಚಿವ ಸಿ.ಎಂ.ಉದಾಸಿಯವರು ಅಲ್ಲಿಗೆ ಬಂದಾಗ ಕೂಲಿಕಾರರ ಆಕ್ರೋಶವನ್ನು ಎದುರಿಸಬೇಕಾಯಿತು. ಅಲ್ಲಿಯೇ ಹಾಜರಿದ್ದ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರನ್ನು ಕರೆದು ಹಸನಬಾದಿ ಘಟನೆಯ ಕುರಿತು ಪ್ರಕರಣವನ್ನು ದಾಖಲು ಮಾಡಿ ವಿಚಾರಣೆ ನಡೆಸಲು ಆದೇಶ ನೀಡಿದರು. ತಾಲೂಕಿನ ಬಗರ್ ಹುಕುಂ ಸಾಗುವಳಿ ಪ್ರಕರಣಗಳ ಸರ್ವೇಕಾರ್ಯ ಮುಕ್ತಾಯಗೊಂಡಿದೆ ಎಂದು ಪ್ರಕಟಿಸಿದ ಸಚಿವರು ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ತಾವು ಸಿಪಿಎಂ ಶಾಸಕ ಜೆ.ಪಿ. ಶ್ರೀರಾಮರೆಡ್ಡಿಯವರೊಂದಿಗೆ ಬಂದು ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುವುದಾಗಿ ಮತ್ತೊಮ್ಮೆ ಭರವಸೆ ನೀಡಿದರು.

ಹಸನಾಬಾದಿ ಪ್ರಕರಣಕ್ಕೆ ತಾಲೂಕಿನ ಮೂಲೆಮೂಲೆಗಳಿಂದ ವ್ಯಕ್ತವಾದ ಬೆಂಬಲ ಇಲ್ಲಿಯ ಭೂ ಹೋರಾಟಕ್ಕೆ ಹೊಸದೊಂದು ಆಯಾಮ ದೊರಕಿಸಿದಂತಾಗಿದೆ. ಮುಳಥಳ್ಳಿ, ಡಮನಾಳ, ಕರೆಕ್ಯಾತನಹಳ್ಳಿ, ಬ್ಯಾತನಾಳ, ಶ್ಯಾಡಗುಪ್ಪಿ, ಜಂಗಿನಕೊಪ್ಪ, ಹನುಮನಕೊಪ್ಪ, ಬಾಳಿಹಳ್ಳಿ, ಮಂತಿಗಿ, ಶಿವಪುರ, ಗುಂಡೂರು, ಹುಣಸಿಕಟ್ಟೆ, ಬಿಂಗಾಪುರ, ಕಾಡಶೆಟ್ಟಿಹಳ್ಳಿ, ಬೈಚಹಳ್ಳಿ, ದಶರಥಕೊಪ್ಪ, ಯಲಿವಾಳ ಮತ್ತು ಹಸನಾಬಾದಿ ಗ್ರಾಮಗಳ ಕೂಲಿಕಾರ ಸ್ತ್ರೀಪುರುಷರು ಭಾಗವಹಿಸಿದ್ದ ಈ ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ನಿತ್ಯಾನಂದಸ್ವಾಮಿ, ಸಿ.ಆರ್.ಭಟ್, ಹಕ್ಕಲಗೌಡ ಪಾಟೀಲ್, ಸಹದೇವಪ್ಪ ಶರಬಣ್ಣನವರ್, ಮುರಾರಿ ಡಾಂಗೆ, ಜಯಶೀಲವ್ವ ಮೂಡಿ, ಶಂಬಣ್ಣ ವಾಲೇಕಾರ್, ಮಹಮ್ಮದ್ ಮಿಯಾ ಸಾಬ ಮೊದಲಾದವರು ವಹಿಸಿದ್ದರು.

ಗಾಳಿಪಟದ ಸ್ಪರ್ಧೆ

ದೊಡ್ಡಬಳ್ಳಾಪುರ: ಪ್ರತಿ ವರ್ಷದಂತೆ ಈ ವರ್ಷವೂ ಸಹ ಜುಲೈ 17ರಂದು ಗಾಳಿಪಟದ ಸ್ಪರ್ಧೆಯನ್ನು ಡಿವೈಎಫ್‌ಐ ದೊಡ್ಡಬಳ್ಳಾಪುರ ತಾಲೂಕು ಸಮಿತಿಯು ಬೋರ್‌ವೆಲ್ ಪಿಚ್ ಮೈದಾನದಲ್ಲಿ ಏರ್ಪಡಿಸಿತ್ತು. ಸ್ಪರ್ಧೆಯನ್ನು ವೀಕ್ಷಿಸಲು ಸುಮಾರು 500 ಜನರು ಸೇರಿದ್ದರು. 44 ಸ್ಪರ್ಧಿಗಳು ಭಾಗವಹಿಸಿದ್ದರು. ತೀರ್ಪುಗಾರರಾಗಿ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರಾದ ಸನಾತನ ಮೂರ್ತಿ, ರಾಜ್ಯ ಸಮಿತಿಯ ಸದಸ್ಯರಾದ ಬಿ.ಜಿ.ಹೇಮಂತರಾಜ್ ಆಗಮಿಸಿದ್ದರು.

ಬಹುಮಾನ ವಿತರಣೆಯನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಡಾ.ಶ್ರೀ ಧರ್ಮ ರಾಯ ಇಂಗಳೆಯವರು ಮಾಡಿದರು. ಸಿಪಿಐ(ಎಂ)ನ ಮುಖಂಡರು ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆದ ಕಾಂ.ಮುಗವಾಳಪ್ಪನವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಒತ್ತುವರಿ ಭೂಮಿ ಸಕ್ರಮಗೊಳಿಸಲು ಒತ್ತಾಯಿಸಿ

ಮುಖ್ಯಮಂತ್ರಿ ಮನೆ ಮುಂದೆ ರೈತ-ಕೃಷಿ ಕೂಲಿಕಾರರ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಜುಲೈ 26ರಂದು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ತಮ್ಮ ಬೇಡಿಕೆಗಳಾದ ಒತ್ತುವರಿ ಜಮೀನನ್ನು ತಕ್ಷಣ ಸಕ್ರಮಗೊಳಿಸಬೇಕು, ಭೂ ಹಂಚಿಕೆ ಸಮಿತಿಗಳ ವಿಳಂಬ ನೀತಿ ಹಾಗೂ ಒತ್ತುವರಿ ಭೂಮಿಗೆ ಅರ್ಜಿ ಹಾಕಲು ಫಾರಂ ನಂ. 50 ತುಂಬಲು ಮತ್ತೊಂದು ಅವಕಾಶಕ್ಕಾಗಿ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ರೈತ-ಕೃಷಿ ಕೂಲಿಕಾರರು ನಗರದ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ನಡೆಸಿ ಧರಣಿ ಸತ್ಯಾಗ್ರಹ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಸಂಘದ ಮಾರುತಿ ಮಾನ್ಪಡೆ, ಪಿ.ಜಗನ್ನಾಥ್‌ರವರು ರಾಜ್ಯ ಸರಕಾರ ಏರಿಸಿರುವ ವಿದ್ಯುತ್ ದರವನ್ನು ಇಳಿಸುವಂತೆ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಮಾಡಿರುವ ಕಡಿತದಿಂದಾಗಿ ಗ್ರಾಮೀಣ ಜನತೆಗೆ ತುಂಬಾ ಅನಾನುಕೂಲವಾಗಿದೆ. ಇದರಿಂದಾಗಿ ಪಡಿತರ ವಿತರಣೆಯಲ್ಲಿ ಮಾಡಿರುವ ಕಡಿತವನ್ನು ತೆಗೆದು ಹಾಕುವಂತೆ ಒತ್ತಾಯಿಸಿದರು.

ಮುಂಗಾರು ವಿಫಲವಾಗಿರುವ ಪ್ರದೇಶದಲ್ಲಿ ಬರ ಪರಿಹಾರ ಕಾರ್ಯ ಪ್ರಾರಂಭಿಸಬೇಕು. ತೊಗರಿ ಬೆಳೆಗಾರರಿಗೆ, ಟೊಮೋಟೊ ಬೆಳೆಗಾರರಿಗೆ ಇನ್ನಿತರ ಬೆಳೆಗಾರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ರೈತ ಸಂಘದ ಉಪಾಧ್ಯಕ್ಷರಾದ ಕಾಂ.ಚಂದ್ರಶೇಖರ ಬಾಳೆ ಸರಕಾರವನ್ನು ಒತ್ತಾಯಿಸಿದರು.

ಧರಣಿ ನಿರತರತ್ತ ಮುಖ್ಯಮಂತ್ರಿ ಪಟೇಲ್ ಕಾನೂನು ಸಚಿವ ನಾಣಯ್ಯ, ಕಂದಾಯ ಸಚಿವ ಜಿಗಜಿಣಗಿ, ಕೃಷಿ ಸಚಿವ ಬೈರೇಗೌಡ ಹಾಗೂ ವಸತಿ ಸಚಿವ ರೇವಣ್ಣನವರು ಆಗಮಿಸಿ ಮನವಿ ಸ್ವೀಕರಿಸಿದರು.

ಸಚಿವರುಗಳು ಅಕ್ರಮ ಸಾಗುವಳಿದಾರರಿಗೆ ಫಾರಂ ನಂ. 50 ಸಲ್ಲಿಸಲು ಕಾನೂನಿನಲ್ಲಿ ತಿದ್ದುಪಡಿ ತಂದು ಮತ್ತೊಂದು ಅವಕಾಶ ನೀಡುವುದಾಗಿ ತಿಳಿಸಿದರು. ಪಡಿತರ ವ್ಯವಸ್ಥೆಯನ್ನು ಸರಿಪಡಿಸುವ ಭರವಸೆಯನ್ನು ಅದೇ ಸಂದರ್ಭದಲ್ಲಿ ನೀಡಿದರು. ಹಾಗೂ ಇನ್ನಿತರೆ ಸಮಸ್ಯೆಗಳ ಪರಿಹಾರಕ್ಕೆ ರೈತ ಕೂಲಿಕಾರರ ಸಂಘದ ಪದಾಧಿಕಾರಿಗಳ ಸಭೆ ಕರೆಯುವುದಾಗಿಯೂ ತಿಳಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಭೀಮಸಿ ಕಲಾದಗಿ, ಎನ್.ವೆಂಕಟಾಚಲಯ್ಯ ಹಾಗೂ ಶಾಮಣ್ಣ ರೆಡ್ಡಿ ಮುಂತಾದವರು ಪಾಲ್ಗೊಂಡಿದ್ದರು.

ಬಿಹೆಚ್‌ಇಎಲ್‌ನಲ್ಲಿ ಕಾಂ.ಸೂರಿ ಮತ್ತು ಬೆಂಬಲಿಗರಿಗೆ ಜಯ

ಬೆಂಗಳೂರಿನಲ್ಲಿರುವ ಪ್ರಮುಖ ಸಾರ್ವಜನಿಕ ವಲಯದ ಸಂಸ್ಥೆ ಬಿಹೆಚ್‌ಇಎಲ್ ಕಾರ್ಮಿಕ ಸಂಘಕ್ಕೆ ನಡೆದ ಚುನಾವಣೆಗಳಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷ ಎಸ್.ಸೂರ್ಯನಾರಾಯಣರಾವ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರು ಮೈಕೆಲ್ ಫರ್ನಾಂಡಿಸ್‌ರವರನ್ನು 135 ಮತಗಳಿಂದ ಸೋಲಿಸಿದರು. ಸೂರ್ಯನಾರಾಯಣ ರಾವ್ ಅವರಿಗೆ 775 ಮತಗಳು ದೊರೆತವು. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ವಿ.ವಿ.ಚಂದ್ರನ್ 233 ಮತಗಳ ಅಂತರದಿಂದ ಆರಿಸಿಬಂದರು. ಉಪಾಧ್ಯಕ್ಷ ಸ್ಥಾನಕ್ಕೆ ಅಶ್ವಥನಾರಾಯಣ, ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ ಎನ್.ವಿ.ಕೆ.ಉಡುಪ ಹಾಗೂ ಖಜಾಂಚಿಯಾಗಿ ಶೇಖರ್ ಶೆಟ್ಟಿಗಾರ್ ಆಯ್ಕೆಯಾಗಿದ್ದಾರೆ.

ಕನಿಷ್ಠ ವೇತನಕ್ಕಾಗಿ ಆಗ್ರಹಿಸಿ ಸಹಸ್ರಾರು ಅಂಗನವಾಡಿ ನೌಕರರಿಂದ ಪಿಕೆಟಿಂಗ್

ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಸ್ರಾರು ಅಂಗನವಾಡಿ ನೌಕರರು ಕನಿಷ್ಠ ವೇತನ ಜಾರಿ ಮಾಡಬೇಕು, ಎಲ್ಲಾ ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕು, ಅಂಗನವಾಡಿ ಕೇಂದ್ರಗಳ ಖಾಸಗೀಕರಣ ಕೈಬಿಡಬೇಕು ಹಾಗೂ ಅಂಗನವಾಡಿ ಕೇಂದ್ರಗಳಿಗೆ ಒದಗಿಸುತ್ತಿರುವ ಆಹಾರ ಖರೀದಿಯಲ್ಲಿ ನಡೆದಿರುವ 25 ಕೋಟಿ ರೂಗಳ ಅವ್ಯವಹಾರ ಪ್ರಕರಣದಲ್ಲಿ ಭಾಗಿಯಾಗಿರುವ ಅಪರಾಧಿಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಹಸ್ರಾರು ಅಂಗನವಾಡಿ ನೌಕರರು ಮತ್ತು ಬೆಂಗಳೂರಿನಲ್ಲಿ ಜಿಪಿಓ ಕಚೇರಿಯ ಎದುರು ಬೃಹತ್ ಪ್ರಮಾಣದಲ್ಲಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.



ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು) ರಾಜ್ಯ ಸಮಿತಿ ಸಂಘಟಿಸಿದ್ದ ಈ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್, ರಾಜ್ಯ ಸಹ ಕಾರ್ಯದರ್ಶಿ ಪ್ರಸನ್ನಕುಮಾರ್, ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವರಲಕ್ಷ್ಮಿ, ರಾಜ್ಯ ಅಧ್ಯಕ್ಷೆ ಎನ್.ಪ್ರಭಾ, ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ನೀಲಾ.ಕೆ., ಎಸ್‌ಎಫ್‌ಐನ ಬಸಮ್ಮ, ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್‌ನ ಮಧುರಾ, ಹಾಗೂ ಬೇರೆ ಜಿಲ್ಲೆಗಳಿಂದ ಬಂದಿದ್ದ ಅಂಗನವಾಡಿ ನೌಕರರ ಸಂಘದ ಮುಖಂಡರು ಮಾತನಾಡಿದರು. ಸರಕಾರ ಅಂಗನವಾಡಿ ನೌಕರರ ಬೇಡಿಕೆಗಳ ಕುರಿತು ವಹಿಸಿರುವ ದಿವ್ಯ ನಿರ್ಲಕ್ಷ್ಯಕ್ಕೆ ತೀವ್ರವಾದ ಖಂಡನೆ ವ್ಯಕ್ತಪಡಿಸಿದರು. ಮಾತ್ರವಲ್ಲ ಅಂಗನವಾಡಿ ನೌಕರರನ್ನು ಎಲ್ಲಾ ರೀತಿಯ ಸವಲತ್ತುಗಳಿಂದ ವಂಚಿತರನ್ನಾಗಿ ಮಾಡುತ್ತಿರುವ ಕೇಂದ್ರದ ಮತ್ತು ರಾಜ್ಯ ಸರಕಾರಗಳ ಶ್ರಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ವಿರೋಧಿಸಿ ಬೃಹತ್ ಹೋರಾಟ ರೂಪಿಸಲು ಕರೆ ನೀಡಿದರು.

ಕರ್ನಾಟಕದಲ್ಲಿ ಕಳೆದ ವಾರ

ಜುಲೈ 24

- ವೀರಪ್ಪನ್ ಒತ್ತೆಯಾಳುಗಳಾಗಿ ಇಟ್ಟುಕೊಂಡಿರುವ ಒಂಭತ್ತು ಮಂದಿ ಅರಣ್ಯ ಸಿಬ್ಬಂದಿಗಳು ಬರೆದ ಪತ್ರ ಮತ್ತು ವಿಡಿಯೋ ಕ್ಯಾಸೆಟ್ ತಮಿಳುನಾಡಿನ ಡಿಜಿಪಿಯಿಂದ ಕರ್ನಾಟಕದ ಡಿಜಿಪಿಗೆ ಹಸ್ತಾಂತರ. ತನಗೆ ಕ್ಷಮಾದಾನ ನೀಡದಿದ್ದರೆ ಈ ಸಿಬ್ಬಂದಿಯನ್ನು ಕೊಲ್ಲುವುದಾಗಿ ವೀರಪ್ಪನ್ ಬೆದರಿಸಿರುವುದಾಗಿ ವರದಿ.
- ಬಯಲುಸೀಮೆಯ ನೀರಾವರಿ ಮೂಲಗಳಾದ ಕೆರೆಗಳಲ್ಲಿನ ಹೂಳೆತ್ತಲು 3 ವರ್ಷಗಳ ಸಮಗ್ರ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಎಂದು ಕೃಷಿ ಸಚಿವರು.

ಜುಲೈ 25

- ಚಿಂತಾಮಣಿಯಲ್ಲಿ ಟೊಮೊಟೋ ಬೆಲೆ ಕುಸಿತಗಳ ವಿರುದ್ಧ ಪ್ರತಿಭಟಿಸುತ್ತಿದ್ದ ರೈತರ ಮೇಲೆ ಲಾಠಿ ಪ್ರಹಾರ, ಗಾಳಿಯಲ್ಲಿ ಗುಂಡು.

ಜುಲೈ 26

- ಅಂಬೇಡ್ಕರ್ ಪ್ರತಿಮೆಯ ಅಪಮಾನಕ್ಕೆ ಪ್ರತಿಭಟನೆಯ ಹಿನ್ನೆಲೆಯಲ್ಲಿ ಇಳಕಲ್‌ನಲ್ಲಿ ಗೋಲೀಬಾರ್, ಕರ್ಫ್ಯೂ, ಒಬ್ಬ ಬಲಿ.
- ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಯ ಕುಟುಂಬಗಳಿಗಾಗಿ ರಾಜ್ಯಾದ್ಯಂತ 3080 ಮನೆ ಕಟ್ಟಿಸಿಕೊಡಲು ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರ ಪ್ರಕಟಣೆ.
- ಭಟ್ಕಳದ ಶಾಸಕ ಚಿತ್ತರಂಜನ್‌ರ ಕೊಲೆಯ ನ್ಯಾಯಾಂಗ ತನಿಖೆ ನಡೆಸುತ್ತಿರುವ ಆಯೋಗದೆದುರು ಸಾಕ್ಷಿ ನೀಡಬೇಕಾಗಿದ್ದ ಅಲ್ಲಿಯ ಹಾಲಿ ಬಿಜೆಪಿ ಶಾಸಕರ ಗೈರುಹಾಜರಿ. ಸಾಕ್ಷ್ಯವನ್ನು ಸೆಪ್ಟೆಂಬರ್‌ಗೆ ಮುಂದೂಡಬೇಕೆಂಬ ಅವರ ಮನವಿಗೆ ನಕಾರ. ಆಗಸ್ಟ್ 23 ರಂದೇ ಹಾಜರಾಗಿ ಸಾಕ್ಷ್ಯ ನೀಡಲು ಸಮನ್ಸ್.

ಜುಲೈ 27

- ಇಳಕಲ್‌ನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಮುಂದುವರಿಕೆ. ಗೋಲೀಬಾರಿನಿಂದ ಸತ್ತವರ ಸಂಖ್ಯೆ 2.
- ಎನ್.ಜಿ.ಇ.ಎಫ್. ಪುನರುಜ್ಜೀವನ ಕಾರ್ಯಕ್ಕೆ ಕೆಲ ರಾಜಕಾರಣಿಗಳು, [illegible]ನೆಯ ಅಧಿಕಾರಿಗಳು ಹಾಗೂ ಸಚಿವಾಲಯದ ಅಧಿಕಾರಿಗಳ ಅಡ್ಡಗಾಲಿನಿಂದಾಗಿ ಹಿನ್ನಡೆ ಎಂದು ವರದಿಯಾಗಿದೆ.

ಜುಲೈ 28

- ವಾರಾಹಿ ಜಲಾನಯನ ಪ್ರದೇಶದಲ್ಲಿ ಸತತ ಮಳೆಯಿಂದಾಗಿ ಪ್ರವಾಹದ ಭೀತಿ.
- ರಾಜ್ಯ ವಿಧಾನಮಂಡಳದ ಮುಂಗಾರು ಅಧಿವೇಶನ ಆರಂಭ.
- ರಾಜ್ಯದಿಂದಎಐಸಿಸಿಗೆ 48ಮಂದಿಯ ಆಯ್ಕೆ. ಅಧ್ಯಕ್ಷರ ಅಂಗೀಕಾರ.

ಜುಲೈ 29


- ವಿದ್ಯುತ್ ದರ ಏರಿಕೆ ಹಿಂತೆಗೆದುಕೊಳ್ಳಲು ನಿರಾಕರಿಸಿದ ಸರಕಾರದ ನಿಲುವನ್ನು ವಿರೋಧಿಸಿ ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಧರಣಿ.
- ಕಲ್ಬುರ್ಗಿ ತೋಟಗಾರಿಕೆ ಇಲಾಖೆಯಲ್ಲಿ 1994-95 ರ ಅವಧಿಯಲ್ಲಿ 5 ಕೋಟಿ ರೂ.ಗಳ ದುರುಪಯೋಗವನ್ನು ಲೋಕಾಯುಕ್ತ ಪತ್ತೆ ಮಾಡಿದೆ.

ಜುಲೈ 30

- ವಿದ್ಯುತ್ ದರ ಏರಿಕೆಯ ಬಗ್ಗೆ ಸದನ ಸಮಿತಿ ರಚನೆಗೆ ಸರಕಾರದ ನಕಾರವನ್ನು ಪ್ರತಿಭಟಿಸಿ ವಿಧಾನ ಮಂಡಲದಲ್ಲಿ ಪ್ರತಿಪಕ್ಷದ ಸದಸ್ಯರಿಂದ ರಾತ್ರಿಯಿಡೀ ಧರಣಿ.

ಏಜೆನ್ಸಿದಾರರಿಗೆ ಸೂಚನೆ

ದುಡಿಯುವ ಜನ ಸಮೂಹಗಳಿಗೆ ಮುಡಿಪಿಟ್ಟ ಬದುಕು:ಕಾಂ. ನಲ್ಲಶಿವನ್



ಜುಲೈ 20, 1997 ರಂದು ಸ್ವಂತ ಪಟ್ಟಣ ತಿರುನಲ್ವೇಲಿ(ತಮಿಳುನಾಡು)ಯಲ್ಲಿ ನಿಧನರಾದ ಕಾಂ.ಎ.ನಲ್ಲಶಿವನ್ ಸರಳತೆ, ಪ್ರಾಮಾಣಿಕತೆ ಹಾಗೂ ತ್ಯಾಗದ ಮೂರ್ತಿಯಾಗಿದ್ದರು.

1922 ರಲ್ಲಿ ತಿರುನಲ್ವೇಲಿ ಜಿಲ್ಲೆಯ ಅಂಬಸಮುದ್ರಂ ತಾಲ್ಲೂಕಿನ ಬ್ರಹ್ಮದೇಶಂ ಗ್ರಾಮದಲ್ಲಿ ಒಂದು ಮಧ್ಯಮ ವರ್ಗದಲ್ಲಿ ಜನಿಸಿದ ನಲ್ಲಶಿವನ್ ತನ್ನ ಹಳ್ಳಿ ಮತ್ತು ಅಂಬಸಮುದ್ರಂನಲ್ಲಿ ಶಿಕ್ಷಣ ಪಡೆದರು. 1939 ರಲ್ಲಿ ಶಾಲಾ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ ಇಡೀ ಮದ್ರಾಸ್ ಪ್ರೆಸಿಡೆನ್ಸಿಯಲ್ಲೇ ಅವರು ಮೂರನೇ ಸ್ಥಾನ ಗಳಿಸಿದ್ದರು. ತಿರುನಲ್ವೇಲಿಯ ಹಿಂದೂ ಕಾಲೇಜ್ ಸೇರಿದರೂ ಫುಟ್ ಬಾಲ್ ಆಟದಲ್ಲಿ ಬಲಗೈ ಮುರಿದುದರಿಂದ ಕೊನೆಗೆ ಶಿಕ್ಷಣ ಮುಂದುವರಿಸಲಾಗಲಿಲ್ಲ.

ಗಾಂಧಿವಾದದಿಂದ ಮಾರ್ಕ್ಸ್‌ವಾದದತ್ತ

1940 ರಲ್ಲಿ ಖಿರಸ್‌ಪುರದಲ್ಲಿ ನೆಹರೂರವರ ಬಂಧನವಾದಾಗ ಅದನ್ನು ಪ್ರತಿಭಟಿಸಿ ನಲ್ಲಶಿವನ್, ತನ್ನ ಗೆಳೆಯನೊಬ್ಬನ ಸಹಕಾರದೊಂದಿಗೆ ವಿದ್ಯಾರ್ಥಿಗಳ ಒಂದು ಮೆರವಣಿಗೆ ನಡೆಸಿದರು. ನಲ್ಲಶಿವನ್ ರಾಜಕೀಯ ಜೀವನ ಆರಂಭಿಸಿದ್ದು ಗಾಂಧೀಜಿಯ ಕಟ್ಟಾ ಅನುಯಾಯಿಯಾಗಿ. ಕಮ್ಯುನಿಸ್ಟ್ ಸಿದ್ಧಾಂತದೊಡನೆ ಅವರ ಮೊದಲ ಮುಖಾಮುಖಿಯಾಗಿದ್ದು ಅವರ ಜಿಲ್ಲೆಯ ಒಂದು ವಿದ್ಯುತ್ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಕೆ.ಸೆಲ್ವರಾಜ್ ಎಂಬುವರನ್ನು ಭೇಟಿಯಾದಾಗ. ಅವರು ಅಲ್ಲಿಗೆ ಹೋಗಿದ್ದದ್ದು ಕಮ್ಯುನಿಸ್ಟರಾಗಿದ್ದ ಸೆಲ್ವರಾಜ್‌ರೊಂದಿಗೆ ವಾಗ್ವಾದಮಾಡಿ ಗಾಂಧಿವಾದ ಮತ್ತು ಕಾಂಗ್ರೆಸ್ ರಾಜಕೀಯದ ಹಿರಿಮೆಯನ್ನು ಸ್ಥಾಪಿಸಲಿಕ್ಕಾಗಿ. ಆದರೆ ಫಲಿತಾಂಶ ತದ್ವಿರುದ್ಧವಾಗಿತ್ತು. ನಲ್ಲಶಿವನ್‌ಗೆ ಮಾರ್ಕ್ಸ್‌ವಾದಿ ವಿಚಾರಧಾರೆಯಲ್ಲಿ ಆಸಕ್ತಿಯುಂಟಾಯಿತು. ಅವರು ಕಮ್ಯುನಿಸ್ಟ ಸಾಹಿತ್ಯದ ಅಧ್ಯಯನ ಮಾಡಲಾರಂಭಿಸಿದರು.

ಪ್ರಾಥಮಿಕ ಶಾಲಾ ಮಾಸ್ತರರಾಗಿ ಜೀವನ ಆರಂಭಿಸಿದ ನಲ್ಲಶಿವನ್ ತನ್ನ ಪಟ್ಟಣದ ಖಾದಿ ವಸ್ತ್ರಾಲಯದಲ್ಲಿ ಸಹಾಯಕ ಮ್ಯಾನೇಜರ್ ಆಗಿ ಕೆಲಸ ಮಾಡಲಾರಂಭಿಸಿದರು. ಆದರೆ ಅವರು ಕಮ್ಯುನಿಸ್ಟ್ ಸಾಹಿತ್ಯವನ್ನು ಓದುವುದನ್ನು ಕಂಡ ಮ್ಯಾನೇಜರ್ ಅವರನ್ನು ಕೆಲಸದಿಂದ ತೆಗೆದುಹಾಕಿದ. ಅಲ್ಲಿಗೆ ನಲ್ಲಶಿವನ್‌ರ ನೌಕರಿ ಜೀವನ ಮುಕ್ತಾಯಗೊಂಡಿತು.

ಕಾರ್ಮಿಕ ವರ್ಗದ ಸಂಘಟನೆಯಲ್ಲಿ

1940 ರಲ್ಲಿ ಕಾಂ. ನಲ್ಲಶಿವನ್ ಕಮ್ಯುನಿಸ್ಟ್ ಪಕ್ಷ ಸೇರಿದರು. ಸ್ವಲ್ಪ ಸಮಯದಲ್ಲೇ ಪೂರ್ಣಕಾಲದ ಕಾರ್ಯಕರ್ತರಾದರು. ಕಾರ್ಮಿಕ ಸಂಘಟನೆಯಲ್ಲಿ ಕೆಲಸ ಮಾಡಲಾರಂಭಿಸಿದರು. ಅವರು ಸ್ವಲ್ಪ ಸಮಯದಲ್ಲೇ ತಿರುನಲ್ವೇಲಿ ಜಿಲ್ಲೆಯ ಪ್ರಮುಖ ಕಾರ್ಮಿಕ ಮುಖಂಡರಾಗಿ ಬೆಳೆದರು. 1943 ರಿಂದ 47 ರ ವರೆಗೆ ವಿಕ್ರಮಸಿಂಗ್‌ಪುರದ ಜವಳಿ ಯೂನಿಯನ್‌ನ ಜೊತೆ ಕಾರ್ಯದರ್ಶಿಯಾಗಿ, ನಂತರ 1959 ರ ವರೆಗೆ ಅದೇ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ದುಡಿದರು. ಇನ್ನೊಂದು ಜವಳಿ ಕಾರ್ಮಿಕ ಸಂಘದ ಮುಖಂಡರೂ ಆದರು. ತಿರುನಲ್ವೇಲಿ ಜಿಲ್ಲಾ ಸಾರಿಗೆ ನೌಕರರ ಸಂಘದ ಕಾರ್ಯದರ್ಶಿಯಾಗಿದ್ದಾಗ 1961 ರಲ್ಲಿ ಒಂದು ಸಾರಿಗೆ ಕಂಪನಿ 13 ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದನ್ನು ವಿರೋಧಿಸಿ ಅವರು 11 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದರು. ಕಾರ್ಮಿಕ ಸಂಘಟನೆಗಳಲ್ಲಿ ಅವರ ಸತತ ಕೆಲಸದಿಂದಾಗಿ ಆಗಿನ ಎಐಟಿಯುಸಿಯ ಅಖಿಲ ಭಾರತ ಮಹಾಮಂಡಳಿ ಹಾಗೂ ತಮಿಳುನಾಡು ರಾಜ್ಯ ಮಂಡಳಿ ಸದಸ್ಯರೂ ಆದರು. ನಂತರ ಸಿಐಟಿಯು ಸ್ಥಾಪನೆಯಾದಾಗ ತಮಿಳುನಾಡಿನಲ್ಲಿ ಅದರ ಸ್ಥಾಪಕ ಕಾರ್ಯದರ್ಶಿಯಾಗಿ 1971 ರಿಂದ 1980 ರವರೆಗೂ ಸೇವೆ ಸಲ್ಲಿಸಿದರು. ನಂತರ 1980 ರಿಂದ 1983 ರವರೆಗೆ ಉಪಾಧ್ಯಕ್ಷರಾಗಿದ್ದರು.

ಅವಿಭಜಿತ ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ರಾಜ್ಯ ಮಂಡಳಿ ಸದಸ್ಯರಾಗಿ 1959 ರಿಂದ 1964 ರವರೆಗೆ ದುಡಿದ ನಲ್ಲಶಿವನ್ ಸಿಪಿಐ(ಎಂ) ಸ್ಥಾಪನೆಯಾದಾಗ ತಮಿಳುನಾಡು ರಾಜ್ಯ ಸಮಿತಿ ಸದಸ್ಯರಾದರು. 1968 ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದರು. 1981 ರಲ್ಲಿ ಸಿಪಿಐ(ಎಂ)ನ ತಮಿಳುನಾಡು ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅಂದಿನಿಂದ 1994 ರವರೆಗೆ ಅನಾರೋಗ್ಯದಿಂದ ಹುದ್ದೆಯನ್ನು ಬಿಟ್ಟು ಕೊಡುವವರೆಗೆ ಅವರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು.

1978 ರಲ್ಲಿ ಕಾಂ. ನಲ್ಲಶಿವನ್ ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದರು. 1988 ರಲ್ಲಿ ಅವರು ಪೊಲಿಟ್ ಬ್ಯೂರೋಗೆ ಆಯ್ಕೆಗೊಂಡು 1995 ರ ವರೆಗೂ ಅಖಿಲ ಭಾರತ ಸಿಪಿಐ(ಎಂ)ನ ಅತ್ಯುನ್ನತ ಮುಖಂಡರುಗಳಲ್ಲೊಬ್ಬರಾಗಿ ಕಾರ್ಯ ನಿರ್ವಹಿಸಿದರು. 1995 ರಲ್ಲಿ ಅನಾರೋಗ್ಯದ ನಿಮಿತ್ತ ಪೊಲಿಟ್ ಬ್ಯೂರೋ ಸದಸ್ಯರಾಗಿ ಮುಂದುವರಿಯಲು ಇಚ್ಛಿಸದೆ ಅವರು ಕೇಂದ್ರ ಸಮಿತಿ ಸದಸ್ಯರಾಗಿ ಕೊನೆಯ ಉಸಿರಿನವರೆಗೂ ದುಡಿಯುವ ಜನರ ಪಕ್ಷಕ್ಕಾಗಿ ದುಡಿದರು.

ಜೈಲುವಾಸ-ಭೂಗತ ಜೀವನ

ತನ್ನ ದೀರ್ಘ ರಾಜಕೀಯ ಜೀವನದಲ್ಲಿ ಕಾಂ. ನಲ್ಲಶಿವನ್ ಹಲವು ಬಾರಿ ಜೈಲುವಾಸ, ಭೂಗತ ಜೀವನ ನಡೆಸಬೇಕಾಗಿ ಬಂತು. ವಿಕ್ರಮಸಿಂಗಪುರಮ್ ಕೊಲೆ ಮೊಕದ್ದಮೆಯಲ್ಲಿ ಅವರನ್ನು ಬಂಧಿಸಿ ಹತ್ತು ತಿಂಗಳು ಜೈಲಿನಲ್ಲಿಡಲಾಯಿತು. ತಿರುನಲ್ವೇಲಿ ಪಿತೂರಿ ಮೊಕದ್ದಮೆಯಲ್ಲಿಯೂ ಅವರ ಮೇಲೆ ಆಪಾದನೆ ಹೊರಿಸಿ 1949 ರಿಂದ 1952 ರ ವರೆಗೆ ಹಾಗೂ 1965-66 ರಲ್ಲಿ ಮತ್ತೆ ಅವರು ಜೈಲುವಾಸ ಅನುಭವಿಸಿದರು. ಪಕ್ಷದ ಕಲ್ಕತ್ತಾ ಮಹಾಧಿವೇಶನದ ಮೊದಲು 1947 ರಲ್ಲಿ ಹಾಗೂ ನಂತರ 1948 ರಲ್ಲಿ ಅವರು ಭೂಗತರಾಗಬೇಕಾಗಿ ಬಂತು. 1949 ರಲ್ಲಿ ಬಂಧನಕ್ಕೊಳಗಾಗುವವರೆಗೂ ಅವರು ಭೂಗತರಾಗಿ ಪಕ್ಷದ ಚಟುವಟಿಕೆ ನಡೆಸಿದರು. ನಂತರ 1976 ರಲ್ಲಿ ತುರ್ತು ಪರಿಸ್ಥಿತಿ ಕಾಲದಲ್ಲಿ ಮತ್ತೆ ಒಂದು ವರ್ಷ ಕಾಲ ಅವರು ಭೂಗತರಾಗಿದ್ದರು. ಜೈಲು ಜೀವನದಲ್ಲಿ ಅವರು ತೀವ್ರ ಚಿತ್ರಹಿಂಸೆಯನ್ನು ಅನುಭವಿಸಿದರು. ಇದರಿಂದಾಗಿ ಅವರ ಬಲಗೈ ಮುರಿದಿತ್ತು.

ಶಾಸಕರಾಗಿ

ಕಾಂ. ನಲ್ಲಶಿವನ್ 1978 ರಿಂದ 1984 ರ ವರೆಗೆ ತಮಿಳುನಾಡು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. 1989 ರಲ್ಲಿ ರಾಜ್ಯ ಸಭೆಗೆ ಚುನಾಯಿತರಾಗಿ 1995 ರ ವರೆಗೂ ಆ ಸದನದ ಸದಸ್ಯರಾಗಿ ಕಲಾಪಗಳಲ್ಲಿ ಪ್ರಭಾವ ಬೀರಿದರು. ಕಾರ್ಮಿಕರ ಮತ್ತು ಜನಸಾಮಾನ್ಯರ ಹಲವು ಪ್ರಶ್ನೆಗಳಿಗೆ ಈ ಸದನಗಳಲ್ಲಿ ಅವರು ದನಿ ನೀಡಿದರು. 1961 ರಲ್ಲಿ ಮಾಸ್ಕೋದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಗಳ ಸಮ್ಮೇಳನದಲ್ಲಿ ಭಾಗವಹಿಸಿದರು. 1986 ರಲ್ಲಿ ಚೀನಾ ಭೇಟಿ ನೀಡಿದ ಸಿಪಿಐ(ಎಂ) ನಿಯೋಗದಲ್ಲಿ ಅವರು ಒಬ್ಬ ಸದಸ್ಯರಾಗಿದ್ದರು. ಕ್ಯೂಬಾದ ಮೊಂಕಾಡಾ ದಂಗೆಯ 30ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಆ ದೇಶಕ್ಕೆ ಭೇಟಿ ನೀಡಿದರು. 1989 ರಲ್ಲಿ ಸಿಪಿಐ(ಎಂ) ನಿಯೋಗದ ಸದಸ್ಯರಾಗಿ ಮಾಸ್ಕೋಗೆ ಹಾಗೂ 1991 ರಲ್ಲಿ ಉತ್ತರ ಕೋರಿಯಾಕ್ಕೆ ಭೇಟಿ ನೀಡಿದರು. ಈ ಎಲ್ಲಾ ಅವರ ವಿದೇಶಿ ಪ್ರವಾಸಗಳ ಕಥನಗಳು ತಮಿಳು ಭಾಷೆಯಲ್ಲಿ ಪ್ರಕಟವಾಗಿವೆ.

ಕಾಂ. ನಲ್ಲಶಿವನ್ ಪತ್ನಿ ಶಾಂತಿಮಣಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಕಾಂ. ನಲ್ಲಶಿವನ್ ತನ್ನ ಸುಮಾರು ನಾಲ್ಕು ದಶಕಗಳ ರಾಜಕೀಯ ಜೀವನವನ್ನು ಸಂಪೂರ್ಣವಾಗಿ ದುಡಿಯುವ ಜನ ಸಮೂಹಗಳಿಗೆ ಅರ್ಪಿಸಿರುವ ಒಬ್ಬ ಸಮರ್ಪಿತ ಕಮ್ಯುನಿಸ್ಟ್ ಮುಖಂಡ. ಪಕ್ಷದ, ಸಿಐಟಿಯುನ ಹಾಗೂ ಒಟ್ಟು ಪ್ರಜಾಪ್ರಭುತ್ವ ಆಂದೋಲನದ ಬೆಳವಣಿಗೆಗೆ ಅವರ ಕಾಣಿಕೆ ಒಂದು ಚಿರಸ್ಮರಣೀಯ ಮಾದರಿ.

ಶ್ರದ್ಧಾಂಜಲಿ



ಆತ್ಮೀಯ ನೇತಾರ

ಸರಳತೆ ಹಾಗೂ ವಿನಯ ಶೀಲತೆಗೆ ಹೆಸರಾದವರು ಕಾಮ್ರೇಡ್ ನಲ್ಲಶಿವನ್. ಪಕ್ಷದ ಕಾರ್ಯಕರ್ತರ ಬಗ್ಗೆ ಆಳವಾದ ಆತಂಕ ಹೊಂದಿದ್ದ ಅವರ ಸಂಪರ್ಕಕ್ಕೆ ಬಂದ ಎಲ್ಲರಿಗೂ ಆತ್ಮೀಯರಾಗಿದ್ದವರು. ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ತನ್ನ ಬದುಕನ್ನೇ ಸಮರ್ಪಿಸಿದ ಈ ಕಮ್ಯುನಿಸ್ಟರದ್ದು ಒಂದು ಮಾದರಿ ಬದುಕು.
ಕಾರ್ಮಿಕ ಸಮಸ್ಯೆಗಳ ಬಗ್ಗೆ ಅವರ ಅರಿವು ಹಾಗೂ ಕಾರ್ಮಿಕ ಸಂಘಟಕರಾಗಿ ಅವರ ಕೆಲಸದಿಂದಾಗಿ ತಮಿಳುನಾಡು ಸಿಐಟಿಯುನ ಅತ್ಯಂತ ಬಲಿಷ್ಠ ಕೇಂದ್ರಗಳಲ್ಲಿ ಒಂದಾಗಿದೆ.

- ಸಿಪಿಐ(ಎಂ) ಪೊಲಿಟ್ ಬ್ಯೂರೋ

ದಣಿವರಿಯದ ಹೋರಾಟಗಾರ

ದುಡಿಯುವ ಜನಗಳಿಗಾಗಿ ಅವಿಶ್ರಾಂತ ಹೋರಾಟ ನಡೆಸಿದವರು ಕಾಂ|| ನಲ್ಲಶಿವನ್. ಬ್ರಿಟಿಷ್ ದಿನಗಳಿಂದಲೇ ಅವರು ಇದಕ್ಕಾಗಿ ಸೆರೆವಾಸಗಳನ್ನು ಅನುಭವಿಸಿದರು. ತಮಿಳುನಾಡಿನ ಕಾರ್ಮಿಕ ಆಂದೋಲನವನ್ನು ಸಂಘಟಿಸುವಲ್ಲಿ ಹಾಗೂ ಒಂದು ಬಲಿಷ್ಠ ಸಿಐಟಿಯು ಸಂಘಟನೆಯನ್ನು ಕಟ್ಟುವಲ್ಲಿ ಅವರ ಕಾಣಿಕೆ ಅಮೂಲ್ಯ.

- ಸಿಐಟಿಯು

ಚಿರಸ್ಮರಣೀಯ ಕಮ್ಯುನಿಸ್ಟರು

ಕೇವಲ ಕಮ್ಯುನಿಸ್ಟ್ ಪಕ್ಷವನ್ನು ಸೇರುವುದರಿಂದಲೇ ಒಬ್ಬ ವ್ಯಕ್ತಿ ಕಮ್ಯುನಿಸ್ಟನಾಗುವುದಿಲ್ಲ. ಕಮ್ಯುನಿಸ್ಟನಾಗುವುದೆಂದರೆ ಅದು ಒಂದು ನಿರಂತರ ಹೋರಾಟ, ತನ್ನ ನೀತಿ-ಸಿದ್ಧಾಂತಗಳನ್ನು ಹಾಗೂ ಜನಗಳ ನಡುವೆ ಸಮರ್ಪಿತ ಕೆಲಸವನ್ನು ಏಕೀಕೃತಗೊಳಿಸುವ ಒಂದು ಹೋರಾಟ. ನಲ್ಲಶಿವನ್ ಇಂತಹ ಒಬ್ಬ ಕಮ್ಯುನಿಸ್ಟರು. ಅವರ ಸಮರ್ಪಿತ ಬದುಕು ಹಾಗೂ ಮಾರ್ಕ್ಸ್‌ವಾದ-ಲೆನಿನ್ ವಾದಕ್ಕೆ ಅವರ ಬದ್ಧತೆ ಎಲ್ಲಾ ಸಂಗಾತಿಗಳಿಗೆ ಒಂದು ಮಾದರಿಯಾಗಬೇಕು. ವಿಶೇಷವಾಗಿ ಎಲ್ಲಾ ರೀತಿಯ ಅನ್ಯವರ್ಗ ಪ್ರಭಾವಗಳು ನಮ್ಮನ್ನು ದಾರಿ ತಪ್ಪಿಸುವಂತಹ ಬೆದರಿಕೆಯಿರುವ ಪ್ರಸ್ತುತ ಸನ್ನಿವೇಶದಲ್ಲಿ. ......ನಲ್ಲಶಿವನ್‌ರವರ ಸಾವು ಪಕ್ಷಕ್ಕೆ ಒಂದು ದೊಡ್ಡ ನಷ್ಟ. ಅವರ ಕಾಣಿಕೆ ಹಾಗೂ ಚಾರಿತ್ರ್ಯಕ್ಕಾಗಿ ಅವರು ಚಿರಸ್ಮರಣೀಯರು.

- ಹರ್ಕಿಶನ್ ಸಿಂಗ್ ಸುರ್ಜಿತ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು

ಬೌದ್ಧಿಕ ಪ್ರಾಮಾಣಿಕತೆ

ಕಾರ್ಮಿಕ ಆಂದೋಲನ ಹಾಗೂ ಪಕ್ಷದ ಈ ಉತ್ಕೃಷ್ಟ ಮುಖಂಡರ ಸರಳ ಸ್ವಭಾವ ಹಾಗೂ ಜೀವನ ಶೈಲಿ, ಮಹಾನ್ ವಿನಯಶೀಲತೆ, ಎಲ್ಲಾ ಸಂಗಾತಿಗಳ ಮಾತುಗಳನ್ನು ತಾಳ್ಮೆಯಿಂದ ಕೇಳುವ ಸ್ವಭಾವ ಹಾಗೂ ಅನಂತ ಜ್ಞಾನದಾಹ-ಇವು ಎಲ್ಲರಿಗೂ ಮಾದರಿ.
ನಲ್ಲಶಿವನ್‌ರ ಒಂದು ವಿಶಿಷ್ಟ ಸಾಮರ್ಥ್ಯವೆಂದರೆ ಚರ್ಚೆಗಳ ಸಮಯದಲ್ಲಿ ಸಂಗಾತಿಗಳು ವಿವಿಧ ವಿಷಯಗಳ ಬಗ್ಗೆ ಹೊಂದಿರುವ ವಿಭಿನ್ನ ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ಅವರು ಮಾಡುತ್ತಿದ್ದ ಪ್ರಾಮಾಣಿಕ ಮತ್ತು ಗಂಭೀರ ಪ್ರಯತ್ನ. ಇದರಿಂದಾಗಿ ಒಂದು ನಿರ್ದಿಷ್ಟ ಸಮಸ್ಯೆಯ ಎಲ್ಲಾ ಆಯಾಮಗಳ ಒಂದು ಕಣ್ಣೋಟ ಪಡೆಯಲು ಅವರಿಗೆ ಸಾಧ್ಯವಾಗುತ್ತಿತ್ತು. ಅವರು ಯಾವುದೇ ಸಮಸ್ಯೆಯನ್ನು ಮೇಲುಮೇಲಿಗೇ ಅಧ್ಯಯನ ಮಾಡಿ ಬಿಡುತ್ತಿರಲಿಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳಲು ತನ್ನ ವಿಶ್ಲೇಷಕ ನಿಲುವನ್ನು ಬಳಸಿಕೊಂಡು ಸರಿಯಾದ ನಿರ್ಣಯಗಳಿಗೆ ಬರುತ್ತಿದ್ದರು. ಈ ವಿಷಯದಲ್ಲಿ ವಿವರಗಳಿಗೆ ಅವರು ಕೊಡುತ್ತಿದ್ದ ಗಮನ ಪಕ್ಷ ಎದುರಿಸುತ್ತಿರುವ ಪ್ರಶ್ನೆಗಳ ಎಲ್ಲಾ ಆಯಾಮಗಳನ್ನು ಅರ್ಥಮಾಡಿಕೊಳ್ಳಬೇಕೆಂಬ ಅವರ ಬೌದ್ಧಿಕ ಪ್ರಾಮಾಣಿಕತೆಯನ್ನು ಬಿಂಬಿಸುವಂತದ್ದು. ನಲ್ಲಶಿವನ್‌ರ ವ್ಯಕ್ತಿತ್ವದ ಈ ಅಂಶದಿಂದ ನಮ್ಮ ಸಂಗಾತಿಗಳು ಬಹಳಷ್ಟು ಕಲಿಯಬೇಕು.

- ಪಿ.ರಾಮಚಂದ್ರನ್
ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು

ವಿನಯಶೀಲ ಕ್ರಾಂತಿಕಾರಿ

ಕಾಮ್ರೇಡ್ ನಲ್ಲಶಿವನ್ ರವರ ಸಾವಿನೊಂದಿಗೆ ತಮಿಳುನಾಡು ಸಿಪಿಐ(ಎಂ) ಗೆ ಸಂಬಂಧಪಟ್ಟಂತೆ ಒಂದು ದೊಡ್ಡ ಅಧ್ಯಾಯ ಮುಗಿದಿದೆ. ಆರಂಭದಲ್ಲಿ ಗಾಂಧಿವಾದಿಯಾಗಿದ್ದರೂ ನಲ್ಲಶಿವನ್ ಸದಾ ಒಂದು ವಿಶ್ಲೇಷಕ ಮತ್ತು ತರ್ಕಾತ್ಮಕ ಮನೋಭಾವದವರಾಗಿದ್ದುದರಿಂದ ಮಾರ್ಕ್ಸ್‌ವಾದಿಯಾದರು. ತಿರುನಲ್ವೇಲಿಯ ಅವರ ಹುಟ್ಟೂರಿನಲ್ಲಿಆಗ ಒಬ್ಬನೇ ಮಾರ್ಕ್ಸ್‌ವಾದಿಯಿದ್ದರು, ಸೆಲ್ವರಾಜ್ ಎಂಬ ಹೆಸರಿನ ಒಬ್ಬ ವಿದ್ಯುತ್ ನೌಕರರು. ನಲ್ಲಶಿವನ್ ಅವರೊಡನೆ ತರ್ಕ ಮಾಡಿ ಅವರನ್ನು ಗಾಂಧಿವಾದಿಯಾಗಿಸುವ ದೃಷ್ಟಿಯಿಂದ ಹೋದರು. ಬದಲಾಗಿ ಸ್ವತಃ ದ್ವಂದ್ವಾತ್ಮಕ ಭೌತವಾದದ ಬಗ್ಗೆ ಮನಗಂಡು ನಂತರ ಮಾರ್ಕ್ಸ್ ವಾದಿಯಾದರು. ಮಾರ್ಕ್ಸ್‌ವಾದಿ ಸಿದ್ಧಾಂತದ ವ್ಯಾಪಕ ಅಧ್ಯಯನ ನಡೆಸಿದರು. ಆದರೆ ಅವರು ಸಿದ್ಧಾಂತಕ್ಕೇ ಸೀಮಿತಗೊಳ್ಳಲಿಲ್ಲ. ಕುರುಡು ನಂಬಿಕೆಗಳಿಂದ ತುಂಬಿದ ಕೆಳಮಧ್ಯಮವರ್ಗದ ಕುಟುಂಬದಿಂದ ಬಂದಿದ್ದರೂ ಅವರು ತನ್ನನ್ನು ಈ ಕ್ರಾಂತಿಕಾರಿಯಾಗಿ ರೂಪಿಸಿಕೊಂಡರು.
.... ನಲ್ಲಶಿವನ್ ಒಬ್ಬ ಮಹಾನ್ ಏಕೀಕರಣಕಾರರು. ತಮಿಳುನಾಡಿನಲ್ಲಿ ಪಕ್ಷವನ್ನು ಸ್ಥಾಪಿಸಿದವರ ಪರಂಪರೆಯನ್ನು ಮುಂದುವರಿಸಿ ಅವರು ತಮಿಳುನಾಡು ರಾಜ್ಯ ಸಮಿತಿಯಲ್ಲಿ ಒಂದು ಮಾದರಿ ಐಕ್ಯತೆಯನ್ನು ಬೆಸೆದವರು. ಪೊಲಿಟ್ ಬ್ಯೂರೋದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಅವರು ಕಳೆದ ಪಾರ್ಟಿ ಮಹಾಧಿವೇಶನದಲ್ಲಿ ಅನಾರೋಗ್ಯದಿಂದಾಗಿ ತನ್ನ ಕರ್ತವ್ಯಗಳನ್ನು ನಿಭಾಯಿಸಲು ಆಗುತ್ತಿಲ್ಲವಾದ್ದರಿಂದ ಪಾಲಿಟ್ ಬ್ಯೂರೋದಿಂದ ನಿವೃತ್ತಿ ಬಯಸಿದರು. ಹಾಗೆ ಮಾಡಬೇಕಾದರೆ ಮಹಾನ್ ವಿನಯಶೀಲತೆ ಬೇಕು. ಅದು ಅವರಲ್ಲಿತ್ತು.

- ಎಸ್.ಉಮಾನಾಥ್
ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು.

ಅಂತಿಮ ವಿದಾಯ

ಜುಲೈ 20 ರಂದು ನಿಧನರಾದ ಹಿರಿಯ ನೇತಾರ ಕಾಮ್ರೇಡ್ ಎ.ನಲ್ಲಶಿವನ್ ಅವರ ಅಂತ್ಯಕ್ರಿಯೆ ಜುಲೈ 21 ರಂದು ತಿರುನಲ್ವೇಲಿಯಲ್ಲಿ ನಡೆಯಿತು.

ಸಿಪಿಐ(ಎಂ) ಜಿಲ್ಲಾ ಸಮಿತಿ ಕಚೇರಿಯಿಂದ ಬೆಳಿಗ್ಗೆ 11 ಕ್ಕೆ ಅಂತ್ಯಕ್ರಿಯೆ ಮೆರವಣಿಗೆ ಹೊರಟಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಮತ್ತು ರಾಜ್ಯ ಸಮಿತಿ ಸದಸ್ಯರು ದಿವಂಗತ ಮುಖಂಡರ ಪಾರ್ಥಿವ ಶರೀರವನ್ನು ಹೂಗಳಿಂದ ಅಲಂಕರಿಸಲಾಗಿದ್ದ ವಾಹನಕ್ಕೆ ಒಯ್ದರು.

ತಂಬರಪರನಿ ನದಿ ದಂಡೆಯಲ್ಲಿರುವ ರುದ್ರಭೂಮಿಗೆ ನಾಲ್ಕು ಕಿ.ಮೀ.ದೂರವಿದ್ದ ಅಂತಿಮ ಯಾತ್ರೆಯ ಮೆರವಣಿಗೆಯಲ್ಲಿ ಸಾವಿರಾರು ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ರೈತರು, ಯುವಜನರು ಮತ್ತಿತರ ವಿಭಾಗಗಳ ಜನರು ಪಾಲ್ಗೊಂಡಿದ್ದರು. ಮೆರವಣಿಗೆ ಸಾಗಿದ ದಾರಿಯುದ್ದಕ್ಕೂ ಇತರ ಸಾವಿರಾರು ಜನರು ನಿಂತು ಅಗಲಿದ ನೇತಾರನಿಗೆ ಅಂತಿಮ ಪ್ರಣಾಮ ಸಲ್ಲಿಸಿದರು.

ಕಾಮ್ರೇಡ್ ನಲ್ಲಶಿವನ್ ಅವರ ಪಾರ್ಥೀವ ಶರೀರದ ದಹನ ಕಾರ್ಯದ ನಂತರ ಅಲ್ಲಿಯೇ ಶೋಕ ಸಭೆಯನ್ನು ನಡೆಸಲಾಯಿತು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾ.ಎನ್.ಶಂಕರಯ್ಯ ಅಧ್ಯಕ್ಷತೆ ವಹಿಸಿದ್ದರು. ನಾನಾ ರಾಜಕೀಯ ಪಕ್ಷಗ ಮುಖಂಡರು ಕಾಂ. ನಲ್ಲಶಿವನ್‌ರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಆರ್.ನಲ್ಲಿಕಣ್ಣು ಮಾತನಾಡಿದರು. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಪರವಾಗಿ ಪಾಲ್ಗೊಂಡಿದ್ದ ಕಾಂ. ಜಿ.ಎನ್.ನಾಗರಾಜ್ ಅವರೂ ಬಾಷ್ಪಾಂಜಲಿ ಅರ್ಪಿಸಿದರು.

ಪಕ್ಷದ ಕೇಂದ್ರ ಸಮಿತಿ ಸದಸ್ಯ ಕಾಂ. ಎನ್.ವರದರಾಜನ್ ಮತ್ತು ಪಾಲಿಟ್ ಬ್ಯೂರೋ ಸದಸ್ಯ ವಿ.ಎಸ್.ಅಚ್ಯುತಾನಂದನ್ ಅವರೂ ದಿವಂಗತ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಿ ಕಾಮ್ರೇಡ್ ಎ.ಎನ್ ಅವರು ಎಡ ಆಂದೋಲನಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಸ್ಮರಿಸಿದರು. ಇದಕ್ಕೆ ಮುನ್ನ, ಪಾಲಿಟ್ ಬ್ಯೂರೋ ಪ್ರತಿನಿಧಿಯಾಗಿ ಬಂದಿದ್ದ ಕಾ. ವಿ.ಎಸ್.ಅಚ್ಯುತಾನಂದನ್ ಎ.ಎನ್.ಅವರ ಪಾರ್ಥೀವ ಶರೀರದ ಮೇಲೆ ಪಾಲಿಟ್ ಬ್ಯೂರೋ ಪರವಾಗಿ ಪುಷ್ಪಗುಚ್ಛ ಇರಿಸಿದರು.

ಕೇರಳ ರಾಜ್ಯ ಸಮಿತಿಯ ಇಬ್ಬರು ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾಂ.ನಲ್ಲಶಿವಂ ಕುಟುಂಬದ ಎಲ್ಲಾ ಸದಸ್ಯರು ರುದ್ರಭೂಮಿಯಲ್ಲಿ ಹಾಜರಿದ್ದರು.

ಈಗ ಐಎಂಎಫ್ ಧಣಿಯ ಪೆಟ್ರೋಲಿಯಂ ಹೊರೆ!

ಐಎಂಎಫ್ ಎಂಬ ಭಾರತ ಸರಕಾರದ ಧಣಿ(?) ನೇರವಾಗಿ ಹೊರೆ ಹೊರಿಸ ಹೋಗುವುದಿಲ್ಲ. ತನ್ನ ಸಾಲಗಳ ಮೇಲೆ ಹಲವು ಷರತ್ತುಗಳನ್ನು ಹೇರುವ ಮೂಲಕ ಪರೋಕ್ಷವಾಗಿ ಹೊರೆ ಹೇರುತ್ತದೆ ಜನಸಾಮಾನ್ಯರ ಮೇಲೆ. ಆದರೆ ಅದು ಕೆಲಸ ಮಾಡುವಲ್ಲಿ ತೊಂದರೆ ಬಂದರೆ?ಆಗಅದುನೇರವಾಗಿಯೇಹೊರೆ ಹೇರಲು ಒತ್ತಡಹೇರಲು ತೊಡಗುತ್ತದೆ.

ಸದ್ಯದ ಪ್ರಶ್ನೆ ಪೆಟ್ರೋಲ್‌ಉತ್ಪನ್ನಗಳ ಬೆಲೆಯೇರಿಕೆಯ ಪ್ರಶ್ನೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯಿಂದ ಜನಸಾಮಾನ್ಯರ ಮೇಲಿನ ಹೊರೆ ಹೆಚ್ಚಾಗುತ್ತದೆ ಎಂದು ಸಿಪಿಐ(ಎಂ) ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಮನದಟ್ಟು ಮಾಡಿಸಿ ಇದಕ್ಕೆ ಪರ್ಯಾಯ ದಾರಿಗಳೂ ಇವೆ ಎಂಬುದನ್ನು ತೋರಿಸಿಕೊಟ್ಟ ಮೇಲೆ ಐಎಂಎಫ್‌ನ ಪ್ರತಿನಿಧಿಗಳಂತಿದ್ದ ಕೇಂದ್ರ ಸರಕಾರದ ಕೆಲವು ಮಂತ್ರಿಮಹೋದಯರು ಬಾಯಿ ಮುಚ್ಚಿಕೊಳ್ಳುವಂತಾಯಿತು.

ಸಿಪಿಐ(ಎಂ) ಸೂಚಿಸಿದ ಪರ್ಯಾಯ ದಾರಿಗಳ ಬಗ್ಗೆ ಉಳಿದ ರಾಜಕೀಯ ಪಕ್ಷಗಳೂ ಗಂಭೀರವಾಗಿ ವಿಚಾರ ಮಾಡುವಂತಾಯಿತು. ಕಾಂಗ್ರೆಸ್‌ನಂತಹ ಉದಾರೀಕರಣವಾದಿ ಪಕ್ಷವೂ ಬೆಲೆ ಹೆಚ್ಚಳ ವಿರೋಧಿಸತೊಡಗಿದವು.

ಈಗ ಐಎಂಎಫ್ ಭಾರತ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸಬೇಕೆಂದು ಒತ್ತಾಯ ಮಾಡಿದೆ. ರಚನಾತ್ಮಕ ಸುಧಾರಣೆಯನ್ನು ಕ್ರೋಢೀಕರಿಸಲು ಈ ಕ್ರಮ ಅವಶ್ಯ ಎಂದು ಅದು ಹೇಳಿದೆ.

ಇದಿಲ್ಲದೆ ಇನ್ನೂ ಹಲವು ಶಿಫಾರಸ್ಸುಗಳನ್ನು ಅದು ಮಾಡಿದೆ. ವಿದೇಶಿ ಬ್ಯಾಂಕುಗಳ ಮೇಲಿನ ನಿರ್ಬಂಧಗಳನ್ನು ತೆಗೆಯಬೇಕು ಚಾಲ್ತಿ ಖಾತೆಯ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಬೇಕು ಇತ್ಯಾದಿ. ಇಂತಹ ಶಿಫಾರಸ್ಸುಗಳ ಒಂದು ಪಟ್ಟಿಯನ್ನೇ ಅದು ನೀಡಿದೆ.

ಒಟ್ಟಾರೆಯಾಗಿ ಉದಾರೀಕರಣದ ಉದ್ದೇಶಗಳು ಅದರ ಪರಿಣಾಮ ಏನೆಂಬುದು ಈಗ ಸ್ಪಷ್ಟವಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಬೆಂಗಳೂರಿಗೆ ಈಗ ಕುಡಿವ ನೀರು ಇನ್ನೂ ತುಟ್ಟಿ

ಕೆಇಬಿ ವಿದ್ಯುತ್ ದರವನ್ನು ಏರಿಸಿ ತಿಂಗಳೂ ಕಳೆದಿಲ್ಲ. ಈಗ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (ಬಿಡಬ್ಲ್ಯುಎಸ್‌ಎಸ್‌ಬಿ) ಸರದಿ. ಅದು ನೀರಿನ ದರವನ್ನು ಜುಲೈ ಒಂದರಿಂದ ಪೂರ್ವಾನ್ವಯವಾಗುವಂತೆ ಏರಿಸಿದೆ. ಹೆಚ್ಚಿನ ವಿದ್ಯುತ್ ವೆಚ್ಚವನ್ನು ಸರಿದೂಗಿಸುವ ಸಲುವಾಗಿ ಈ ಹೆಚ್ಚಳ ಎಂದು ಮಂಡಳಿ ಕಾರಣ ನೀಡಿದೆ.

ವಿದ್ಯುತ್ ದರ ಹೆಚ್ಚಳದಿಂದಾಗಿ ನೀರು ಸರಬರಾಜು ಮಂಡಳಿ ತಿಂಗಳಿಗೆ ಸುಮಾರು ಒಂದು ಕೋಟಿ 55 ಲಕ್ಷ ರೂಪಾಯಿಗಳಷ್ಟು ಹೆಚ್ಚು ವಿದ್ಯುತ್ ಶುಲ್ಕ ಭರಿಸಬೇಕಾಗುತ್ತದಂತೆ. ಈಗ ಮಾಡಿರುವ ನೀರಿನ ದರ ಹೆಚ್ಚಳ ಈ ಹೆಚ್ಚಿನ ವೆಚ್ಚವನ್ನು ಪೂರ್ತಿಯಾಗಿ ಭರಿಸುವುದಿಲ್ಲವಂತೆ, ಇರಲಿ.

ವಿದ್ಯುತ್ ಬೆಲೆ ಹೆಚ್ಚಳ ಅದರಿಂದಾಗಿ ನೀರಿನ ದರ ಹೆಚ್ಚಳ ಅದರಿಂದಾಗಿಯೇ ಇನ್ನೂ ಹಲವು ವಸ್ತು, ಸೇವೆಗಳ ಬೆಲೆ ಹೆಚ್ಚಳ. ಹೀಗೆ ಆಗುತ್ತಾ ಹೋದರೆ ಅದರ ಹೊರೆ ಅಂತಿಮವಾಗಿ ಯಾರ ಮೇಲೆ? ಜನಸಾಮಾನ್ಯರ ಮೇಲೆ. ಒಂದರ ನಂತರ ಒಂದರ ಬೆಲೆ ಹೆಚ್ಚುತ್ತ ಹೋದರೆ ಜನಸಾಮಾನ್ಯನ ವರಮಾನ ಮಾತ್ರ ಇದ್ದಷ್ಟೇ ಇದ್ದರೆ ಹೇಗೆ ಈ ಹೊರೆ ಹೊರಲು ಸಾಧ್ಯ?

ಉದಾರೀಕರಣ ಈ ಎಲ್ಲವುಗಳ ಬಗ್ಗೆ ಕಾಳಜಿ ವಹಿಸುವುದಿಲ್ಲ. ಸರಕಾರ ಯಾರಿಗೂ ಸಹಾಯಧನ ನೀಡಕೂಡದು. ಸರಕಾರಿ ಸಂಸ್ಥೆಗಳು, ಮಂಡಳಿಗಳು ಹಾನಿ ಮಾಡಕೂಡದು. ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹೇರಕೂಡದು. ಹಾಗೆಯೇ ಸರಕಾರಿ ಹಣಕಾಸು ಕೊರತೆ ಸಹ ಹೆಚ್ಚಕೂಡದು. ಇಂತಹ ಎಲ್ಲ ದಾರಿಗಳೂ ಬಂದ್.

ಉಳಿದದ್ದು ಒಂದೇ ದಾರಿ. ಜನಸಾಮಾನ್ಯರ ಮೇಲೆ ಹೊರೆಹೇರುವುದು. ಇದು ಉದಾರೀಕರಣದೊಂದಿಗೇ ಬಂದ ಪರಿಸ್ಥಿತಿ. ಸಾಮ್ರಾಜ್ಯಶಾಹಿಗಳ ಸಂಸ್ಥೆಗಳಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳು ಹೇರಿರುವ ಷರತ್ತುಗಳ ಪರಿಣಾಮವಿದು. "ಸುಖಶ್ರೀಮಂತರಿಗೆ, ಹೊರೆ ಬಡವರಿಗೆ, ಜನಸಾಮಾನ್ಯರಿಗೆ" -ಇದು ಸಾಮ್ರಾಜ್ಯಶಾಹಿಗಳ ಮಂತ್ರ. ಅದರದ್ದೇ ಪರಿಣಾಮ ಇದು. ಪಟೇಲರ ಸರಕಾರ ಜನಪರ ಕಾಳಜಿ ವಹಿಸಿ ಇಂತಹ ಅನ್ಯಾಯವನ್ನು ಪ್ರತಿಭಟಿಸಬೇಕಾಗಿತ್ತು. ಆದರೆ ಅವಕ್ಕೂ ಜನವಿರೋಧಿ ನೀತಿಯೇ ಸುಲಭದ ದಾರಿಯಾಗಿ ಕಂಡಿರಬೇಕು ಅಲ್ಲವೇ?

ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಅಮೇರಿಕದ ತಕರಾರು

ಗ್ಯಾಟ್‌ಗೆ ಸಹಿ ಮಾಡುವಾಗ ಸುಂದರ ಕನಸುಗಳನ್ನೇ ಹೆಣೆದು ದೇಶದ ಮುಂದಿಟ್ಟಿತ್ತು ನಮ್ಮ ಕೇಂದ್ರ ಕಾಂಗ್ರೆಸ್ (ಐ) ಸರಕಾರ. ಆದರೆ ಈಗ ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಸಾಮ್ರಾಜ್ಯಶಾಹಿಗಳು ಭಾರತವನ್ನು ಹಣ್ಣುಗಾಯಿ ನೀರುಗಾಯಿ ಮಾಡತೊಡಗಿದ್ದಾರೆ. ಈ ಸಾಮ್ರಾಜ್ಯಶಾಹಿ ದೇಶಗಳ ತಕರಾರು ಭಾರತ ಇನ್ನು ಹಲವು ವಸ್ತುಗಳಆಮದಿನ ಮೇಲೆ ನಿರ್ಬಂಧಗಳನ್ನು ಮುಂದುವರಿಸಿದೆ ಎಂಬುದು. ಈ ಪ್ರಮಾಣಾತ್ಮಕ ನಿರ್ಬಂಧನೆಗಳ ಬಗ್ಗೆ ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾಗಳು ಒತ್ತಡ ಹೇರತೊಡಗಿವೆ. ಯುರೋಪಿನಸಮುದಾಯವೂ ಇಂತಹದೇ ಒತ್ತಡಹೇರತೊಡಗಿದೆ.

ಭಾರತ 2700ಕ್ಕೂ ಹೆಚ್ಚು ಬಳಕೆ ವಸ್ತುಗಳ ಮತ್ತು ಕೃಷಿ ಉತ್ಪನ್ನಗಳ ಆಮದಿನ ಮೇಲೆ ನಿರ್ಬಂಧನೆಗಳನ್ನು ಮುಂದುವರಿಸಿದೆ. ಆದ್ದರಿಂದ ಗ್ಯಾಟ್ ಒಪ್ಪಂದದ ಪ್ರಕಾರ ಈ ನಿರ್ಬಂಧನೆಗಳನ್ನು ತೆಗೆದು ಹಾಕಬೇಕಾಗಿತ್ತು. ಭಾರತ ವಿದೇಶಿ ವ್ಯಾಪಾರ ಬಾಕಿಯ ಹೆಸರಿನಲ್ಲಿ ಈ ನಿರ್ಬಂಧಗಳನ್ನು ತೆಗೆಯುತ್ತಿಲ್ಲ ಎಂದು ದೂರುತ್ತಿವೆ ಅವು.

ವಿಶ್ವ ವ್ಯಾಪಾರ ಸಂಸ್ಥೆಯ ನ್ಯಾಯ ತೀರ್ಮಾನ ವಿಭಾಗಕ್ಕೆ ಭಾರತದೊಡನೆ ಸಮಾಲೋಚನೆಗೆ ಅವಕಾಶ ಮಾಡಿಕೊಡಬೇಕೆಂದು ಅವು ಈಗ ಕೇಳುತ್ತಿವೆ. ಬಹುಶಃ ಭಾರತವನ್ನು ಬೆದರಿಕೆಯಿಂದ ಒಮ್ಮೆಲೆ ಬಗ್ಗಿಸುವುದು ಕಷ್ಟವಾಗುತ್ತದೆ ಎಂಬ ತಿಳುವಳಿಕೆ ಅವಕ್ಕೆ ಬಂದಿರಬೇಕು. ಆದ್ದರಿಂದ ಸಮಾಲೋಚನೆ ಮಾತುಗಳನ್ನು ಅವು ಆಡುತ್ತಿವೆ.

ಆದರೆ ತಮ್ಮ ಲಾಭಕ್ಕಾಗಿ ಎಲ್ಲ ತರಹದ ಉಪಾಯಗಳನ್ನು ಬಳಸುವ ಅವು ಇನ್ನೂ ಬೇರೆ ಬೇರೆ ತರಹದ ತಂತ್ರ/ಉಪಾಯಗಳನ್ನು ಬಳಸುತ್ತಿವೆಂಬುದರಲ್ಲಿ ಸಂದೇಹವಿಲ್ಲ.

ರಫ್ತು: ದುರ್ಭಿಕ್ಷದಲ್ಲಿ ಅಧಿಕ ಮಾಸ

ರಫ್ತನ್ನು ಹೆಚ್ಚಿಸಿ ಆ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧಿಸುವುದು ಉದಾರೀಕರಣದ ಅರ್ಥಶಾಸ್ತ್ರದ ಒಂದು ತಂತ್ರ. ರಫ್ತಿಗಾಗಿ ಏನೆಲ್ಲವನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿದರೆ ದೇಶದ ಅಭಿವೃದ್ಧಿಯಾಗುತ್ತದೆ ಎನ್ನುತ್ತಾರೆ ಈ ಉದಾರೀಕರಣದ ಜನ. 1991 ರಲ್ಲಿ ಬಂದ ವಿದೇಶಿ ಬಾಕಿಯ ಬಿಕ್ಕಟ್ಟಿನ ಸಮಯದಿಂದಲೂ ರಫ್ತು ಹೆಚ್ಚಿಸಲು ಆ ಕ್ರಮ ಅವಶ್ಯ. ಈ ಕ್ರಮ ಅವಶ್ಯ ಎಂದು ಹೇಳುತ್ತಲೇ ಉದಾರೀಕರಣ ಮಾಡುತ್ತಾ ಬಂದಿತು ಕೇಂದ್ರ ಸರಕಾರ. ಆದರೂ ನಡುವೆ ಸ್ವಲ್ಪ ಏರಿದಂತೆ ಕಂಡ ರಫ್ತು ಮತ್ತೆ ನೆಲ ನೋಡತೊಡಗಿದೆ.

ಸಮಸ್ಯೆಗೆ ಕಿರೀಟವಿಟ್ಟಂತೆ ಈಗ ರೂಪಾಯಿ ಡಾಲರಿಗೆದುರಾಗಿ ಪ್ರಬಲವಾಗತೊಡಗಿದೆ. ಹೀಗೆ ರೂಪಾಯಿ ಪ್ರಬಲವಾದರೆ ಅದರಿಂದ ರಫ್ತಿಗೆ ತೊಂದರೆ ಆದ್ದರಿಂದ ರೂಪಾಯಿಯ ಅಪಮೌಲ್ಯೀಕರಣ ಮಾಡಲು ಒತ್ತಡ ಸದ್ಯದಲ್ಲೇ ಬರಬಹುದು.

ರೂಪಾಯಿಯ ಪರಿವರ್ತನೀಯತೆಯಿಂದಲೂ ರಫ್ತು ಜಾಸ್ತಿಯಾಗುತ್ತದೆ ಎನ್ನಲಾಗುತ್ತಿತ್ತು. ಸರಕಾರ ಕೈಗೊಂಡಿರುವ ರಫ್ತು-ಪರ ಕ್ರಮಗಳನ್ನು ಎಣಿಕೆಗೆ ತೆಗೆದುಕೊಂಡರೆ ದೇಶದ ರಫ್ತು ಹಲವು ಪಟ್ಟು ಹೆಚ್ಚಾಗಿ ಆರ್ಥಿಕ ಸಮಸ್ಯೆಗಳೇ ಇರಬಾರದಾಗಿತ್ತು. ಆದರೆ ಈಗಲೂ ರಫ್ತು ಹೆಚ್ಚಾಗದೇ ಉಳಿದಿದೆ.

ಭಾರತ ರಫ್ತಿನಿಂದ ಹಿಂದಿನ ವರ್ಷದಲ್ಲಿ 33.1 ಶತಕೋಟಿ ಡಾಲರಿನಷ್ಟು ಹೆಚ್ಚು ಆದಾಯ ಗಳಿಸಿದರೆ ಈ ಕಳೆದ ವರ್ಷದಲ್ಲಿ ಬರೀ 1.3 ಶತಕೋಟಿ ಡಾಲರಿನಷ್ಟು ಹೆಚ್ಚು ಆದಾಯ ಗಳಿಸಿದೆ.

ಈಗ ಈ ಕುಸಿತವನ್ನು ತಡೆಯಲು ಮತ್ತೆ ಸರಕಾರ ಹಲವು ತಂತ್ರಗಳನ್ನು ರೂಪಿಸತೊಡಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಉದಾರೀಕರಣ ರಫ್ತನ್ನು ಹೆಚ್ಚು ಮಾಡುವ ಬದಲು ದೇಶದ ಅವಲಂಬನೆಯನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತಲೇ ಹೋಗುತ್ತಿದೆ. ಹಾಗೆಯೇ ಆರ್ಥಿಕ ಬಿಕ್ಕಟ್ಟನ್ನೂ ಸಹ ದಿನದಿಂದ ದಿನಕ್ಕೆ ಹೆಚ್ಚಿಸುತ್ತಲೇ ಹೋಗುತ್ತಿದೆ.

ಇದು ಉದಾರೀಕರಣದ ಕೊಡುಗೆ.

ಒಕ್ಕೂಟ ಸ್ವರೂಪವನ್ನು ಎತ್ತಿ ಹಿಡಿಯುವತ್ತ ಇನ್ನೊಂದು ಸಣ್ಣ ಹೆಜ್ಜೆ

ಸಂಯುಕ್ತ ರಂಗ ಸರಕಾರ ಹಲವಾರು ವಚನಗಳನ್ನು ನೀಡಿತ್ತು. ಅವುಗಳಲ್ಲಿ ಹೆಚ್ಚಿನವನ್ನು ಈಡೇರಿಸಿಲ್ಲ ಎಂದು ದೂರುವ ಪ್ರಜಾಪ್ರಭುತ್ವ ವಾದಿಗಳು, ಕೆಲವನ್ನು ಈಡೇರಿಸುತ್ತಿದೆಯೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಇದರಲ್ಲಿ ಒಂದು ಭಾರತದ ಒಕ್ಕೂಟ ಸ್ವರೂಪಕ್ಕೆ ಸಂಬಂಧಪಟ್ಟದ್ದು. ಈ ದಿಕ್ಕಿನಲ್ಲಿಯೂ ದೊಡ್ಡ ಸಾಧನೆಯೆಂಬುದೇನೂ ಆಗಿಲ್ಲ. ಆದರೆ ಆ ದಿಕ್ಕಿನಲ್ಲಿ ಮೆಲ್ಲ-ಮೆಲ್ಲನೆ ಹೆಜ್ಜೆಯಿಡಲಾಗುತ್ತಿದೆಯೆನ್ನಬಹುದು.

ನಮ್ಮ ರಾಜಕೀಯ ವ್ಯವಸ್ಥೆ ಈಗಲೂ ವಿಪರೀತ ಕೇಂದ್ರೀಕರಣಗೊಂಡಿದ್ದರೂ ಪ್ರಾದೇಶಿಕ ಶಕ್ತಿಗಳನ್ನು ಪ್ರತಿನಿಧಿಸುವ ಸಂಯುಕ್ತ ರಂಗದ ಅಂಗಪಕ್ಷಗಳು ಕಾಂಗ್ರೆಸ್ ಅಥವಾ ಬಿಜೆಪಿಗಿಂತ ಈ ವಿಷಯದಲ್ಲಿ ಹೆಚ್ಚು ಪ್ರಾಮಾಣಿಕವಾಗಿವೆ ಎಂಬುದು ಕಳೆದ ಒಂದು ವರ್ಷದಲ್ಲಿ ಹೆಚ್ಚೆಚ್ಚು ಪ್ರಕಟವಾಗುತ್ತಿದೆ.

ಸಂಯುಕ್ತ ರಂಗ ಸರಕಾರ ಬಂದ ಮೇಲೆ ಅಂತರ-ರಾಜ್ಯ ಮಂಡಳಿ ಪುನರುಜ್ಜೀವನಗೊಂಡಿದೆ. ಕಳೆದ ಜುಲೈ 17 ರಂದು ಅದರ ಮೂರನೇ ಸಭೆ ನಡೆಯಿತು. ಇವಲ್ಲದೆ ಮಂಡಳಿಯ ಸ್ಥಾಯೀ ಸಮಿತಿ ಹಲವು ಬಾರಿ ಸಭೆ ಸೇರಿ ಸರ್ಕಾರಿಯಾ ಆಯೋಗದ ಶಿಫಾರಸುಗಳ ಜಾರಿಯ ಬಗ್ಗೆ ಚರ್ಚಿಸಿದೆ.

ಜುಲೈ 17ರ ಮೂರನೇ ಸಭೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತಂತೆ ಎರಡು ಪ್ರಮುಖ ವಿಷಯಗಳ ಮೇಲೆ ಚರ್ಚೆ ನಡೆಯಿತು. ಒಂದು, ರಾಜ್ಯಗಳಿಗೆ ಹಣಕಾಸು ಅಧಿಕಾರಗಳ ವಿಕೇಂದ್ರೀಕರಣ ಹಾಗೂ ಎರಡು, ಸಂವಿಧಾನದ ಕಲಮು 356.

ಹಣಕಾಸು ವಿಕೇಂದ್ರೀಕರಣ

ಈಗಾಗಲೇ ಐಕ್ಯರಂಗದ ಓದುಗರಿಗೆ ತಿಳಿದಿರುವಂತೆ ಕೇಂದ್ರ ಸರಕಾರ ಏಪ್ರಿಲ್ 1, 1996 ರಿಂದ 29% ತೆರಿಗೆಗಳನ್ನು ರಾಜ್ಯಗಳಿಗೆ ನೀಡಲು ಹಾಗೂ ಇದನ್ನು ಮುಂದೆ ಮರುಪರಿಶೀಲಿಸಿ ಹೆಚ್ಚಿಸಲು ಒಪ್ಪಿದೆ. ಈ ಬಗ್ಗೆ ಹೆಚ್ಚಿನ ರಾಜ್ಯ ಸರಕಾರಗಳು ಒಪ್ಪಿಗೆ ಸೂಚಿಸಿದರೂ 29% ಪಾಲು ಬಹಳ ಕಮ್ಮಿ ಎಂಬುದು ಅವರ ಅಭಿಪ್ರಾಯವಾಗಿತ್ತು. ಇದನ್ನು ಕನಿಷ್ಟ 33.3%ಕ್ಕೆ ಏರಿಸಬೇಕು ಎಂಬುದು ಈ ಸಭೆಯಲ್ಲಿ ಕೇಳಿಬಂದ ಅಭಿಪ್ರಾಯ. ಪಶ್ಚಿಮಬಂಗಾಳ ಸರಕಾರದ ಪ್ರತಿನಿಧಿಗಳು ಈ 29% ಪಾಲು ಕೇಂದ್ರ-ರಾಜ್ಯ ಸಂಬಂಧಗಳಲ್ಲಿರುವ ಅಸಮತೋಲನವನ್ನು ಸರಿಪಡಿಸುತ್ತಿಲ್ಲ. ಅದನ್ನು ಕನಿಷ್ಟ 33.3% ಕ್ಕಾದರೂ ಏರಿಸಬೇಕು ಹಾಗೂ ಡಿಸೆಂಬರ್ 1997 ರಲ್ಲಿ ಇದರ ಮರುವಿಮರ್ಶೆಯಾಗಬೇಕು ಎಂದು ಒತ್ತಾಯಿಸಿತು.

ಕೇರಳ ಸರಕಾರದ ಪರವಾಗಿ ಮಾತನಾಡಿದ ಮುಖ್ಯಮಂತ್ರಿ ನಾಯನಾರ್‌ರವರು ಇನ್ನೂ ಕಟುವಾಗಿ ಈಗಿರುವ ಅಸಮತೋಲನವನ್ನು ಟೀಕಿಸುತ್ತಾ ರಾಜ್ಯಗಳಿಗೆ ಕೇಂದ್ರದ ತೆರಿಗೆ ಆದಾಯಗಳ ಸಂಗ್ರಹದಿಂದ ಕನಿಷ್ಟ 50% ಸಿಗುವಂತಾದರೆ ಮಾತ್ರ ರಾಜ್ಯಗಳ ಪರಾವಲಂಬನೆ ಕಮ್ಮಿಯಾಗುತ್ತದೆ ಹಾಗೂ ದುರ್ಬಲ ರಾಜ್ಯಗಳಿಗೆ ಹೆಚ್ಚಿನ ಹಣಕಾಸು ಸಹಾಯ ನೀಡಲು ಹಣಕಾಸು ಆಯೋಗಗಳಿಗೆ ಸಾಧ್ಯವಾಗುತ್ತದೆ ಎಂದರು. ಸಕ್ಕರೆ, ಜವಳಿ ಮತ್ತು ತಂಬಾಕಿನ ಮೇಲೆ ಮಾರಾಟ ತೆರಿಗೆ ಹಾಕುವ ಅಧಿಕಾರವನ್ನು ಕೇಂದ್ರ ಸರಕಾರ ವಹಿಸಿಕೊಂಡು ಅದರ ಬದಲು ಕೇಂದ್ರ ತೆರಿಗೆ ಆದಾಯದ 3% ವನ್ನು ಪರಿಹಾರವಾಗಿ ನೀಡುವ ಕ್ರಮ ತಮಗೆ ಒಪ್ಪಿಗೆಯಿಲ್ಲ ಎಂದು ಸ್ಪಷ್ಟಪಡಿಸಿದ ಅವರು ಈ ಅಧಿಕಾರವನ್ನು ಮತ್ತೆ ರಾಜ್ಯ ಸರಕಾರಗಳಿಗೆ ನೀಡಬೇಕು, ಅದರಿಂದ ಇದರ ಮೂರು ಪಟ್ಟು ತೆರಿಗೆ ಸಂಗ್ರಹ ರಾಜ್ಯ ಸರಕಾರಕ್ಕೆ ದೊರೆಯುತ್ತದೆ ಎಂದರು. ಆದರೂ ಸದ್ಯ 29% ಪಾಲಿಗೆ ಒಪ್ಪಿಕೊಂಡ ಕೇರಳ ಸರಕಾರ ಡಿಸೆಂಬರ್ 1997 ಅಥವಾ ಜನವರಿ 1998ರಲ್ಲಿ ಇದರ ಮರು ವಿಮರ್ಶೆಯಾಗಬೇಕು, ನಂತರ ಪ್ರತಿಯೊಂದು ಹಣಕಾಸು ಆಯೋಗದ ಐದು ವರ್ಷಗಳ ಅವಧಿಯ ಅಂತ್ಯದಲ್ಲಿ ಅದರ ಮರುವಿಮರ್ಶೆಯಾಗುತ್ತಾ ಇರಬೇಕು ಎಂದು ಆಗ್ರಹಪಡಿಸಿದರು.

ಕಲಮು 356

29% ತೆರಿಗೆ ಪಾಲಿನ ಬಗ್ಗೆ ಅಂತರ-ರಾಜ್ಯ ಮಂಡಳಿಯ ಮೂರನೇ ಸಭೆಯಲ್ಲಿ ಒಮ್ಮತ ಉಂಟಾದರೂ ಸಂವಿಧಾನದ ಕಲಮು 356 ರ ಬಗ್ಗೆ ಅಂತಹ ಒಮ್ಮತ ಸಾಧ್ಯವಾಗಲಿಲ್ಲ. ಇದಕ್ಕೆ ಮೊದಲು ಸಭೆ ಸೇರಿದ್ದ ಮಂಡಳಿಯ ಸ್ಥಾಯೀ ಸಮಿತಿ ಸದ್ಯಕ್ಕೆ ಇದನ್ನು ಮುಂದುವರಿಸಬೇಕು, ಆದರೆ ಅದರ ದುರುಪಯೋಗವಾಗದಂತೆ ಕೆಲವು ಕಟ್ಟುನಿಟ್ಟಾದ ನಿಯಮಾವಳಿಗಳನ್ನು ವಿಧಿಸಬೇಕು ಎಂಬ ಒಮ್ಮತಕ್ಕೆ ಬಂದಿತ್ತು.

ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಎಡ ನೇತೃತ್ವದ ಸರಕಾರಗಳು ಸತತವಾಗಿ ಈ ಕಲಮಿನ ದುರುಪಯೋಗದ ವಿರುದ್ಧ ಹಾಗೂ ಅದರ ರದ್ದತಿಗೆ ಒತ್ತಾಯಿಸುತ್ತಾ ಬಂದಿವೆ. ಆದರೆ ಪಶ್ಚಿಮ ಬಂಗಾಳ ಮತ್ತು ಕೇರಳ ಸರಕಾರಗಳು ಕಟ್ಟುನಿಟ್ಟಾದ ವಿಧಿ-ವಿಧಾನಗಳನ್ನು ಹಾಕಿ ಸ್ಥಾಯಿ ಸಮಿತಿ ರೂಪಿಸಿದ ಒಮ್ಮತಕ್ಕೆ ಒಪ್ಪಿಕೊಂಡವು. ಇತರ ರಾಜ್ಯ ಸರಕಾರಗಳಲ್ಲಿ ತಮಿಳುನಾಡಿನ ಡಿ.ಎಂ.ಕೆ. ಸರಕಾರವೂ "ಕಾರ್ಯಸಾಧ್ಯ ರಾಜಿ" ಎಂದು ಈ ಒಮ್ಮತಕ್ಕೆ ಒಪ್ಪಿತು. ಅದೂ ಸಂವಿಧಾನದಿಂದ ಈ ಕಲಮನ್ನು ತೆಗೆದು ಹಾಕಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಸ್ಥಾಯೀಸಮಿತಿ ವಿಧಿಸಿದ ನಿಯಮಾವಳಿಗಳು ಹೀಗಿವೆ

- ರಾಜ್ಯ ಸರಕಾರದ ವಿರುದ್ಧ ಕಲಮು 356 ಬಳಸಬೇಕೆಂದಿದ್ದರೆ ಅದರ ಮೊದಲು ರಾಜ್ಯ ಸರಕಾರಕ್ಕೆ ವಿವರವಾದ ಶೋಕಾಸ್ ನೋಟೀಸ್ ಕೊಡಬೇಕು.
- ರಾಜ್ಯ ಸರಕಾರದಿಂದ ಉತ್ತರ ಬಂದ ಮೇಲೆ ರಾಜ್ಯಪಾಲರು ಕೇಂದ್ರ ಸರಕಾರಕ್ಕೆ ಸಲ್ಲಿಸುವ ವರದಿ ಪೂರ್ಣ ಮಾಹಿತಿಗಳಿಂದ ಕೂಡಿರುವ ಸ್ಪಷ್ಟ ವರದಿಯಾಗಿರಬೇಕು - ರಾಜ್ಯ ಸರಕಾರದ ಉತ್ತರವನ್ನೂ ಕಳಿಸಬೇಕು.
- ಸಾಮಾನ್ಯವಾಗಿ ರಾಜ್ಯಪಾಲರು ವರದಿಯ ಆಧಾರದ ಮೇಲೆಯೇ 356 ನೇ ಕಲಮನ್ನು ಬಳಸಬೇಕಾದರೂ ವಿಶಿಷ್ಟ ಸಂದರ್ಭಗಳಲ್ಲಿ ತಾನಾಗಿಯೇ ಕೇಂದ್ರ ಸರಕಾರ ಅದನ್ನು ಬಳಸಬಹುದು. ಸಮಾಜದ ಜಾತ್ಯಾತೀತ ಸ್ವರೂಪಕ್ಕೆ ಗಂಭೀರ ಅಪಾಯವೊಡ್ಡುವ ಚಟುವಟಿಕೆಗಳಿಗೆ, ಪ್ರತ್ಯೇಕತಾವಾದಿ ಚಳುವಳಿಗಳಿಗೆ ರಾಜ್ಯ ಸರಕಾರ ಪ್ರೋತ್ಸಾಹ ನೀಡದಂತಹ ಸಂದರ್ಭಗಳಲ್ಲಿ ತುರ್ತು ಬಳಕೆ ಅಗತ್ಯವಿದ್ದಲ್ಲಿ ಶೋಕಾಸ್ ನೋಟೀಸ್‌ಕೊಡಬೇಕಾಗಿಲ್ಲ.
- 356ನೇ ಕಲಮು ಬಳಸಿ ಯಾವುದೇ ರಾಜ್ಯ ಸರಕಾರವನ್ನು ವಜಾ ಮಾಡಿದರೆ ಅದರ ಒಂದು ತಿಂಗಳೊಳಗೆ ಸಂಸತ್ತಿನ ಅನುಮೋದನೆ ಪಡೆಯಬೇಕು. ಇದಕ್ಕೆ ಎರಡೂ ಸದನಗಳ ಒಟ್ಟು ಸದಸ್ಯರ ಕನಿಷ್ಟ ಅರ್ಧದಷ್ಟು ಅಥವಾ ಹಾಜರಿದ್ದ ಸದಸ್ಯರ 2/3 ರಷ್ಟು ಮತ ಸಿಗಬೇಕು.
- ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸಬೇಕೇ ಅಥವಾ ಅಮಾನತ್ತಿನಲ್ಲಿಡಬೇಕೇ ಎಂಬುದನ್ನು ಸಂಸತ್ತು ಮಾತ್ರವೇ ನಿರ್ಧರಿಸಬೇಕು.
- ಸಾಮಾನ್ಯ ಸಂದರ್ಭಗಳಲ್ಲಿ ರಾಷ್ಟ್ರಪತಿ ಆಳ್ವಿಕೆ 6 ತಿಂಗಳನ್ನುಮೀರಬಾರದು.

ಪಶ್ಚಿಮಬಂಗಾಳ ಸರಕಾರ ಶೋಕಾಸ್ ಕೊಡದಿದ್ದಂತಹ ಸಂದರ್ಭದಲ್ಲಿ ಅದಕ್ಕೆ ಕಾರಣವನ್ನು ಸ್ಪಷ್ಟವಾಗಿ ನೀಡಬೇಕು ಹಾಗೂ ಸಂಸತ್ತಿನ ಅನುಮೋದನೆಗೆ ಒಟ್ಟು ಸದಸ್ಯರ ಎರಡನೇ ಮೂರು ಬಹುಮತ ಬೇಕು ಎಂದು ಅಭಿಪ್ರಾಯಪಟ್ಟಿತು. ಕೇರಳ ಸರಕಾರವೂ ಇದೇ ಅಭಿಪ್ರಾಯ ವ್ಯಕ್ತಪಡಿಸಿತಲ್ಲದೆ ರಾಷ್ಟ್ರಪತಿ ಆಳ್ವಿಕೆಯ ವಿಸ್ತರಣೆಗೆ ಮೂರು ನಾಲ್ಕನೇ ಬಹುಮತವಿರಬೇಕು ಎಂದಿತು.

ಆದರೂ ಅಂತರ-ರಾಜ್ಯ ಮಂಡಳಿ ಕಲಮು 356ರ ಕುರಿತಾದ ಸ್ಥಾಯಿ ಸಮಿತಿಯ ಒಮ್ಮತವನ್ನು ಕುರಿತಂತೆ ಒಮ್ಮತಕ್ಕೆ ಬರಲಿಲ್ಲ. ಪಂಜಾಬಿನ ಮುಖ್ಯಮಂತ್ರಿ ಈಗ 356ನೇ ಕಲಮಿನ ದುರುಪಯೋಗದ ವಿರುದ್ಧ ವಿಧಿಸಿದ ನಿಯಾಮಾವಳಿಗಳು ಸಾಲುವುದಿಲ್ಲ, ಅದನ್ನು ರದ್ದುಮಾಡಬೇಕು ಎಂದು ಪಟ್ಟು ಹಿಡಿದರೆ, ರಾಜಸ್ಥಾನದ ಬಿಜೆಪಿ ಮುಖ್ಯಮಂತ್ರಿಗಳು "ಸಮಾಜದ ಜಾತ್ಯಾತೀತ ಸ್ವರೂಪಕ್ಕೆ ಅಪಾಯದ ಬೆದರಿಕೆ" ಎಂಬ ವಾಕ್ಯವನ್ನು ತೆಗೆಯಬೇಕು ಎಂದರು. ಆದರೆ ಬಹಳಷ್ಟು ಮುಖ್ಯಮಂತ್ರಿಗಳು ಈ ವಾಕ್ಯವನ್ನು ಸ್ವಾಗತಿಸಿದರು. ಅತ್ತ ರಕ್ಷಣಾ ಮಂತ್ರಿ ಮುಲಾಯಂಸಿಂಗ್ ಯಾದವ್ 356 ನೇ ಕಲಮನ್ನು ಯಾವುದೇ ರೀತಿಯಲ್ಲಿ ಬದಲಿಸಬಾರದು ಎಂದರು.

ಈ ರೀತಿಯ ಭಿನ್ನಾಭಿಪ್ರಾಯಗಳಿಂದಾಗಿ ಪ್ರಧಾನ ಮಂತ್ರಿ ಗುಜ್ರಾಲ್ "ಸದ್ಯಕ್ಕೆ ಅದು ಇದ್ದ ಹಾಗೆ ಇರಲಿ, ಆದರೆ ಸಂಯುಕ್ತ ರಂಗ ಸರಕಾರ ಸಹಕಾರಿ ಒಕ್ಕೂಟವಾದಕ್ಕೆ ಬದ್ಧವಾಗಿರುವುದರಿಂದ ಕಲಮು 356 ಈಗಿರುವ ರೀತಿಯಲ್ಲಿ ಇರದಂತೆ ನೋಡಿಕೊಳ್ಳಲು ತನ್ನ ಪ್ರಯತ್ನಗಳನ್ನು ಮುಂದುವರೆಸುವ ಆಶಯ ಹೊಂದಿದೆ" ಎಂದರು.



ಉತ್ತರ ಪ್ರದೇಶದ ರಾಜಧಾನಿಯಲ್ಲಿ ರಣ ಕಹಳೆ

ಸಿಪಿಐ(ಎಂ) ಕೇಂದ್ರ ಸಮಿತಿ ಆಯೋಜಿಸಿದ ಎರಡು ವಾರಗಳ ರಾಷ್ಟ್ರ ವ್ಯಾಪಿ ಆಂದೋಲನಕ್ಕೆ ಉತ್ತರ ಪ್ರದೇಶ ರಾಜಧಾನಿಯಲ್ಲಿ ಜುಲೈ 15 ರಂದು ಚಾಲನೆ ದೊರೆಯಿತು. ಲಾಲ್‌ಬಾಗ್‌ನ ದಯಾ ನಿಧಾನ್ ಪಾರ್ಕ್‌ನಲ್ಲಿ ಈ ಚಳುವಳಿಯ ಕಿಡಿ ಹಾರಿತು. ರಾಜ್ಯದ ಎಲ್ಲಾ 54 ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಜನರು ಕುಂಭದ್ರೋಣ ಮಳೆಯನ್ನು ಲೆಕ್ಕಿಸದ ಮೆರವಣಿಗೆ ಮತ್ತು ರ್‍ಯಾಲಿಯಲ್ಲಿ ಪಾಲ್ಗೊಂಡು ಜನಪರ ನೀತಿಗಳನ್ನು ಅನುಸರಿಸುವಂತೆ ಸಂಯುಕ್ತ ರಂಗ ಸರಕಾರವನ್ನು ಒತ್ತಾಯಿಸುವ ಕರೆಗೆ ದನಿಗೂಡಿಸಿದರು.

ಕೆಲವು ದಿನಗಳಿಂದ ಭಾರೀ ಮಳೆ ಸುರಿಯುತ್ತಿದ್ದರೂ ರ್‍ಯಾಲಿ ದಿನಕೂಡ ಮಳೆಯಿದ್ದರೂ 15 ಸಾವಿರಕ್ಕೂ ಹೆಚ್ಚು ಜನರು ರ್‍ಯಾಲಿಗೆ ಬಂದಿದ್ದರು. ನಾಯಕರ ಭಾಷಣಗಳನ್ನು ಗಮನವಿಟ್ಟು ಆಲಿಸಿದರು.

ಭವ್ಯ ಪರಂಪರೆಯ ನೆನಪು

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ|| ಹರಕಿಷನ್ ಸಿಂಗ್ ಸುರ್ಜಿತ್ ಮಾತನಾಡಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉತ್ತರ ಪ್ರದೇಶದ ಜನಸಾಮಾನ್ಯರು ವಹಿಸಿದ್ದ ಭವ್ಯ ಪಾತ್ರವನ್ನು ನೆನಪಿಸಿಕೊಟ್ಟರು. ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಸಂಯುಕ್ತ ರಂಗದ ಪಾತ್ರ ಹಾಗೂ ಮಹತ್ವದ ಬಗ್ಗೆ ದೀರ್ಘವಾಗಿ ವಿವರಿಸಿದರು.

ಭ್ರಷ್ಟಾಚಾರ ಮತ್ತು ಕಾಂಗ್ರೆಸ್ ಅನುಸರಿಸುತ್ತಿದ್ದ ನೀತಿಗಳ ಮುಂದುವರಿಕೆ ವಿರುದ್ಧ ಸಿಪಿಐ(ಎಂ) ರಾಜಿ ರಹಿತ ಹೋರಾಟವನ್ನು ನಡೆಸುತ್ತದೆ ಎಂದು ಸುರ್ಜಿತ್ ಘೋಷಿಸಿದರು.

ಉತ್ತರ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹದಗೆಡುತ್ತಿರುವುದಕ್ಕೆ ಹಾಗೂ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಜನರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವುದಕ್ಕೆ ಅವರು ಕಳವಳ ವ್ಯಕ್ತಪಡಿಸಿದರು. ಭ್ರಷ್ಟಾಚಾರ ಮತ್ತು ಅನಾಹುತಕಾರಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡುವಂತೆ ಜನತೆಗೆ ಕರೆ ಕೊಟ್ಟರು.

ಕೋಮುವಾದ ಮತ್ತು ಹಿಂದುತ್ವ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕಾದ ಅಗತ್ಯವಿದೆ ಎಂದು ನುಡಿದ ಸುರ್ಜಿತ್, ಅವುಗಳ ಛಿದ್ರಕಾರಿ ರಾಜಕೀಯದ ಬಗ್ಗೆ ಸದಾ ಎಚ್ಚರದಿಂದಿರುವಂತೆ ಸಲಹೆ ಮಾಡಿದರು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೋಮುವಾದಿ ಹಾಗೂ ಜಾತಿವಾದಿ ಶಕ್ತಿಗಳ ಸಮಯಸಾಧಕ ಮೈತ್ರಿಕೂಟವನ್ನು ಹಾಗೂ ಅದು ದಿನಪ್ರತಿ ಜನರ ಮೇಲೆ ನಡೆಸುತ್ತಿರುವ ಅಕ್ರಮಗಳನ್ನು ಸುರ್ಜಿತ್ ಟೀಕಿಸಿದರು.

ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಕಾಂ|| ಪ್ರಕಾಶ್ ಕಾರಟ್ ರಾಷ್ಟ್ರೀಯ ಆಂದೋಲನದ ಬೇಡಿಕೆಗಳ ಬಗ್ಗೆ ವಿವರಣೆ ನೀಡಿದರು. ಈ ಬೇಡಿಕೆಗಳ ಆಧಾರದಲ್ಲಿ ರಾಜ್ಯವ್ಯಾಪಿಯಾಗಿ ವ್ಯಾಪಕ ಪ್ರಚಾರ ನಡೆಸುವಂತೆ ಕರೆಕೊಟ್ಟರು.

ಸಮಯಸಾಧಕ ಬಿಎಸ್‌ಪಿ-ಬಿಜೆಪಿ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಉಂಟಾಗಿರುವ ಪರಿಸ್ಥಿತಿಯ ದೃಶ್ಯವನ್ನು ಉತ್ತರ ಪ್ರದೇಶದ ರಾಜ್ಯ ಸಮಿತಿ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಕಾಂ|| ರಾವ್ ಸುಮೇರ್ ಯಾದವ್ ಬಿಚ್ಚಿಟ್ಟರು.

ಕೋಮುವಾದ ಮತ್ತು ಜಾತಿವಾದ ರಾಜ್ಯದಲ್ಲಿ ವ್ಯಾಪಕವಾಗಿ ತಲೆ ಎತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಹೆಸರಿನಲ್ಲಿ ಪ್ರಮುಖ ಪ್ರತಿಪಕ್ಷಗಳಾದ ಸಮಾಜವಾದಿ ಪಕ್ಷದ 150 ಕ್ಕೂ ಹೆಚ್ಚು ಕಾರ್ಯಕರ್ತರ ಕೊಲೆ ನಡೆದಿದೆ. ಸಾವಿರಾರು ಜನರನ್ನು ಸೆರೆಮನೆಗೆ ತಳ್ಳಲಾಗಿದೆ. ಕೈಗಾರಿಕೆ ಚಟುವಟಿಕೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ, ಅರಾಜಕತೆ ತಾಂಡವವಾಡುತ್ತಿದೆ ಎಂದು ಕಾ|| ಯಾದವ್ ಹೇಳಿದರು.

ಭೌಗೋಳಿಕ ಹಾಗೂ ಐತಿಹಾಸಿಕ ಅಂಶಗಳನ್ನು ನಿರ್ಲಕ್ಷಿಸಿ ಸರಕಾರ ಹೊಸ ಜಿಲ್ಲೆಗಳನ್ನು ರಚಿಸುತ್ತಿದೆ. ಇದರಿಂದ ಬೊಕ್ಕಸಕ್ಕೆ ಭಾರೀ ಹೊರೆಯಾಗುತ್ತಿದೆ ಎಂದು ನುಡಿದರು. ಉದ್ಯೋಗಿಗಳ ವರ್ಗಾವಣೆಗಳ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಆಪಾದಿಸಿದರು.

ಚಂದ್ರಶೇಖರ್ ಆಜಾದರಂಥ ಐತಿಹಾಸಿಕ ವ್ಯಕ್ತಿಗಳ ಹೆಸರಿಟ್ಟಿರುವ ಸ್ಥಳಗಳ ಹೆಸರುಗಳನ್ನು ರಾಜ್ಯ ಸರಕಾರ ಬದಲಾಯಿಸುತ್ತಿರುವುದನ್ನು ಅವರು ಕಟುವಾಗಿ ಟೀಕಿಸಿದರು.

ಅಂಬಿಕಾ ಪ್ರಸಾದ್ ಮಿಶ್ರ, ಸುಭಾಷಿಣಿ ಆಲಿ, ದೀನನಾಥ್ ಸಿಂಗ್, ದೌಲತ್‌ರಾಮ್, ಪ್ರೇಮನಾಥ್‌ರಾಯ್, ಸಾಧುಶರಣ ಮೊದಲಾದವರೂ ಮಾತನಾಡಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ವಿಜಯ್ ರಾವತ್ ಕಲಾಪಗಳನ್ನು ನಡೆಸಿಕೊಟ್ಟರು. ಕಾಂ|| ದೌಲತ್ ರಾಮ್ ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದರು.

ಪ್ರತಿಪಕ್ಷ ದನಿ ಅಡಗಿಸುವ ಹಿಮಾಚಲ ಸರಕಾರ

ದೇಶ ಸ್ವಾತಂತ್ರ್ಯದ ಸ್ವರ್ಣ ಜಯಂತಿಯನ್ನು ಆಚರಿಸುತ್ತಿದೆಯಷ್ಟೆ. ಆದರೆ ಹಿಮಾಚಲಪ್ರದೇಶ ಸರಕಾರ ಇದನ್ನು ತನ್ನದೇ ಆದ ಶೈಲಿಯಲ್ಲಿ ಆಚರಿಸುತ್ತಿದೆ! ರಾಜ್ಯದಲ್ಲಿರುವ ಪ್ರತಿಪಕ್ಷಗಳ ಕಾರ್ಯಕರ್ತರಿಗೆ ಇನ್ನಿಲ್ಲದ ಕಿರುಕುಳನೀಡುವುದೇ ಈ ರಾಜ್ಯ ಸರಕಾರ ಸ್ವರ್ಣ ಜಯಂತಿಗೆ ಕೊಡುವ ಕಾಣಿಕೆಯಾಗಿದೆ!

1993ರ ಡಿಸೆಂಬರ್‌ನಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರಕಾರ ಪ್ರತಿಪಕ್ಷಗಳ ದನಿಯನ್ನು ಅಡಗಿಸಲು ಸತತವಾಗಿ ಪ್ರಯತ್ನಿಸುತ್ತಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸಿಮ್ಲಾ ಒಂದರಲ್ಲೇ ಸಿಪಿಐ(ಎಂ) ಕಾರ್ಯಕರ್ತರ ವಿರುದ್ಧ 150ಕ್ಕೂ ಹೆಚ್ಚು ಸುಳ್ಳು ಮೊಕದ್ದಮೆಗಳನ್ನು ಹೂಡಲಾಗಿದೆ.

ಸಿಪಿಐ(ಎಂ) ಪಕ್ಷ ಮಾತ್ರವೇ ಅಲ್ಲದೆ ಸಾಮೂಹಿಕ ಹಾಗೂ ಇತರ ಸಂಘಟನೆಗಳ ಕಾರ್ಯಕರ್ತರು ಮತ್ತು ನಾಯಕರನ್ನು ಭಯಭೀತಗೊಳಿಸಲು ರಾಜ್ಯಸರಕಾರ ಪೋಲೀಸರನ್ನು ಸಾಧನವನ್ನಾಗಿ ಬಳಸಿಕೊಳ್ಳುತ್ತಿದೆ. ಪಕ್ಷದ ಚಟುವಟಿಕೆಗಳಿಂದ ಗಾಬರಿಗೊಂಡಿರುವ ಸರಕಾರವು ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಕಿಸಾನ್ ಸಭಾ ನಾಯಕರನ್ನು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಜನವಾದಿ ಮಹಿಳಾ ಸಮಿತಿ ಮತ್ತು ಅಂಗನವಾಡಿ ಕಾರ್ಯಕರ್ತರ ಸಂಘದ ಮಹಿಳಾ ಕಾರ್ಯಕರ್ತರ ವಿರುದ್ಧವೂ ಡಜನ್‌ಗಟ್ಟಲೆ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಜನರ ಚಳುವಳಿ ಬಗ್ಗೆ ಸರಕಾರಕ್ಕೆ ಎಷ್ಟು ಸಹನೆಯಿದೆ ಎಂಬುದನ್ನು ಇದರಿಂದ ಅಂದಾಜು ಮಾಡಿಕೊಳ್ಳಬಹುದು.

ಪಾಳೇಗಾರಿ ಆಡಳಿತ

ಹಿಂದೆ ರಾಜನಾಗಿದ್ದ, ಪಾಳೇಗಾರನೊಬ್ಬನ ನಾಯಕತ್ವದಲ್ಲಿ ಕಾಂಗ್ರೆಸ್ ಸರಕಾರ ನಡೆಸಲಾಗುತ್ತಿದೆ. ಬ್ರಿಟೀಷರ ಆಡಳಿತ ದಿನಗಳನ್ನು ನೆನಪಿಸುವ ರೀತಿಯಲ್ಲಿ ಈ ಆಡಳಿತ. ಪೂರ್ಣವಾಗಿ ಸರ್ವಾಧಿಕಾರಿ ರೀತಿಯಲ್ಲಿ ಸರಕಾರವನ್ನು ನಡೆಸಲಾಗುತ್ತಿದೆ. ಬ್ರಿಟಿಷರು ರೂಪಿಸಿದ್ದ 1861 ರ ಪೋಲೀಸ್ ಕಾಯಿದೆಯ 30-ಎ ಸೆಕ್ಷನನ್ನು ಪ್ರಜಾಸತ್ತಾತ್ಮಕ ಚಳುವಳಿಯ ವಿರುದ್ಧ ಬಳಸಲಾಗುತ್ತಿರುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ.

ಸೆಕ್ಷನ್ 30-ಎ ಪ್ರಕಾರ ರ್‍ಯಾಲಿ, ಮೆರವಣಿಗೆಗಳು ಮಾತ್ರವಲ್ಲದೆ ಬೀದಿ ಬದಿ ಸಭೆಗಳನ್ನು ಕೂಡ ನಿಷೇಧಿಸಬಹುದು. ಇವುಗಳಲ್ಲಿ ಪಾಲ್ಗೊಂಡವರನ್ನು ಯಾವುದೇ ಪೂರ್ವ ಸೂಚನೆಯಿಲ್ಲದೆ ಬಂಧಿಸುವ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡುವ ಅಧಿಕಾರವನ್ನು ಪೋಲೀಸರಿಗೆ ನೀಡಲಾಗಿದೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಶಿಮ್ಲಾ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ನಡೆದಿತ್ತು. ಆಗ ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ತೆರಳಿದ ಸಿಪಿಐ(ಎಂ) ಅಭ್ಯರ್ಥಿ ಕಾ|| ಓ.ಪಿ.ಚೌಹಾಣ್ ಮತ್ತು ಪಕ್ಷದ ಇತರ ಕಾರ್ಯಕರ್ತರ ವಿರುದ್ಧ ಕೇಸುಗಳನ್ನು ದಾಖಲಿಸಲಾಯಿತು. ಪ್ರತಿಪಕ್ಷಗಳ ದನಿಯನ್ನು ಅಡಗಿಸಲು ಕಾಂಗ್ರೆಸ್ ಸರಕಾರ ಟೊಂಕಕಟ್ಟಿ ನಿಂತಿದೆ ಎನ್ನುವುದಕ್ಕೆ ಇದೊಂದು ಉತ್ತಮ ಉದಾಹರಣೆ.

ಪ್ರತಿಪಕ್ಷಗಳ ಸಂಘಟನೆಗಳು ಯಾವುದಾದರೂ ಚಳುವಳಿ ಕರೆ ಕೊಟ್ಟರೆ ಅದನ್ನು ವಿಫಲಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಸರಕಾರ ನಡೆಸುತ್ತದೆ. ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವಂತೆ ಒತ್ತಾಯಿಸಲು ಎಸ್‌ಎಫ್‌ಐ ಕಳೆದ ವರ್ಷ ಸೆಪ್ಟೆಂಬರ್ 10ರಂದು 'ಜೈಲು ತುಂಬಿ' ಚಳುವಳಿಗೆ ಕರೆ ನೀಡಿತ್ತು. ಸೆಪ್ಟೆಂಬರ್ 9 ರ ಸಂಜೆಯಲ್ಲಿ ಎಸ್‌ಎಫ್‌ಐನ ಎಲ್ಲಾ ರಾಜ್ಯ ಮುಖಂಡರನ್ನು ಅವರ ಮನೆಗಳು ಮತ್ತು ಹಾಸ್ಟೆಲ್‌ಗಳಲ್ಲಿ ಬಂಧಿಸಲಾಯಿತು.

ಠಾಣೆಗೆ ಬುಲಾವ್!

ಪರಿಸ್ಥಿತಿ ಯಾವ ಹಂತಕ್ಕೆ ಮುಟ್ಟಿದೆಯೆಂದರೆ ರಾಜ್ಯ ಸರಕಾರದ ನೀತಿಗಳನ್ನು ಖಂಡಿಸಿ ಪತ್ರಿಕಾ ಹೇಳಿಕೆ ನೀಡುವ ನಾಯಕರನ್ನು ಪೋಲೀಸ್ ಠಾಣೆಗೆ ಕರೆಸಲಾಗುತ್ತದೆ ಹಾಗೂ ತೀವ್ರ ಪರಿಣಾಮ ಎದುರಿಸಬೇಕಾದೀತು ಎಂದು ಠಾಣೆಯಲ್ಲಿ ಬೆದರಿಕೆಹಾಕಲಾಗುತ್ತದೆ.

ಪ್ರಧಾನಿಗೆ ಮನವಿ

ಪ್ರಧಾನಿ ಐ.ಕೆ.ಗುಜ್ರಾಲ್ ಈಚೆಗೆ ಹಿಮಾಚಲ ಪ್ರದೇಶಕ್ಕೆ ಭೇಟಿಕೊಟ್ಟಾಗ ಸಂಯುಕ್ತರಂಗದ ಇತರ ಅಂಗಪಕ್ಷಗಳ ಜತೆ ಸೇರಿ ಸಿಪಿಐ(ಎಂ) ಒಂದು ಮನವಿ ಪತ್ರವನ್ನು ಅರ್ಪಿಸಿತು.

ರಾಜ್ಯ ಸರಕಾರದ ದೌರ್ಜನ್ಯದ ಕ್ರಮಗಳಿಂದ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ದಮನಿಸಲು ಸಾಧ್ಯವಿಲ್ಲ ಎಂದು ಪಕ್ಷ ಸ್ಪಷ್ಟಪಡಿಸಿದೆ. ಸರ್ವಾಧಿಕಾರಿ ಕ್ರಮಗಳ ವಿರುದ್ಧ ಹೋರಾಡಿ ಪಕ್ಷವನ್ನು ಬಲಪಡಿಸಲು ಸಿಪಿಐ(ಎಂ) ಪ್ರತಿಜ್ಞೆ ಮಾಡಿದೆ.

ಸುಪ್ರೀಂಕೋರ್ಟ್ ಮುಂದೆ ಪ್ರತಿಭಟನೆಯ ದನಿ

ಜುಲೈ ಎಂಟರಂದು ಸುಪ್ರೀಂ ಕೋರ್ಟ್ ಎದುರು ಒಂದು ಮತ ಪ್ರದರ್ಶನ ನಡೆಯಿತು. ಸುಮಾರು 5000 ಕ್ಕೂ ಹೆಚ್ಚು ಕಾರ್ಮಿಕರು, ಮಹಿಳೆಯರು, ಯುವಜನರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಿಪಿಐ(ಎಂ), ಸಿಐಟಿಯು, ಜೆಎಂಎಸ್, ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಈ ಪ್ರದರ್ಶನಕ್ಕೆ ಕರೆ ಕೊಟ್ಟಿದ್ದವು.

ಸಂಸತ್ತು ಅಥವಾ ರಾಜ್ಯಗಳಲ್ಲಾದರೆ ಅಸೆಂಬ್ಲಿ ಕಾರ್ಯಾಲಯಗಳ ಮುಂದೆ ಪ್ರದರ್ಶನಗಳು ನಡೆಯುವುದು ಸರ್ವೆಸಾಮಾನ್ಯ. ಆದರೆ ದೇಶದ ಸರ್ವೋನ್ನತ ನ್ಯಾಯಾಲಯದ ಮುಂದೆಯೇ ಒಂದು ಪ್ರದರ್ಶನ ನಡೆಯಿತೆಂದರೆ ಅದೊಂದು ವಿಶೇಷ ವಿದ್ಯಮಾನವೇ ಸರಿ. ವಿಶೇಷ ಮಾತ್ರವಲ್ಲ ತುಂಬಾ ಮಹತ್ವವೂ ಅದಕ್ಕಿದೆ.

ಪರಿಸರ ಮಾಲಿನ್ಯವನ್ನು ತಡೆಯುವ ಹೆಸರಿನಲ್ಲಿ ಅನೇಕ ಕೈಗಾರಿಕೆಗಳನ್ನು ಮುಚ್ಚುವುದಕ್ಕೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ ಕಾರ್ಮಿಕ ವಿರೋಧಿ ತೀರ್ಪಿಗೆ ಪ್ರತಿಭಟನೆ ದಾಖಲಿಸಿ ಆ ತೀರ್ಪನ್ನು ರದ್ದು ಪಡಿಸುವಂತೆ ಒತ್ತಾಯಿಸುವುದು ಈ ಪ್ರದರ್ಶನದ ಉದ್ದೇಶವಾಗಿತ್ತು. ಸುಪ್ರೀಂಕೋರ್ಟ್‌ನ ಈ ವಿವಾದಾಸ್ಪದ ತೀರ್ಪಿನಿಂದಾಗಿ ಸುಮಾರು ಎರಡು ಲಕ್ಷ ಕಾರ್ಮಿಕರು ಮತ್ತು ಅವರ ಕುಟುಂಬದವರು ಹಸಿವಿನ ದವಡೆಗೆ ಸಿಲುಕಿದ್ದಾರೆ. ಈ ಬಗ್ಗೆ ವಿವರವಾದ ವರದಿಯೊಂದು 'ಐಕ್ಯರಂಗ' ದಲ್ಲಿ ಹಿಂದೆ ಪ್ರಕಟವಾಗಿತ್ತು.

ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಜೋಗೇಂದ್ರ ಶರ್ಮಾ, ಸಿಐಟಿಯು ರಾಜ್ಯಪ್ರಧಾನ ಕಾರ್ಯದರ್ಶಿ ಎಸ್.ಎಸ್.ಭಾರದ್ವಾಜ್, ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಮೊದಲಾದವರು ಪ್ರತಿಭಟನಕಾರರನ್ನುದ್ದೇಶಿಸಿ ಮಾತನಾಡಿದರು.

ಸುಪ್ರೀಂಕೋರ್ಟ್ ತೀರ್ಪಿನಲ್ಲಿರುವ ಆಡಳಿತ ವರ್ಗ ತರಲಾದ ಹಾಗೂ ಕಾರ್ಮಿಕ ವಿರೋಧಿ ಅಂಶಗಳ ಕೆಲವು ನಿರ್ದಿಷ್ಟ ಉದಾಹರಣೆಗಳನ್ನು ಭಾಷಣಕಾರರು ಮುಂದಿಟ್ಟರು. ಹಾಗೂ ಅವುಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿದರು. ಈ ಸಂಬಂಧದಲ್ಲಿ ವಿವರವಾದ ಮನವಿ ಪತ್ರವೊಂದನ್ನು ದೇಶದ ಮುಖ್ಯ ನ್ಯಾಯಾಧೀಶರಿಗೆ ಸಲ್ಲಿಸಲಾಯಿತು.

ತೀವ್ರ ಚಳುವಳಿ, ಕೈಗಾರಿಕೆ ಮುಷ್ಕರ

ಮುಂದಿನ ದಿನಗಳಲ್ಲಿ ಹೋರಾಟವನ್ನು ದೆಹಲಿ, ಉತ್ತರ ಪ್ರದೇಶ ಮತ್ತು ಹರ್ಯಾಣ ರಾಜ್ಯ ಸರಕಾರಗಳ ವಿರುದ್ಧ ಕೇಂದ್ರೀಕರಿಸಲು ನಿರ್ಧರಿಸಲಾಗಿದೆ. ಕಾರ್ಮಿಕ ವಿರೋಧಿಯಾದ ತೀರ್ಪನ್ನು ಕೈ ಬಿಡುವಂತೆ ಒತ್ತಾಯಿಸಲು ಹಾಗೂ ಕಾರ್ಮಿಕರ ಇತರ ಬೇಡಿಕೆಗಳನ್ನು ಮುಂದಿಟ್ಟು ಆಗಸ್ಟ್ 11 ರಂದು ದೆಹಲಿ, ಗಾಜಿಯಾಬಾದ್ ಮತ್ತು ಫರೀದಾಬಾದ್‌ನಲ್ಲಿ ಕೈಗಾರಿಕೆ ಮುಷ್ಕರವನ್ನು ನಡೆಸಲಾಗುತ್ತದೆ.

ಕೇರಳದಲ್ಲಿ ಎಸ್‌ಎಫ್‌ಐ ಜಯಭೇರಿ

ಕೇರಳದಾದ್ಯಂತ ಜುಲೈ 16 ರಂದು 1399 ಶಾಲೆಗಳ ಶಾಲಾ ಪಾರ್ಲಿಮೆಂಟ್(ವಿದ್ಯಾರ್ಥಿ ಸಂಘ)ಗಳಿಗೆ ಚುನಾವಣೆ ನಡೆಯಿತು. 1167 ಸಂಘಗಳಲ್ಲಿ ಎಸ್‌ಎಫ್‌ಐ ಜಯಗಳಿಸಿದೆ. ಈ ಚುನಾವಣೆಗಳನ್ನು ಹಿಂದೆ ಹೈಕೋರ್ಟ್ ನಿಷೇಧಿಸಿತ್ತು. ಈ ಹಿನ್ನೆಲೆಯಲ್ಲಿ ಶಾಲಾ ಪಾರ್ಲಿಮೆಂಟ್ ಚುನಾವಣೆಗೆ ಮಹತ್ವ ಬಂದಿತ್ತು.

ಕೇರಳ ವಿದ್ಯಾರ್ಥಿ ಸಂಘ(ಕೆಎಸ್‌ಯು) ಎಲ್ಲಾ ಜಿಲ್ಲೆಗಳಲ್ಲಿ ಭಾರಿ ಸೋಲಿನೊಂದಿಗೆ ಮುಖಭಂಗಕ್ಕೀಡಾಗಿದೆ. ಎಬಿವಿಪಿ ಏಳು ಶಾಲೆಗಳಲ್ಲಿ ಮಾತ್ರ ಗೆದ್ದಿದೆ.

ಎಸ್‌ಎಫ್‌ಐ ತನ್ನದೇ ಬ್ಯಾನರ್‌ನಡಿ ಸ್ಪರ್ಧಾಕಣಕ್ಕೆ ಇಳಿದಿತ್ತು. ತಿರುವನಂತಪುರಂ ಜಿಲ್ಲೆಯ 131 ಶಾಲೆಗಳ ಪೈಕಿ 121 ರಲ್ಲಿ ಎಸ್‌ಎಫ್‌ಐ ಅಭ್ಯರ್ಥಿಗಳು ಜಯಶಾಲಿಗಳಾಗಿದ್ದಾರೆ. ಎಂಟರಲ್ಲಿ ಕೆಎಸ್‌ಯು, ಎರಡರಲ್ಲಿ ಎಬಿವಿಪಿ ಗೆದ್ದಿತು. ಕೊಲ್ಲಂ ಜಿಲ್ಲೆಯ 160 ಶಾಲೆಗಳಲ್ಲಿ 148, ಕಾಸರಗೋಡು ಜಿಲ್ಲೆಯ 63 ರಲ್ಲಿ 42, ಕಣ್ಣೂರಿನ 115 ರಲ್ಲಿ 103 ಮತ್ತು ಮಲ್ಲಪುರಂ ಜಿಲ್ಲೆಯ 21ರ ಪೈಕಿ 20 ಶಾಲೆಗಳಲ್ಲಿ ಎಸ್‌ಎಫ್‌ಐಗೆ ಜಯದ ಮಾಲೆ ಬಿದ್ದಿದೆ.

ಸೈನಿಕರಿಗೆ ಪಿಂಚಣಿ

ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಸೈನಿಕರಿಗೆ ಮಾಸಿಕ 200 ರೂಪಾಯಿ ಪಿಂಚಣಿ ನೀಡಲು ಕೇರಳ ಸರಕಾರ ನಿರ್ಧರಿಸಿದೆ. ವಾರ್ಷಿಕ ಆದಾಯ 6000 ರೂ. ಗಿಂತ ಕಡಿಮೆ ಇರುವವರು ಹಾಗೂ ಬೇರಾವುದೇ ಪಿಂಚಣಿ ಪಡೆಯದಿರುವವರು ಈ ಪಿಂಚಣಿಗೆ ಅರ್ಹರು.

ರಾಜ್ಯದಲ್ಲಿನ ಜಿಲ್ಲಾ ಸೈನಿಕ ಕಲ್ಯಾಣ ಅಧಿಕಾರಿಗಳ ಮೂಲಕ ಪಿಂಚಣಿಯನ್ನು ವಿತರಿಸಲಾಗುತ್ತದೆ.

ಎಸ್‌ಎಫ್‌ಐ ಅಧ್ಯಯನ ಶಿಬಿರ

ಮಂಗಳೂರು: ದ.ಕನ್ನಡ ಜಿಲ್ಲಾ ಮಟ್ಟದ ಎಸ್‌ಎಫ್‌ಐನ ಅಧ್ಯಯನ ಶಿಬಿರವು ಜುಲೈ 13ರಂದು ನಗರದ ಎನ್‌ಜಿಒ ಹಾಲ್‌ನಲ್ಲಿ ನಡೆಯಿತು. ಅಧ್ಯಯನ ಶಿಬಿರದಲ್ಲಿ ಭಾಗವಹಿಸಿದ್ದ ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಕೆ.ಎನ್. ಉಮೇಶ್ ಮಾತನಾಡುತ್ತಾ, ಇಂದಿನ ಶಿಕ್ಷಣ ವ್ಯವಸ್ಥೆಯು ಖಾಸಗೀಕರಣದಿಂದಾಗಿ, ತೀವ್ರಅಧಃಪತನದತ್ತ ಸಾಗುತ್ತಿದೆ. ಡೊನೇಷನ್ ಹಾವಳಿಯು ವಿದ್ಯಾರ್ಥಿ ಮತ್ತು ಪೋಷಕರನ್ನು ದಟ್ಟವಾಗಿ ಕಾಡುತ್ತಿದೆ. ವಿದ್ಯಾರ್ಥಿ ಸಮುದಾಯದ ಮಧ್ಯೆ ಭೂತಾಕಾರವಾಗಿ ಬೆಳೆದಿರುವ ಈ ಸಮಸ್ಯೆಯನ್ನು ಪರಿಹರಿಸಲು ಐಕ್ಯಹೋರಾಟದಿಂದ ಸಾಧ್ಯವೆಂದರು.

ಶಿಬಿರದಲ್ಲಿ ಎಸ್‌ಎಫ್‌ಐನ ಜಿಲ್ಲಾಧ್ಯಕ್ಷರಾದ ಹರಿಪ್ರಸಾದ್‌ರೈ, ಡಿವೈಎಫ್‌ಐನ ವಸಂತ ಆಚಾರಿ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ತಾರಾನಾಥ್ ಭಾಗವಹಿಸಿದ್ದರು.

ಶುಲ್ಕ ಹೆಚ್ಚಳದ ವಿರುದ್ಧ ವಿದ್ಯಾರ್ಥಿಗಳಿಂದ ರಸ್ತೆ ತಡೆ

ರಾಯಚೂರು: 1997-98ನೇ ಸಾಲಿಗೆ ಕರ್ನಾಟಕ ರಾಜ್ಯ ಸರಕಾರವು ಎಲ್ಲ ಸರಕಾರಿ ಅನುದಾನಿತ -ಅನುದಾನರಹಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ದಿಢೀರನೇ 355 ರಿಂದ 1530 ರ ವರೆಗೆ ಶುಲ್ಕವನ್ನು ಏರಿಸಿದ ಕ್ರಮವನ್ನು ವಿರೋಧಿಸಿ ಎಸ್‌ಎಫ್‌ಐ ರಾಜ್ಯ ಸಮಿತಿ ಕರೆಯ ಮೇರೆಗೆ ಜುಲೈ 10 ರಂದು ಸರಕಾರಿ ಪದವಿ ಪೂರ್ವ ಕಾಲೇಜಿನ ಮುಂದೆ ಸುಮಾರು 500 ವಿದ್ಯಾರ್ಥಿಗಳಿಂದ 2 ತಾಸು ಸಿಂಧನೂರು ಎಸ್‌ಎಫ್‌ಐ ತಾಲ್ಲೂಕು ಸಮಿತಿ ರಸ್ತೆ ತಡೆ ಚಳುವಳಿ ನಡೆಸಿತು.

ರಸ್ತೆ ತಡೆ ಚಳುವಳಿಯ ನೇತೃತ್ವ ವಹಿಸಿ ಮಾತನಾಡಿದ ಎಸ್‌ಎಫ್‌ಐನ ತಾಲ್ಲೂಕು ಅಧ್ಯಕ್ಷ ಸಿ.ಚಿದಾನಂದ ದೊರೆ ಕಾರ್ಯದರ್ಶಿ ಶಿವಮೂರ್ತಯ್ಯ, ಉಪಾಧ್ಯಕ್ಷ ಜಿ.ಹನುಮೇಶ ಅವರು ಆಳುವ ಸರಕಾರಗಳು ಶಿಕ್ಷಣವನ್ನು ಅನುತ್ಪಾದನ ಘಟಕವೆಂದು ತೀರ್ಮಾನಿಸಿ ಶಿಕ್ಷಣವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ವಹಿಸಿ ಕೊಡುವ ಹುನ್ನಾರ ಹೊಂದಿದೆ ಎಂದರು. ಏರಿಸಿದ ಶುಲ್ಕಗಳನ್ನು ಹಿಂತೆಗೆದುಕೊಳ್ಳದಿದ್ದರೆ ಮುಂದಿನ ಹಂತದಲ್ಲಿ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಲಾಯಿತು.

ಗುಲ್ಬರ್ಗ ವಿಶ್ವವಿದ್ಯಾಲಯ ರಾಯಚೂರು ನಗರದ ಸರಕಾರಿ ಕಾಲೇಜಿನಲ್ಲಿ ಬಿ.ಎಸ್ಸಿ.ಎಲೆಕ್ಟ್ರೀಷಿಯನ್ ಕೋರ್ಸ್ ರದ್ದು ಪಡಿಸಿದ್ದನ್ನು ಪುನಃ ಪ್ರಾರಂಭಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ವೈದ್ಯಕೀಯ ಸೌಲಭ್ಯಕ್ಕಾಗಿ ಒತ್ತಾಯಿಸಿ ಧರಣಿ

ಶಹಬಾದ್: ಗುಲ್ಬರ್ಗ ಜಿಲ್ಲೆಯ ಶಹಬಾದ್ (ಶಾಂತನಗರ)ನ ದವಾಖಾನೆಯಲ್ಲಿನ ವೈದ್ಯಕೀಯ ಸೌಲಭ್ಯಗಳ ಕೊರತೆ ವಿರುದ್ಧ ಎಬಿಬಿಎಬಿಎಲ್ ಕಾರ್ಖಾನೆಯ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಜುಲೈ 7 ರಂದು ಆಸ್ಪತ್ರೆಯ ಎದುರು ಮೂರು ಗಂಟೆಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದರು. ಧರಣಿಯಲ್ಲಿ 600 ಕಾರ್ಮಿಕರು ಭಾಗವಹಿಸಿದ್ದರು.

ಸುಮಾರು ತಿಂಗಳುಗಳಿಂದ ಇಲ್ಲಿರುವ ಸ್ಥಳೀಯ ಇಎಸ್‌ಐ ದವಾಖಾನೆಯಲ್ಲಿ ಕಾರ್ಮಿಕರಿಗೆ ಹಾಗೂ ಅವರ ಪರಿವಾರದವರಿಗೆ ಯಾವುದೇ ವೈದ್ಯಕೀಯ ಸೌಲಭ್ಯಗಳು ಸಿಗುತ್ತಿಲ್ಲವಾಗಿದೆ. ಆದರೆ ಕಾರ್ಮಿಕರಿಂದ ವೈದ್ಯಕೀಯ ಹಣವನ್ನು ಕಡ್ಡಾಯವಾಗಿ ಪಡೆಯುತ್ತಿದ್ದು ಅದಕ್ಕೆ ತಕ್ಕಂತೆ ಔಷದೋಪಚಾರ, ಮಹಿಳಾ ವೈದ್ಯರು, ಚುಚ್ಚುಮದ್ದುಗಳು, ಇನ್ನಿತರೆ ಯಾವುದೇ ಔಷಧಿಗಳು ಇಲ್ಲದೆ ರೋಗಿಗಳು ನರಳುವ ಪರಿಸ್ಥಿತಿ ಇದ್ದು ಈ ಬಗ್ಗೆ ಸಿಐಟಿಯು ಇಎಸ್‌ಐ ನಿರ್ದೇಶಕರಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಸಹ ಇದರ ಬಗ್ಗೆ ಎಳ್ಳಷ್ಟು ಕಾಳಜಿ ವಹಿಸದಿರುವುದರಿಂದಾಗಿ ಧರಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪೋಲೀಸರ ಮಧ್ಯಪ್ರವೇಶದಿಂದಾಗಿ ಆಸ್ಪತ್ರೆಯ ವೈದ್ಯರು ಬೆಂಗಳೂರಿನ ಇಎಸ್‌ಐ ನಿರ್ದೇಶಕರೊಂದಿಗೆ ತಂತಿ ಮೂಲಕ ಮಾತನಾಡಿ ಸದ್ಯಕ್ಕೆ ಕೆಲವು ಔಷಧಿಗಳು ಹಾಗೂ ಚುಚ್ಚು ಮದ್ದುಗಳನ್ನು ಕಳುಹಿಸಿಕೊಟ್ಟಿದ್ದು, ಇನ್ನಿತರ ಔಷಧಿಗಳನ್ನು ಹದಿನೈದು ದಿನಗಳೊಳಗೆ ಕಳುಹಿಸುವೆವು ಹಾಗೂ ಒಂದು ತಿಂಗಳೊಳಗೆ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಿಸುವೆವು ಎಂಬ ಆಶ್ವಾಸನೆ ಬಂದ ಮೇಲೆ ಧರಣಿ ಕಾರ್ಯಕ್ರಮ ಮುಕ್ತಾಯವಾಯಿತು. ಸಂಘದ ಅಧ್ಯಕ್ಷರಾದ ಎ.ಬಿ.ದಾಸ್ ಕಾರ್ಯದರ್ಶಿ ಧರ್ಮವೀರ ಚವ್ಹಾಣ್ ಮುಂತಾದವರು ಭಾಗವಹಿಸಿದ್ದರು.

ಆಶ್ವಾಸನೆಯ ಪ್ರಕಾರ ತಿಂಗಳೊಳಗಾಗಿ ಸಮಸ್ಯೆ ಪರಿಹಾರವಾಗದಿದ್ದರೆ, ಕಾರ್ಮಿಕರನ್ನೊಳಗೊಂಡ 'ಬೆಂಗಳೂರು ಚಲೋ' ಕಾರ್ಯಕ್ರಮ ಹಮ್ಮಿಕೊಳ್ಳುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ರಾಜ್ಯದ ದುಡಿಯುವ ಜನರಿಗೆ ಅಭಿನಂದನೆ


ಪುಟ ಒಂದರಿಂದ

ರಿಂದ ಸಂಯುಕ್ತರಂಗ ಸರಕಾರ ಕೈಗೊಳ್ಳುವ ಎಲ್ಲ ನಿರ್ಣಯಗಳಿಗೆ, ಅದರ ಎಲ್ಲ ಧೋರಣೆಗಳಿಗೆ, ಅದರ ಆಡಳಿತ ಕ್ರಮಗಳಿಗೆಲ್ಲಾ ಸಿಪಿಐ(ಎಂ) ಪಕ್ಷವೂ ಜವಾಬ್ದಾರಿಯಾಗಿದೆಂಬ ತಪ್ಪು ಭಾವನೆ ಸಾರ್ವಜನಿಕರಲ್ಲಿ ಉಂಟಾಗಬಾರದು, ಸಂಯುಕ್ತರಂಗ ಸರಕಾರದ ಹಲವಾರು ಜನವಿರೋಧಿ ಕ್ರಮಗಳನ್ನು ಸಿಪಿಐ(ಎಂ) ವಿರೋಧಿಸುತ್ತಾ ಬಂದಿದೆ. ಈಗಲೂ ವಿರೋಧಿಸುತ್ತಿದೆ, ಆದರೆ ಬಿಜೆಪಿ ಮತ್ತು ಕಾಂಗ್ರೆಸನ್ನು ಅಧಿಕಾರದಿಂದ ಹೊರಗಿಡುವ [illegible]ವಾಗಿ, ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಠಗೊಂಡು ದೇಶದಲ್ಲಿ ಮೂರನೆಯ ಬಲಿಷ್ಠ ಪರ್ಯಾಯ ಶಕ್ತಿಯಾಗಿ ಬೆಳೆದು ಬರಬೇಕು, ದೇಶವನ್ನು ದುಷ್ಟ ಶಕ್ತಿಗಳಿಂದ, ಐಎಂ

ಹಾಗಾಗಬೇಕಾದರೆ ಜೆ.ಎಚ್.ಪ[illegible] ಸರಕಾರ ತನ್ನ ನೀತಿಯಲ್ಲಿ ಬದಲಾವಣೆ ತರಬೇಕು. ಜನರ ಸಮಸ್ಯೆಗಳನ್ನರಿತು ಅವುಗಳಿಗೆ ಸರಿಯಾಗಿ ಸ್ಪಂದಿಸಿ ಪರಿಹಾರ ಒದಗಿಸಬೇಕು. ಹಾಗೆ ಮಾಡುವಲ್ಲಿ ಅದು ವಿಫಲಗೊಂಡಿದೆ.


ಆದ್ದರಿಂದ ಕೇಂದ್ರ ಮತ್ತು ರಾಜ್ಯದ ಸರಕಾರಗಳಲ್ಲಿ ಜನವಿರೋಧಿ ನೀತಿಗೆ ವಿರುದ್ಧ, ಅವುಗಳನ್ನು ಜನಪರವಾಗಿ ತಿದ್ದಿಕೊಳ್ಳಬೇಕೆಂದು ಒತ್ತಾಯಿಸುವ ಸಲುವಾಗಿ ಹದಿನೈದು ದಿವಸ ರಾಷ್ಟ್ರಮಟ್ಟದ ಜನಾಂದೋಲನ ನಡೆಸಲಾಗಿದೆ. ಅದರ ಅಂಗವಾಗಿ, ಬೆಂಗಳೂರಿನಲ್ಲಿ 25-7-97 ರಂದು ನಡೆದ ರ್‍ಯಾಲಿಗೆ ಗುಲ್ಬರ್ಗಾ ಮತ್ತು ಧಾರಾವಾಡ ಜಿಲ್ಲೆಗಳಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೂಲಿ ಕಾರ್ಮಿಕರು, ರೈತರೂ ಬಂದಿದ್ದಾರೆ. ಭೂಮಿಗಾಗಿ, ಸರಕಾರದ ಭೂಮಾಲೀಕರ ಕ್ರೂರ ದಬ್ಬಾಳಿಕೆಗಳ ವಿರುದ್ಧ ಧೀರ ಹೋರಾಟ ನಡೆಸಿದ ಧಾರವಾಡ ಜಿಲ್ಲೆಯ ಹಾನಗಲ್, ಶಿಗ್ಗಾಪಿ, ಕಲಘಟಗಿ ಮೊದ

ದನ್ನು ಗಮನಿಸಬೇಕು. ಪಕ್ಷದ ಘಟಕಗಳು, ಸಾಮೂಹಿಕ ಸಂಘಟನೆಗಳೆಲ್ಲಾ ಕೇಂದ್ರ ಮತ್ತು ರಾಜ್ಯಸಮಿತಿಯ ಕರೆಗೆ ಕೊಟ್ಟಿರುವ ಮಹತ್ವ ರ್‍ಯಾಲಿಯ ಯಶಸ್ಸಿಗೆ ಕಾರಣವಾಗಿದೆ. ದೇಶದ, ರಾಜ್ಯದ ರಾಜಕೀಯ ಪರಿಸ್ಥಿತಿಯ ಗಾಂಭೀರ್ಯತೆಯ ಅರಿವು ಪಕ್ಷದ-ಸಾಮೂಹಿಕ ಸಂಘಟನೆಯ ಮುಖಂಡರನ್ನೂ, ಕಾರ್ಯಕರ್ತರನ್ನೂ ಎಚ್ಚರಿಸಿರು



ಮೆರವಣಿಗೆಯಲಿ ರಾಜ್ಯ ಕಾರ್ಯದಶಿ ಪಿ.ರಾಮಚಂದ್ರರಾವ್, ಕಾರ್ಮಿಕ ಮುಖಂಡ ಸೂರ್ಯನಾರಾಯಣರಾವ್, ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿ ಮತ್ತಿತರರು ▲

▼ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದರು.



ಪುರುಷರನ್ನೂ ಮೀರಿಸುವ ಸಮರಶೀಲ ಘೋಷಣೆಗಳನ್ನು ಕೂಗುತ್ತಿದ್ದ ಮಹಿಳೆಯರ ಸಾಲು-ಸಾಲು



ಎಫ್-ವಿಶ್ವಬ್ಯಾಂಕ್‌ಗಳ ಧಾಳಿಗಳಿಂದ ರಕ್ಷಿಸಿ, ದೇಶದ ಸಾರ್ವಭೌಮತ್ವವನ್ನು ಉಳಿಸಿಕೊಳ್ಳಬೇಕೆಂಬ ಮಹೋದ್ದೇಶದಿಂದ ಸಿಪಿಐ(ಎಂ) ಪಕ್ಷ ಸಂಯುಕ್ತರಂಗ ಸರಕಾರಕ್ಕೆ ಬೆಂಬಲ ನೀಡಿ ಅದರ ಜನವಿರೋಧಿ ಧೋರಣೆಗಳ ಬದಲಾವಣೆಗಾಗಿ ಶತಪ್ರಯತ್ನ ನಡೆಸಿದೆ ಎಂಬ ಅಂಶವನ್ನು ಜನರ ಮಧ್ಯೆ ಕೊಂಡೊಯ್ದು ಜನ ನಿಜವಾದ ಪರಿಸ್ಥಿತಿಯನ್ನು ಮನಗಾಣಬೇಕೆಂದು ಬಿಜೆಪಿ, ಕಾಂಗ್ರೆಸ್‌ಗಳ ವಿರುದ್ಧ ಮೂರನೆಯ ಪರ್ಯಾಯ ವ್ಯವಸ್ಥೆಗೆ ತಮ್ಮ ಒಲವು ತೋರಿಸಿ ಬೆಂಬಲ ನೀಡುವಂತಾಗಬೇಕೆಂಬ ಉದ್ದೇಶದಿಂದಲೇ ಸಿಪಿಐ(ಎಂ) ಕೇಂದ್ರ ಸಮಿತಿ ಜೂನ್ 15 ರಿಂದ 30 ರವರೆಗೆ ರಾಷ್ಟ್ರೀಯ ಪ್ರಚಾರಾಂದೋಲನ ಕರೆ ಕೊಟ್ಟಿತ್ತು.

ಕರ್ನಾಟಕದಲ್ಲಿ

ಕರ್ನಾಟಕದಲ್ಲಿ ಜನತಾದಳ ಸರಕಾರ ಆಡಳಿ[illegible] ನಡೆಸುತ್ತಿದೆ. ಈ ಸರಕಾರದ ಆಡಳಿತಾತ್ಮಕ ಕ್ರಮಗಳಿಂದಾಗಿ, ಅದು ಕೈಗೊಳ್ಳುವ ನಿರ್ಣಯಗಳಿಂದಾಗಿ ಜನ ಬೇಸತ್ತಿದ್ದಾರೆ. ಅದರ ಲಾಭ ಕಾಂಗ್ರೆಸ್ ಮತ್ತು ಬಿಜೆಪಿಗೆ ಲಭ್ಯವಾಗಬಾರದು. ಅದನ್ನು ತಡೆಯಬೇಕು.

ಲಾದ ತಾಲ್ಲೂಕುಗಳಿಂದ, ರಾಯಚೂರು ಜಿಲ್ಲೆ[illegible] ಗಂಗಾವತಿ, ಸಿಂಧನೂರು ತಾಲ್ಲೂಕುಗಳಿಂದ, ಬಳ್ಳಾರಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕೂಲಿಕಾರರು ಬಂದಿದ್ದಾರೆ. ನೀರಾವರಿ, ಬೆಳೆದ ಬೆಳೆಗೆ ನ್ಯಾಯಬೆಲೆ ಮತ್ತಿತರ ಬೇಡಿಕೆಗಳಿಗಾಗಿ ಹೋರಾಟ ನಡೆಸಿರುವ ರೈತರು, ಕೋಲಾರ, ಬಿಜಾಪುರ, ಗುಲ್ಬರ್ಗಾ, ಬೀದರ, ಬಳ್ಳಾರಿ, ಧಾರವಾಡ, ಬೆಂಗಳೂರು ಮತ್ತಿತರ ಕಡೆಗಳಿಂದ ಬಂದಿದ್ದಾರೆ. ಅಂಗನವಾಡಿ, ಗ್ರಾಮಪಂಚಾಯಿತಿ, ಬೀಡಿ, ತೋಟ ಕಾರ್ಮಿಕರೆಲ್ಲಾ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರೂ, ಎಲ್.ಐ.ಸಿ, ಬ್ಯಾಂಕಿನ ನೌಕರರೂ ತಮ್ಮ ಪ್ರಾತಿನಿಧ್ಯ ತೋರ್ಪಡಿಸಿದ್ದಾರೆ. ರ್‍ಯಾಲಿಯಲ್ಲಿ ಹೆಚ್ಚಿನ ಗಮನ ಸೆಳೆದಿರುವುದು ಅಂಗನವಾಡಿ, ಕೃಷಿ, ಬೀಡಿ, ಮತ್ತಿತರರ ಕಾರ್ಮಿಕ ವಿಭಾಗಗಳ ಮಹಿಳೆಯರ ಸೈನ್ಯ ಪುರುಷರಿಗೂ ಮೀರಿಸುವ ರೀತಿಯಲ್ಲಿ ಘೋಷಣೆ ಕೂಗುವುದರ ಮೂಲಕ, ಶಿಸ್ತು ಕಾಪಾಡುವುದರ ಮೂಲಕ ತಮ್ಮ ಮೇಲಟ್ಟಿದ ಅಸ್ತಿತ್ವವನ್ನು ತೋರಿಸಿ ಕೊಟ್ಟಿವೆ. ಮೊನ್ನೆ ನಡೆದ ಬೆಂಗಳೂರಿನ ರ್‍ಯಾಲಿಯ ವೈಶಿಷ್ಟ್ಯಗಳಲ್ಲಿ ಇದೊಂದೆಂಬು

ವುದರಿಂದ ಬೆಂಗಳೂರು ರ್‍ಯಾಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಈ ರ್‍ಯಾಲಿಯನ್ನು ಇನ್ನೂ ಪರಿಣಾಮಕಾರಿಯಾಗಿ ನಡೆಸಬಹುದಿತ್ತು, ಹೆಚ್ಚಿನ ಪ್ರಯತ್ನವನ್ನು ಅದರ ಸಲುವಾಗಿ ಮೀ[illegible]ಡಬೇಕು. ಇನ್ನೂ ಪರಿಣಾಮಕಾ[illegible]ಯಾದ ಪ್ರಚಾರಪ್ರಕ್ರಿಯೆ ನಡೆಸಬೇಕು. ಅದರ ಮೂಲಕ ಇತರರೂ ಇಂಥ ರ್‍ಯಾಲಿಗಳಲ್ಲಿ ಹೆಚ್ಚೆಚ್ಚಾಗಿ ಭಾಗವಹಿಸುವಂತೆ ಮಾಡಬೇಕು. ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ರ್‍ಯಾಲಿಯ ಯಶಸ್ಸಿಗೆ ಹೆಚ್ಚು ಗಮನಕೊಟ್ಟು ಕೆಲಸ ಮಾಡಿದೆ. ಆದರೆ ಬೆಂಗಳೂರು ನಗರದ ದುಡಿಯುವ ಜನ, ಮಧ್ಯಮವರ್ಗ ಹಾಗೂ ರೈತರೂ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಇಂಥ ರಾಜ್ಯ ಮಟ್ಟದ ರ್‍ಯಾಲಿಗಳಲ್ಲಿ ಪಾಲುಗೊಳ್ಳವಂತೆ ಮಾಡುವುದು ಅಗತ್ಯ. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಗೆ ಪಕ್ಷದ ಇತರೆ ಘಟಕಗಳಿಗೆ ಹಾಗೂ ಎಲ್ಲಾ ಹೋರಾಟಶೀಲ ಜನರಿಗೆ ಅಭಿನಂದನೆಗಳು.

ಜುಲೈ 10 ರಿಂದ ಬೆಂಗಳೂರಿನಲ್ಲಿ ರಾಷ್ಟ್ರೀಯ ಪ್ರಚಾರಾಂದೋಲನದ ಸಂದರ್ಭದಲ್ಲಿ ಸಿಪಿಐ(ಎಂ)ನ ಸಾಂಸ್ಕೃತಿಕ ತಂಡ ನಗರದ ಸುಮಾರು [illegible]ಕಡೆ 'ಸೌಗಂಧಿಕ ಪುಷ್ಪ' ವೆಂಬ ಬೀದಿ ನಾಟಕ ಹಾಗೂ ಹಾಡುಗಳ ಮೂಲಕ ಪ್ರಚಾರ ನಡೆಸಿತು. ಈ ಸಂದರ್ಭದಲ್ಲಿ ಕೇಳಬಂದ ಹಾಡುಗಳಲ್ಲಿ ಎರಡು ಇಲ್ಲಿವೆ.

ಕೆಂಪುಬಾವುಟ ಕೆಂಪುಬಾವುಟ

ಕೆಂಪುಬಾವುಟ ಕೆಂಪುಬಾವುಟ
ಕೆಂಪುಬಾವು[illegible] ಎಲ್ಲಿಯದೋ
ಈ ಕೆಂಪು ಬಾವುಟ ಎಲ್ಲಿಯದೋ
ಕೆಂಪು ಬಾವುಟ
ಕೆಂಪು ಬಾವುಟ
ಕೆಂಪು ಬಾವುಟ ಹೊಯ್......

ಹೋರಾಟದಲ್ಲೇ ಹುಟ್ಟಿತಣ್ಣೋ...
ಇದು ಶ್ರಮಜೀವಿಗಳ ಬೆಳಕಣ್ಣೋ
ವರ್ಗ ವರ್ಗಗಳ ಹೋರಾಟದಲಿ
ಶೋಷಿತ ವರ್ಗದ ದನಿಯಣ್ಣೋ
ಸಮಾನತೆಯ ಹೋರಾಟದಲಿ ಸ್ಫೂರ್ತಿಯ
ನೀಡುವ ಕಿರಣಕಣ್ಣೋ
॥ಕೆಂಪು ಬಾವುಟ॥

ಯಂತ್ರದ ಜೊತೆಯಲೆ ಬದುಕು ಕಣೋ
ಹೊಲಗದ್ದೆಗಳಲ್ಲೆ ಉಸಿರುಕಣೋ...
ಬಿಡುವೇ ಇಲ್ಲದ ಬದುಕುಕಣೋ...
ನಮ್ಮ ಕನಿಷ್ಟ ಕೂಲಿಯ ಹೋರಾಟ ಮಾಡಿ ಬೇಡಿ
ಕೆ ಗೆಲ್ಲುವ ಬನ್ನಿರಣ್ಣೋ
॥ಕೆಂಪು ಬಾವುಟ॥

ಅಡ್ಡಗೋಡೆಯನ್ನೊಡೆಯುವ ಬನ್ನಿ
ಶೋಷಣೆ ಬೇರನು ಕೀಳುವ ಬನ್ನಿ
ರೈತ ಕಾರ್ಮಿಕರೆ ಒಂದಾಗಿ ಬನ್ನಿ
ವಿದ್ಯಾರ್ಥಿ ಯುವಜನ ಒಂದಾಗಿ ಬನ್ನಿ
ಕೆಂಪು ಬಾವುಟ ಹಿಡಿದು ನಾವು ಬದುಕಿನ ಬವಣೆಯ ನೀಗುವ ಬನ್ನಿ.
॥ಕೆಂಪು ಬಾವುಟ।

ಬಂಜಾರೆ ಬಂಜೋ.....ಓ ನಾರೆ ಬಂಜಾ

ಬಂಜಾರೆ ಬಂಜೋ.....ಓ ನಾರೆ ಬಂಜಾ
ಓ...ನಾರೆ...ಆ...ನಾರೆ...ಓನಾರೆ ಬಂಜಾ....

ಕೋಳಿಕೂಗಿನಿಂದ ಸಂಜೆ ಇರುಳವರೆಗು ಚಂದ
ಮಾಮ..
ಬೆವರಲ್ಲೆ ಮಿಂದರು ತುತ್ತು ಇಲ್ಲವೋ ಚಂದ
ಮಾಮ.
ಒಂದಾಗಿ ರೈತರೆ ಸೇರುವ ಬನ್ನಿ
ಕೆಂಪು ಪತಾಕೆಯ ಹಿಡಿಯುವ ಬನ್ನಿ
ಹೆಜ್ಜೆಗಳು ಒಂದಾಗಿ ದನಿಗಳು ಒಂದಾಗಿ
ಕ್ರಾಂತಿ ಕಹಳೆ ಕೂಗುವ...
ರೇಲಾರೆ....ರೆಲಾರಾಯಿರೆಲ ರೇಲಾರೆ....

ಯಂತ್ರಗಳಲ್ಲೆ ಯಂತ್ರವಾಗಿ ಚಂದಮಾಮ
ರಕ್ತದಿಂದಲೆ ಉದ್ದಿಮೆ ನಡೆಸಿತವ ಚಂದಮಾಮ
ಕನಿಷ್ಟಕೂಲಿಯಯ ಕೇಳಲು ಹೋಗಿ
ಲಾಠಿ ಬೂಟಿನ ಏಟನು ತಿಂದು
ಸಂಘದ ಕಟ್ಟಿ ಬೇಡಿಕೆ ಗೆದ್ದು ಕೆಂಪು ಬೆಳಕ ಕಂಡವಾ
ರೇಲಾರೆ....ರೆಲಾರಾಯಿರೆಲ ರೇಲಾರೆ...

ಸಮಾನತೆಯ ಹಕ್ಕಿಗಾಗಿ ಚಂದಮಾಮ
ಮಹಿಳೆಯರು ಒಂದಾಗಿ ಹೋರಾಡುತ್ತಾರೆ ಚಂದ
ಮಾಮ
ನಾವು ನೀವು ದನಿಯಾಗಿ ಕೂಡಿ
ಮಹಿಳೆಯರ ನೋವಿಗೆ ಸ್ಪಂದನ ನೀಡಿ
ಹೋರಾಟ ಮಾಡಿ ಹಕ್ಕನ್ನು ಪಡೆದು
ಬದುಕು ಹಸನುಗೊಳಿಸುವಾ
ರೇಲಾರೆ....ರೆಲಾಯಿರೆಲ.....ರೇಲಾರೆ.....

ಬೆಂಗಳೂರಿನಲ್ಲಿ ಪ್ರಚಾರಾಂದೋಲನದ ಸಂದರ್ಭದಲ್ಲಿ ಬೀದಿನಾಟಕದ ಒಂದು ದೃಶ್ಯ ▶



▼ ಕೆಂಬಾವುಟಗಳ ಮೆರವಣಿಗೆ



ಇನ್ನೊಂದು ದೈತ್ಯ ಸುಳ್ಳು!

ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರ ಇನ್ನೊಂದು ಯಾತ್ರೆ ಮುಗಿದಿದೆ. 1990 ರಲ್ಲಿ ಸಾವು, ವಿನಾಶ, ರಕ್ತಪಾತ, ಗಲಭೆಗಳನ್ನ ಬ್ಬಿಸುತ್ತಾ ಹೋದ ಅಯೋಧ್ಯಾ ರಥಯಾತ್ರೆಯೊಂದಿಗೆ ಆರಂಭವಾದ ಯಾತ್ರೆಗಳ ಸರಣಿಯಲ್ಲಿ ಇದು ಐದನೆಯದು. ಪ್ರತಿಯೊಂದು ಯಾತ್ರೆಗೂ ಹಿಂದಿನ ಯಾತ್ರೆಗಿಂತ ಜನಸ್ಪಂದನದ ಪ್ರಮಾಣ ಹೆಚ್ಚೆಚ್ಚು ಪ್ರಮಾಣದಲ್ಲಿ ಕಡಿಮೆಯಾಗುತ್ತಾ ಬರುತ್ತಿದೆ.

ಈ ಐದನೇ ಯಾತ್ರೆಯ ನಿಜ ಉದ್ದೇಶದ ಬಗ್ಗೆ ಆರಂಭದಿಂದಲೂ ಸಂದೇಹ ಇದ್ದೇ ಇತ್ತು. ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ನೆನಪಿಗೆ ಈ ಯಾತ್ರೆ ಎಂದು ಹೇಳಿಕೊಂಡು ಸ್ವಾತಂತ್ರ್ಯ ಹೋರಾಟದ ಪರಂಪರೆ ತನ್ನದು ಎಂದು ಬಿಂಬಿಸುವ ಅದರ ಪ್ರಯತ್ನ ಸಫಲವಾಗಿಲ್ಲ. ಈ ಯಾತ್ರೆ ಆರಂಭವಾಗುವ ಮೊದಲೇ ಬಿಜೆಪಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತನಾಡುವುದೇ ಎಂದು ಜನ ಹುಬ್ಬೇರಿಸುವಂತಾಗಿತ್ತು. ಏಕೆಂದರೆ ಈ ಬಿಜೆಪಿ ಅಥವಾ ಅದರ ಪೂರ್ವಜ ಸಂಸ್ಥೆಗಳು ಎಂದೂ ಸ್ವಾತಂತ್ರ್ಯ ಆಂದೋಲನದ ಭಾಗವಾಗಿರಲಿಲ್ಲ. ಬಿಜೆಪಿಯ ಗುರು ಆರ್.ಎಸ್.ಎಸ್. ಅಂತೂ ನಿಜವಾಗಿ ಸ್ವಾತಂತ್ರ್ಯ ಹೋರಾಟದ ವಿರುದ್ಧ ನಿಂತು ಬ್ರಿಟೀಷರಿಂದ ಸಾಕಷ್ಟು ರಿಯಾಯ್ತಿಗಳನ್ನು ಗಿಟ್ಟಿಸಿಕೊಂಡ ಸಂಸ್ಥೆ. 1942 ರ ಕ್ವಿಟ್ ಇಂಡಿಯಾ ಆಂದೋಲನದ ವೇಳೆಗೆ ಬ್ರಿಟಿಷ್ ಸರಕಾರದ ಮುಂಬೈ ಗೃಹ ಇಲಾಖೆಯ ಈ ಟಿಪ್ಪಣಿ ನೋಡಿ "ಈ ಸಂಘ ಬಹಳ ಮುತುವರ್ಜಿಯಿಂದ ತನ್ನನ್ನು ಕಾನೂನಿನ ಪರಿಧಿಯೊಳಗ ಇಟ್ಟುಕೊಂಡಿದೆ. ವಿಶೇಷವಾಗಿ ಆಗಸ್ಟ್ 1942 ರಲ್ಲಾದ ಗಲಭೆಗಳಿಂದ ತನ್ನನ್ನು ದೂರವಿರಿಸಿಕೊಂಡಿದೆ"

ತನ್ನ ಕೋಮುವಾದಿ ಕಾರ್ಯಕ್ರಮಕ್ಕೆ ಅನುಗುಣವಾಗಿ ಸ್ವಾತಂತ್ರ್ಯ ಹೋರಾಟದಾದ್ಯಂತ ಆರ್.ಎಸ್.ಎಸ್. ಬ್ರಿಟೀಷರ ವಿರುದ್ಧ ಕ್ರೋಧಕ್ಕಿಂತ ಮುಸ್ಲಿಮರ ವಿರುದ್ಧ ದ್ವೇಷ ಹರಡಿಸುವುದರಲ್ಲೇ ಹೆಚ್ಚು ಮುತುವರ್ಜಿ ತೋರಿಸಿತು. ಏಕೆಂದರೆ ಜನಗಳನ್ನು ಒಗ್ಗಟ್ಟಾಗಿಸುವುದು ಅದರ 'ಹಿಂದೂ ರಾಷ್ಟ್ರ' ಸಿದ್ಧಾಂತಕ್ಕೆ ಸಾಧ್ಯವಾಗಿರಲಿಲ್ಲ. ಇಡೀ ಭಾರತ ದೇಶ ಬ್ರಿಟಿಷರ ವಿರುದ್ಧ ಸಟೆದು ನಿಂತಿದ್ದಾಗ ಬ್ರಿಟಿಷ್-ವಿರೋಧಿ ಭಾವನೆಗಳಿಂದಾಗಿ ಹಿಂದೂ-ಮುಸಲ್ಮಾನ ಇತ್ಯಾದಿ ಭೇದ-ಭಾವಗಳಿಲ್ಲದೆ ಒಗ್ಗಟ್ಟಾದ ಸ್ವಾತಂತ್ರ್ಯ ಆಂದೋಲನ ಹೆಚ್ಚೆಚ್ಚು ಬಲಿಷ್ಠವಾಗುತ್ತಿದ್ದ ಸಮಯವದು. ಅಂತಹ ಸಮಯದಲ್ಲಿ ಆ ಆಂದೋಲನದ ಮುಖಂಡರೂ, ಸ್ವತಃ ಅತ್ಯುನ್ನತ ದೈವಭಕ್ತ ಹಿಂದು ಕೂಡಾ ಆಗಿದ್ದ ಮಹಾತ್ಮಗಾಂಧಿಯವರನ್ನು ಕೊಲೆ ಮಾಡಲಾಯಿತು. ಏಕೆ? ಏಕೆಂದರೆ ಅವರು ಹಾಗೂ ಇತರ ಬಹುಪಾಲು ಭಾರತೀಯ ಜನರು ಆಗಿನ ಮತ್ತು ಈಗಿನ ಆರ್.ಎಸ್.ಎಸ್ ನ ಹಿಂದೂ ರಾಷ್ಟ್ರ ಸಿದ್ಧಾಂತವನ್ನು ತಿರಸ್ಕರಿಸಿ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಅಂಗೀಕರಿಸಿದ್ದರು.

ಆದ್ದರಿಂದ ಬಿಜೆಪಿ ತಾನು ಯಾವುದಾದರೂ ಪರಂಪರೆಯ ವಾರಸುದಾರ ಎಂದು ಹೇಳಿಕೊಳ್ಳಬಹುದಾದರೆ ಅದು ಈ ರಕ್ತಸಿಕ್ತ, ಕೋಮುವಿಷ ಪ್ರಚಾರದ ಪರಂಪರೆಯಷ್ಟೆ. ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ತಾನು ಮುಂದುವರೆಸುತ್ತಿದ್ದೇನೆಂಬ ಅದರ ಮಾತಿಗಿಂತ ದೊಡ್ಡ ದ್ರೋಹ, ಸುಳ್ಳು ಬೇರೊಂದಿಲ್ಲ.

> ***ಬಿಜೆಪಿ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಮುಂದುವರಿಸುತ್ತಿದೆಯೆಂದು ಬಿಂಬಿಸಲು ಅಡ್ವಾಣಿಯವರ ಐದನೇ ಯಾತ್ರೆ ಪ್ರಯತ್ನಿಸಿತು. ಆದರೆ ಇದಕ್ಕಿಂತ ದೈತ್ಯಾಕಾರದ ಸುಳ್ಳು ಬೇರೊಂದಿಲ್ಲ. ಬಿಜೆಪಿ ತಾನು ಯಾವುದಾದರೂ ಪರಂಪರೆಯ ವಾರಸುದಾರ ಎಂದು ಹೇಳಿಕೊಳ್ಳಬಹುದಾದರೆ ಅದು ರಕ್ತಸಿಕ್ತ ಕೋಮುವಿಷ ಪ್ರಚಾರದ ಪರಂಪರೆಯಷ್ಟೆ. ಏಕೆಂದರೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅದರ ಗುರು ಆರ್.ಎಸ್.ಎಸ್. ಗೆ ಬ್ರಿಟೀಷರನ್ನು ಹೊಡೆದೋಡಿಸುವುದು ಮುಖ್ಯವಾಗಿರಲಿಲ್ಲ, ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷ ಹರಡುವುದೇ ಮುಖ್ಯವಾಗಿತ್ತು ಎಂದಿದೆ ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ"ಯ ಸಂಪಾದಕೀಯ. ಆ ಸಂಪಾದಕೀಯದ ಕನ್ನಡ ಅನುವಾದವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.***

ಶ್ರೀಯುತ ಅಡ್ವಾಣಿಯವರ ರಥದಲ್ಲೂ ಮಹಾತ್ಮಗಾಂಧಿ ಮತ್ತು ಇತರ ಆಧುನಿಕ ಭಾರತದ ಸ್ಥಾಪಕರ ಭಾವಚಿತ್ರಗಳು ಅಲಂಕರಿಸಿದ್ದು ನಿಜಕ್ಕೂ ಒಂದು ಅತಿದೊಡ್ಡ ಅವಮಾನ. ಏಕೆಂದರೆ ಈ ಎಲ್ಲಾ ಮಹಾನ್ ನೇತಾರರು ಎತ್ತಿ ಹಿಡಿದ ಜಾತ್ಯಾತೀತ ಪ್ರಜಾಪ್ರಭುತ್ವವೇ ಇಂದು ಬಿಜೆಪಿಯ ಧಾಳಿಗಳ ಮುಖ್ಯ ಗುರಿ. ಸೈದ್ಧಾಂತಿಕವಾಗಿ ಬಿಜೆಪಿ ಸ್ವಾತಂತ್ರ್ಯ ಆಂದೋಲನದ ಸಿದ್ಧಾಂತಗಳಿಗೆ ತದ್ವಿರುದ್ಧವಾದ ಸಿದ್ಧಾಂತ.

ಶ್ರೀಯುತ ಅಡ್ವಾಣಿಯವರ ರಥದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಭಾವಚಿತ್ರವೂ ಇತ್ತು. ಈ ರಥ ದಿಲ್ಲಿಯತ್ತ ಹೊರಳುತ್ತಿದ್ದಾಗ ಅತ್ತ ಮಹಾರಾಷ್ಟ್ರದಲ್ಲಿ ಬಿಜೆಪಿ ಉಪಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಹದಗೆಡುತ್ತಿದ್ದ ಕಾನೂನು ವ್ಯವಸ್ಥೆಯ ಉಸ್ತುವಾರಿ ನಡೆಸುತ್ತಿದ್ದರು. ಮುಂಬೈಯಲ್ಲಿ ಅಂಬೇಡ್ಕರ್ ಪ್ರತಿಮೆಗಾದ ಅವಮಾನವನ್ನು ಪ್ರತಿಭಟಿಸುತ್ತಿದ್ದ ದಲಿತರ ಮೇಲೆ ವ್ಯಾಪಕ ಪ್ರಮಾಣದ ಧಾಳಿ, ಹಿಂಸಾಚಾರ ನಡೆಯುತ್ತಿತ್ತು.

ಬಿಜೆಪಿಯ ಈ ಎಲ್ಲಾ ಗೋಸುಂಬೆತನ ಅಧಿಕಾರಕ್ಕೆ ತಾನೊಂದು ಗಂಭೀರ ಸ್ಪರ್ಧಿ ಎಂದು ದೇಶಬಾಂಧವರಿಗೆ ತೋರಿಸುವ ಅದರ ಆತುರದಿಂದಾಗಿ ಎಂಬುದು ಸ್ಪಷ್ಟ. ಬೇಗನೇ ಚುನಾವಣೆ ನಡೆಯಬಹುದು, ಅದಕ್ಕೆ ಸಿದ್ಧವಾಗಬೇಕು ಎಂಬ ಅದರ ಆತುರದ ನಡುವೆಯೂ ಅದರ ಆತ್ಮವಿಶ್ವಾಸದ ಕೊರತೆಯೂ ಎದ್ದು ಕಾಣುತ್ತಿದೆ. ಏಕೆಂದರೆ ಈಗ ಬಿಜೆಪಿ ಅಧ್ಯಕ್ಷರು ತಾನೇ ಏಕಾಂಗಿಯಾಗಿ ಬಹುಮತ ಪಡೆಯುವ ಬಗ್ಗೆ ಮಾತನಾಡುತ್ತಿಲ್ಲ. ಸಮಾನ ಮನಸ್ಕ ಪಕ್ಷಗಳೊಂದಿಗೆ ಮೈತ್ರಿಕೂಟದ ಲೆಕ್ಕದಲ್ಲೇ ಮಾತನಾಡುತ್ತಿದ್ದಾರೆ. 1996 ರಲ್ಲಿ ಅಧಿಕಾರ ಗಿಟ್ಟಿಸಲು ಗಂಭೀರ ಪ್ರಯತ್ನ ನಡೆಸಿದ ನಂತರ, 13 ದಿನಗಳ ಅಲ್ಪಾಯುಷಿ ಸರಕಾರದ ಅನುಭಗಳಿಂದಾಗಿ ಇತರರ ಬೆಂಬಲವಿಲ್ಲದೆ ತಾನು ಆಳುವ ಪಕ್ಷವಾಗುವ ಕನಸು ಕಾಣುವಂತಿಲ್ಲವೆಂಬುದರ ಅರಿವು ಈಗ ಅದಕ್ಕಾಗಿದೆ. ಇದರಿಂದಾಗಿಯೇ 1989 ರಲ್ಲಿ ಶ್ರೀಯುತ ಅಡ್ವಾಣಿಯವರು ಹರಡಿದ ವಿಷ ಈ ಬಾರಿ ದುರ್ಬಲಗೊಂಡಿತ್ತು. ಕೇವಲ ಉತ್ತರ ಪ್ರದೇಶದಲ್ಲಿ, ಅದೂ ಆ ರಥ ಅಯೋಧ್ಯೆಯ ಬಳಿ ಬಂದಾಗ ಮಾತ್ರ 1989 ರ ಕಾವು ಕಂಡಿತ್ತು.


ನಿಜ, ಬಿಜೆಪಿಯ ಇಂತಹ ಪ್ರಯತ್ನಗಳಿಗ್ಗೆ ಸೋಲು ಖಂಡಿತ. ಏಕೆಂದರೆ ಬಿಜೆಪಿಯ ಏಕಘಟಕ, ಅಖಂಡ ಹಿಂದೂ ರಾಷ್ಟ್ರದ ಪರಿಕಲ್ಪನೆ ಪ್ರಾದೇಶಿಕ ಪಕ್ಷಗಳು ಬಿಂಬಿಸುತ್ತಿರುವ ಭಾರತದ ಬಹುರೂಪತೆ ಹಾಗೂ ಒಕ್ಕೂಟ ಸ್ವರೂಪಕ್ಕೆ ಸಂಪೂರ್ಣ ವಿರುದ್ಧವಾದದ್ದು. ಭಾರತದ ಐಕ್ಯತೆಯನ್ನು ಅದರ ಭಿನ್ನತೆಯಲ್ಲಿನ ಸಮಾನ ಅಂಶಗಳ ಮೇಲೆ ಒತ್ತು ನೀಡುವುದರಿಂದ ಮಾತ್ರ ಕಾಪಾಡಿಕೊಳ್ಳಲು ಹಾಗೂ ಬಲಪಡಿಸುವುದು ಸಾಧ್ಯ. ಆದರೆ ಬಿಜೆಪಿ ಬಯಸುವುದೇ ಬೇರೆ. ಅದು ಭಾರತದ ಭಿನ್ನತೆಯನ್ನೇ ನಿರಾಕರಿಸಿ ಏಕರೂಪತೆಯನ್ನು ಹೇರಬಯಸುತ್ತದೆ. ಆದ್ದರಿಂದ ತನ್ನ ಕೋಮುವಾದಿ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಅದಕ್ಕೆ ದೀರ್ಘಕಾಲದ ಮಿತ್ರರು ಸಿಗುತ್ತಿಲ್ಲ.

ಆದರೆ ಬಿಜೆಪಿಯ ಈ ಎಲ್ಲಾ ಕಸರತ್ತುಗಳು, ಅದರ ಕರ್ಕಶ ಕೋಮುವಾದಿ ಪ್ರಚಾರ ಇವೆಲ್ಲಾ ಏನೂ ಪರಿಣಾಮ ಬೀರವು ಎಂದು ನಿರ್ಲಕ್ಷಿಸುವುದೂ ಸಲ್ಲ. ಚುನಾವಣೆಗಳ ಸಾಧ್ಯತೆ ಸಮೀಪಿಸಲಾರಂಭಿಸಿದಂತೆ ಬಿಜೆಪಿ ಮತ್ತೆ ಕೋಮು ವಿಷ ಹರಡುವ ದಾರಿಯನ್ನೇ ಹಿಡಿಯುತ್ತದೆ. ಆ ಮೂಲಕ ದೇಶದ ಐಕ್ಯತೆಗೆ ಗಂಡಾಂತರ ತಂದು ಆಧುನಿಕ ಭಾರತದ ಅಡಿಗಲ್ಲುಗಳಾದ ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ಸ್ವರೂಪವನ್ನೇ ಹಾಳುಗೆಡವುತ್ತದೆ.

ಭಾರತ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವವನ್ನು ಆಚರಿಸಿ - ಕಾರ್ಮಿಕರಿಗೆ ಸಿಐಟಿಯು ಕರೆ

ಭಾರತ ಸ್ವಾತಂತ್ರ್ಯದ ಸ್ವರ್ಣಜಯಂತಿಯನ್ನು ಆಚರಿಸಬೇಕೆಂದು ಸಿಐಟಿಯು ಎಲ್ಲಾ ಕಾರ್ಮಿಕರಿಗೆ ಕರೆ ನೀಡಿದೆ. ಇದರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗದ ಚಾರಿತ್ರಿಕ ಪಾತ್ರವನ್ನು ಒತ್ತಿ ಹೇಳಬೇಕು, ಭಾರತದ ಸ್ವಾತಂತ್ರ್ಯದ ಮಹತ್ವ, ಸಾಮ್ರಾಜ್ಯಶಾಹಿಗಳು, ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ನಡೆಸಿರುವ ಸರ್ವತೋಮುಖ ಧಾಳಿಯ ಸಂದರ್ಭದಲ್ಲಿ ಅದನ್ನು ಉಳಿಸಿಕೊಳ್ಳುವ ಅವಶ್ಯಕತೆಯನ್ನು ವಿವರಿಸಬೇಕು ಎಂದಿರುವ ಸಿಐಟಿಯು ಸ್ವಾತಂತ್ರ್ಯ ಹೋರಾಟದ ಸಾಮ್ರಾಜ್ಯಶಾಹಿ-ವಿರೋಧಿ ಪರಂಪರೆಯನ್ನು ಮುಂದುವರಿಸಬೇಕು ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಸ್ವಾತಂತ್ರ್ಯದ ಸ್ವರ್ಣ ಜಯಂತಿ ವರ್ಷದಲ್ಲಿ ವಿಚಾರ ಸಂಕಿರಣಗಳನ್ನು, ಸಮಾವೇಶಗಳನ್ನು ಮತ್ತಿತರ ಸೂಕ್ತ ಸಮಾರಂಭಗಳನ್ನು ಸಿಐಟಿಯು ರಾಜ್ಯ ಸಮಿತಿಗಳು ಹಾಗೂ ಸಂಬಂಧಪಟ್ಟ ಕಾರ್ಮಿಕ ಸಂಘಗಳು ಏರ್ಪಡಿಸಲಿವೆ.

ಕಾಂ.ಸೂರಿ ಹವಾನಾಕ್ಕೆ



ಕರ್ನಾಟಕದ ಹಿರಿಯ ಕಾರ್ಮಿಕ ಮುಂದಾಳು ಹಾಗೂ ಸಿಐಟಿಯುನ ರಾಜ್ಯ ಅಧ್ಯಕ್ಷರಾದ ಎಸ್.ಸೂರ್ಯನಾರಾಯಣ ರಾವ್ ಕ್ಯೂಬಾದಲ್ಲಿ ನಡೆಯಲಿರುವ ಒಂದು ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತದ ಒಬ್ಬ ಪ್ರತಿನಿಧಿಯಾಗಿ ಭಾಗವಹಿಸಲು ಜುಲೈ 31ರಂದು ದೆಹಲಿ ಮೂಲಕ ಕ್ಯೂಬಾದ ರಾಜಧಾನಿ ಹವಾನಾಕ್ಕೆ ತೆರಳಿದರು.

ಕ್ಯೂಬನ್ ಕಾರ್ಮಿಕ ಸಂಘಗಳ ಮುತುವರ್ಜಿಯಿಂದ ಹವಾನಾದಲ್ಲಿ ಆಗಸ್ಟ್ 6ರಿಂದ 8ರವರೆಗೆ ಜಾಗತೀಕರಣ ಮತ್ತು ಉದಾರೀಕರಣದ ವಿರುದ್ಧ ಒಂದು ಅಂತರ್ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಭಾರತದ ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು ಕೂಡಾ ಕ್ಯೂಬಾದ ಕಾರ್ಮಿಕ ಸಂಘಗಳ ಆಹ್ವಾನದ ಮೇರೆಗೆ ಸಮ್ಮೇಳನದ ಸಂಘಟಕರಲ್ಲಿ ಒಂದಾಗಿದೆ. ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರೂ ಆದ ಎಸ್.ಸೂರ್ಯನಾರಾಯಣರಾವ್ ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ.

ಸಾಮ್ರಾಜ್ಯಶಾಹಿಗಳು ಹಾಗೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರು ಜಾಗತೀಕರಣ ಹಾಗೂ ಉದಾರೀಕರಣದ ಹೆಸರಲ್ಲಿ ಕಾರ್ಮಿಕರ ಶೋಷಣೆಗೆ ಹೊಸ ತೀವ್ರ ರೂಪ ಕೊಡುತ್ತಿರುವುದರ ವಿರುದ್ಧ ಭಾರತ, ಕ್ಯೂಬಾಗಳಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮಾತ್ರವಲ್ಲ, ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲೂ ಕಾರ್ಮಿಕ ವರ್ಗ ತೀವ್ರ ಪ್ರತಿಭಟನೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಹವಾನಾದಲ್ಲಿನ ಈ ಅಂತರ್ರಾಷ್ಟ್ರೀಯ ಪ್ರಯತ್ನ ಒಂದು ಮೈಲಿಗಲ್ಲಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಈ ಪ್ರಮುಖ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿರುವ ಸೂರಿಯವರಿಗೆ ಬೆಂಗಳೂರಿನ ಕಾರ್ಮಿಕ ವರ್ಗ ಜುಲೈ 29ರಂದು ಮೈಕೋ ಕಾರ್ಮಿಕರ ನೇತೃತ್ವದಲ್ಲಿ ನಡೆದ ಸಮಾರಂಭವೊಂದರಲ್ಲಿ ಹಾರ್ದಿಕ ಬೀಳ್ಕೊಡುಗೆ ನೀಡಿತು. ಮೈಕೋ ನೌಕರರ ಸಂಘದ ಕಾರ್ಯದರ್ಶಿ ಟಿ.ಶಿವಶಂಕರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸಿಐಟಿಯು ಮುಖಂಡರಾದ ಆರ್. ಶ್ರೀನಿವಾಸ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಮತ್ತಿತರ ಹಲವು ಕಾರ್ಮಿಕ ಮುಖಂಡರು ಈ ಸಮ್ಮೇಳನದ ಅಂತರ್ರಾಷ್ಟ್ರೀಯ ಮಹತ್ವವನ್ನು ಒತ್ತಿಹೇಳುತ್ತಾ ಕಾಂ.ಸೂರಿಯವರಿಗೆ ರಾಜ್ಯದ ಕಾರ್ಮಿಕ ವರ್ಗದ ಪರವಾಗಿ ಶುಭಾಶಯಗಳನ್ನು ಕೋರಿದರು

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ ಸರಕಾರದ ವಿರುದ್ಧ ಮತ ನೀಡಲು ಎಡಪಕ್ಷಗಳ ನಿರ್ಧಾರ

ಎಡಪಕ್ಷಗಳಿಗೆ ಸೇರಿದ ಸಂಸತ್ ಸದಸ್ಯರು ಸರಕಾರ ಸಂಸತ್ತಿನಲ್ಲಿ ಮಂಡಿಸಿದ ವಿಮಾ ನಿಯಂತ್ರಣ ಪ್ರಾಧಿಕಾರ (ಐಆರ್‌ಎ) ಮಸೂದೆಯನ್ನು ವಿರೋಧಿಸಿ ಅದರ ವಿರುದ್ಧ ಮತ ನೀಡಲು ನಿರ್ಧರಿಸಿದ್ದಾರೆ. ಈ ಮಸೂದೆ ವಿದೇಶೀಕಂಪನಿಗಳಿಗೆ ಲೈಸೆನ್ಸ್ ನೀಡಿ ಅವು ವಿಮಾ ವಲಯವನ್ನು ಪ್ರವೇಶಿಸಲು ಅವಕಾಶ ನೀಡುತ್ತದೆ. ಇದು ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದ ಒಂದು ಕ್ರಮ ಎಂದಿರುವ ಎಡಪಕ್ಷಗಳ ಎಂ.ಪಿ.ಗಳ ಒಂದು ಹೇಳಿಕೆ ಇತರರೂ ಈ ಅಪಾಯವನ್ನು ಮನಗಂಡು ಸರಕಾರದ ಈ ಪ್ರಯತ್ನವನ್ನು ವಿಫಲಗೊಳಿಸಬೇಕು ಎಂದು ಕರೆ ನೀಡಿದೆ.

ಎಸ್.ರಾಮಚಂದ್ರಪಿಳ್ಳೆ, ಇ.ಬಾಲಾನಂದನ್, ಗೀತಾ ಮುಖರ್ಜಿ, ಗುರುದಾಸ್ ದಾಸ್ ಗುಪ್ತಾ, ಚಿತ್ತಬಸು, ಬಸುದೇವ ಆಚಾರ್ಯ, ಬಿಪ್ಲವ್ ದಾಸ್‌ಗುಪ್ತಾ, ಪ್ರಮತೇಶ್ ಮುಖರ್ಜಿ, ಅಮರ್ ರಾಯ್ ಪ್ರಧಾನ್, ಸನತ್ ಕುಮಾರ್ ಮಂಡಲ್, ಬಿ.ಪಿ.ರಾಘವನ್, ಜಲಾಲುದ್ದೀನ್ ಅನ್ಸಾರಿ, ಶತ್ರುಘ್ನ ಪ್ರತಾಪ್ ಸಿಂಗ್ ಹಾಗೂ ಅಜಯ್ ಚಕ್ರವರ್ತಿ ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಈ ನಡುವೆ ವಿಮಾ ನೌಕರರು ದೇಶಾದ್ಯಂತ ಜುಲೈ 29ರಂದು ಈ ಮಸೂದೆಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಎರಡು ಗಂಟೆಗಳ ಮುಷ್ಕರ ನಡೆಸಿದರು.

ಜುಲೈ 24 ರಂದು ಬೆಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ ಮತ್ತು ಇತರ ಎಂಟು ಮಹಿಳಾ ಸಂಘಟನೆಗಳು ಜತೆಗೂಡಿ ಈ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು ಎಂದು ಒತ್ತಾಯಿಸಿ ರಾಜಭವನ ಚಲೋ ನಡೆದ ಸಂದರ್ಭದ ಒಂದು ಚಿತ್ರ.



ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯ



ಅದು ರಾಂಗ್ ನಂಬರ್, ಯಾರೋ ಇಂದರ್ ಗುಜರಾಲ್ ಅಂತೆ ಅವರು ಪ್ರಧಾನ ಮಂತ್ರಿಯಂತೆ!

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ ವಿ. ರಾಮಚಂದ್ರರಾವ್ ಸಂಪಾದಕರು: ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು